ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 5 ಭಾನುವಾರ 2023

43

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 315 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಮೆದುಳು ನಿಷ್ಕ್ರಿಯಗೊಂಡ ಯುವಕರ ಅಂಗಾಂಗ ದಾನ

17 ವರ್ಷದ ಆಕಾಶ್ ಅಪೋಲೋ ಬಿಜಿಎಸ್ ಆಸ್ಪತ್ರೆಯ ಅತ್ಯಂತ ಕಿರಿಯ ಅಂಗಾಂಗ ದಾನಿ


ಆಕಾಶ್


ಮಣಿ

ಮೈಸೂರು, ಮಾ.4(ಜಿಎ)–ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯವಾಗಿದ್ದ ಮೈಸೂರಿನ ಆಕಾಶ್(17) ಮತ್ತು ಚಾಮರಾಜನಗರದ ಮಣಿ(27) ಅವರ ಅಂಗಾಂಗಗಳನ್ನು ಅವರ ಕುಟುಂಬಸ್ಥರು ದಾನ ಮಾಡಿದ್ದಾರೆ.

ಮೈಸೂರಿನ ಆಕಾಶ್ ಫೆ.25 ರಂದು ನಗರದ ರಾಜ್‌ಕುಮಾರ್ ರಸ್ತೆಯಲ್ಲಿ ನಡೆದ ರಸ್ತೆ ಅಪಘಾತ ಹಾಗೂ ಚಾಮರಾಜನಗರದ ಮಣಿ ಫೆ.25ರಂದು ಚಾಮರಾಜನಗರದಲ್ಲಿ ನಡೆದ ಅಪಘಾತದಲ್ಲಿ ತಲೆಗೆ ಗಂಭೀರ ಗಾಯವಾಗಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ನಂತರ ನಗರದ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕರೆತರಲಾಗಿತ್ತು. ಆಕಾಶ್ ಆಸ್ಪತ್ರೆಗೆ ದಾಖಲಿಸಿದ ಆರಂಭದಲ್ಲಿಯೇ ಸಿಟಿ ಸ್ಕ್ಯಾನ್ ಮೂಲಕ ಪರೀಕ್ಷಿಸಿದಾಗ ಮೆದುಳಿನ ಕಾಂಡ ಊದಿಕೊಂಡಿತ್ತು. ತಕ್ಷಣ ಅವರನ್ನು ಜೀವ ಬೆಂಬಲ ಮತ್ತು ತುರ್ತು ಆರೈಕೆಗಾಗಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಯಿತು. ಆಕಾಶ್ ಸ್ಥಿತಿ ಚಿಂತಾಜನಕವಾಗಿದ್ದು, ಆಸ್ಪತ್ರೆಯ ತಜ್ಞ ವೈದ್ಯರ ತಂಡವು ಫೆ.28ರಂದು ರಾತ್ರಿ 11.30ಕ್ಕೆ ಅವರ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ಘೋಷಿಸಿದರು.

ಹೆಚ್ಚಿನ ಪರೀಕ್ಷೆ ನಡೆಸಿದ ಸಂದರ್ಭದಲ್ಲಿ ಆಕಾಶ್ ಅಂಗಾಂಗಗಳು ದಾನಕ್ಕೆ ಸೂಕ್ತವೆಂದು ದೃಢಪಟ್ಟಿದೆ. ಮಾರ್ಗಸೂಚಿಯ ಪ್ರಕಾರ ಅಂಗಾಂಗ ದಾನದ ಕುರಿತು ಕುಟುಂಬ ಸದಸ್ಯರಿಗೆ ಮಾಹಿತಿ ನೀಡಲಾಗಿದೆ. ಅದಕ್ಕೆ ಅವರು ಒಪ್ಪಿಗೆ ಸೂಚಿಸಿದ್ದು, ಅವರ ಅನುಮತಿ ನಂತರ ಆಕಾಶ್ ಅಂಗಾಂಗಗಳನ್ನು (ಎರಡು ಮೂತ್ರಪಿಂಡಗಳು, ಒಂದು ಯಕೃತ್ತು, ಹೃದಯ ಕವಾಟಗಳು ಮತ್ತು ಕಾರ್ನಿಯಾಗಳು) ಬೇರ್ಪಡಿಸಿ, ಕ್ರಾಸ್ ಕ್ಯಾಂಪ್ ಪ್ರಕ್ರಿಯೆಯ ಮೂಲಕ ಅಂಗಾಂಗಗಳನ್ನು ಕಸಿ ಮಾಡಲಾಗಿದೆ. ಯಕೃತ್ತು ಮತ್ತು ಎಡ ಮೂತ್ರಪಿಂಡವನ್ನು ಅಪೋಲೋ ಬಿಜಿಎಸ್ ಆಸ್ಪತ್ರೆಗೆ, ಬಲ ಮೂತ್ರಪಿಂಡವನ್ನು ಮೈಸೂರಿನ ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ, ಹೃದಯ ಕವಾಟಗಳನ್ನು ಬೆಂಗಳೂರಿನ ಎನ್‌ಎಚ್ ಆಸ್ಪತ್ರೆ ಹಾಗೂ ಕಾರ್ನಿಯಾಗಳನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾನ ಮಾಡುವ ಮೂಲಕ ಆಕಾಶ್ ಅಪೋಲೋ ಆಸ್ಪತ್ರೆಯ ಅತ್ಯಂತ ಕಿರಿಯ ಅಂಗ ದಾನಿಯಾಗಿದ್ದಾರೆ.

ಚಾಮರಾಜನಗರದ ಮಣಿ(27)ಯೂ ಫೆ.25 ರಂದು ನಡೆದ ರಸ್ತೆ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು, ಅವರ ಕುಟುಂಬಸ್ಥರು ಅವರನ್ನು ಮೈಸೂರು ಹಾಗೂ ಬೆಂಗಳೂರಿನ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಮುಂದಾಗಿದ್ದು, ಅಲ್ಲಿ ಯಾವುದೇ ಪ್ರಯೋಜನವಾಗದೇ ಅಂತಿಮವಾಗಿ ಅವರನ್ನು ಮೈಸೂರು ಅಪೊಲೋ ಬಿಜಿಎಸ್ ಆಸ್ಪತ್ರೆಗೆ ದಾಖಸಲಾಗಿತ್ತು. ಮಣಿಯ ಮೆದುಳು ನಿಷ್ಕ್ರಿಯಗೊಂಡಿರುವುದನ್ನು ಖಚಿತಪಡಿಸಿದ ವೈದ್ಯರು ಮಾರ್ಗಸೂಚಿಯ ಪ್ರಕಾರ ಅಂಗಾಂಗ ದಾನ ಕುರಿತು ಕುಟುಂಬ ಸದಸ್ಯರಿಗೆ ಸಲಹೆ ನೀಡಿದ್ದರು. ಅವರ ಕುಟುಂಬವು ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿದ್ದು, ಮೈಸೂರಿನ ಬಿಜಿಎಸ್ ಆಸ್ಪತ್ರೆಯಿಂದ ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಮೈಸೂರು ಪೊಲೀಸರ ಸಹಾಯದೊಂದಿಗೆ ಗ್ರೀನ್ ಕಾರಿಡಾರ್ ನಿರ್ಮಿಸಿ ಹೃದಯ ರವಾನೆ ಮಾಡಲಾಯಿತು.

ಮಣಿ ಅವರ ಉಳಿದ ಅಂಗಾಂಗಗಳನ್ನು (ಎರಡು ಮೂತ್ರಪಿಂಡ, ಲಿವರ್ ಮತ್ತು ಕಾರ್ನಿಯಾಗಳು) ಬೇರ್ಪಡಿಸಿ, ಕ್ರಾಸ್ ಕ್ಯಾಂಪ್ ಪ್ರಕ್ರಿಯೆಯ ಮೂಲಕ ಕಸಿ ಮಾಡಿ, ನಂತರ ಮಾರ್ಗಸೂಚಿಯ ಪ್ರಕಾರ ಲಿವರ್ ಅನ್ನು ಅಪೋಲೋ ಬಿಜಿಎಸ್ ಆಸ್ಪತ್ರೆ, ಎರಡು ಮೂತ್ರಪಿಂಡಗಳನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮತ್ತು ಕಾರ್ನಿಯಾಗಳನ್ನು ಕೆ.ಆರ್. ಆಸ್ಪತ್ರೆಗೆ ರವಾನಿಸಲಾಯಿತು.

ಮುಂಬೈ ಒಲಂಪಿಕ್ಸ್ ಸೈಲಿಂಗ್ ತರಬೇತಿಗೆ ಶ್ರೀರಂಗಪಟ್ಟಣದ ಇಬ್ಬರು ಯುವತಿಯರು ಆಯ್ಕೆ

ಪಾಂಡವಪುರದ ಯಶ್ವಂತ್ ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ತರಬೇತುದಾರ

ಮೈಸೂರು, ಮಾ.4(ಆರ್‌ಕೆ)– ಮುಂಬೈ ಒಲಂಪಿಕ್ಸ್ ಸೈಲಿಂಗ್ ತರಬೇತಿಗೆ ಶ್ರೀರಂಗಪಟ್ಟಣದ ಎನ್‌ಸಿಸಿ ಕೆಡೆಟ್‌ಗಳಾದ ಪೂಜಾ ಮತ್ತು ಅಪೂರ್ವ ಆಯ್ಕೆಯಾಗಿದ್ದಾರೆ ಎಂದು ರಾಯಲ್ ಮೈಸೂರು ಸೈಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ) ಸಂಸ್ಥಾಪಕ ಕ್ಯಾಪ್ಟನ್ ಅರವಿಂದ ಶರ್ಮ ತಿಳಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬೈನ ಇಂಡಿಯನ್ ನೇವಲ್ ವಾಟರ್‌ಮನ್‌ಶಿಪ್ ಟ್ರೈನಿಂಗ್ ಸೆಂಟರ್ (ಐಎನ್‌ಡಬ್ಲ್ಯುಟಿಸಿ)ನಲ್ಲಿ ತರಬೇತಿ ಪಡೆಯಲಿರುವ ಶ್ರೀರಂಗಪಟ್ಟಣದ ಅಪೂರ್ವ ಮತ್ತು ಪೂಜಾರನ್ನು ಒಲಂಪಿಕ್ಸ್ ಮತ್ತು ಪ್ರಪಂಚದ ಇನ್ನಿತರ ಚಾಂಪಿಯನ್‌ಶಿಪ್‌ಗೆ ಕಳುಹಿಸುವ ಉದ್ದೇಶವಿದೆ ಎಂದರು. ಅದೇ ರೀತಿ ಸೈಲಿಂಗ್‌ನಲ್ಲಿ ತರಬೇತಿ ಪಡೆದು, ಈಗಾಗಲೇ ಪರಿಣತಿ ಹೊಂದಿರುವ ಪಾಂಡವಪುರದ ಯಶ್ವಂತ್ ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ವೈಎಐ) ತರಬೇತುದಾರನಾಗಲು ಅರ್ಹರಾಗಿದ್ದಾರೆ. ಈ ಮೂವರು ಸಾಧಕರಿಗೆ ತಮ್ಮ ಕ್ಲಬ್ ಶುಭ ಹಾರೈಸಿ, ತರಬೇತಿಗೆ ಕಳುಹಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಯುವ ಉತ್ಸಾಹಿಗಳಿಗೆ ಸೈಲಿಂಗ್‌ನಲ್ಲಿ ತರಬೇತಿ ನೀಡಿ ಒಲಂಪಿಕ್ಸ್ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸುವ ಸಲುವಾಗಿ ರಾಯಲ್ ಮೈಸೂರು ಸೈಲಿಂಗ್ ಕ್ಲಬ್ ಕೆಆರ್‌ಎಸ್ ಹಿನ್ನೀರಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸೈಲಿಂಗ್ ಸ್ಪರ್ಧೆಗಳನ್ನು ಏರ್ಪಡಿಸುತ್ತಾ ಬಂದಿದೆ. ಇಂಡಿಯನ್ ನೇವಲ್ ವಾಟರ್ ಟ್ರೈನಿಂಗ್ ಸೆಂಟರ್ ನೇವಿಯಲ್ಲಿ ಪ್ರಮುಖ ಘಟಕವಾಗಿದ್ದು, ಸೈಲಿಂಗ್‌ನಲ್ಲಿ ಉತ್ಕೃಷ್ಟ ತರಬೇತಿ ಚಾಂಪಿಯನ್‌ಗಳನ್ನು ಸೃಷ್ಟಿಸಿ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅನುಕೂಲ ಮಾಡಿಕೊಡುತ್ತದೆ ಎಂದು ಶರ್ಮಾ ನುಡಿದರು. ಸ್ವಿಮ್ಮಿಂಗ್ ಮತ್ತು ಡೈವಿಂಗ್‌ನಲ್ಲಿ ಆಧುನಿಕ ಕೌಶಲ್ಯ ಬಳಸಿ ಐಎನ್‌ಡಬ್ಲ್ಯುಟಿಸಿ ಸಂಸ್ಥೆಯಲ್ಲಿ ತರಬೇತಿ ನೀಡಲಿದ್ದು, ಕೆನಾಯಿಂಗ್, ಯಾಚಿಂಗ್‌ನಂತಹ ಕ್ಲಿಷ್ಟಕರ ದೋಣಿಗಳಲ್ಲಿ ಸಮುದ್ರಗಳಲ್ಲಿ ತರಬೇತಿಗೆ ಶಕ್ತರಾಗುವಂತೆ ಯುವಕ–ಯುವತಿಯರನ್ನು ಅಣಿಗೊಳಿಸಲಿದೆ.

ಇದೀಗ ಇಂಡಿಯನ್ ನೇವಿ ವಿಭಾಗವೂ ಎನ್‌ಸಿಸಿಯ ಎಲ್ಲಾ ವಿಭಾಗದ ಕೆಡೆಟ್‌ಗಳಿಗೆ ಈ ಬಗೆಯ ತರಬೇತಿ ನೀಡುತ್ತಿರುವುದರಿಂದ ಪ್ರೋತ್ಸಾಹವಿಲ್ಲದೆ ಸೊರಗುತ್ತಿದ್ದ ಸೈಲಿಂಗ್ ಕ್ರೀಡೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಪರಿಣತಿ ಪಡೆದವರನ್ನು ಅಂತರರಾಷ್ಟ್ರೀಯ ಒಲಂಪಿಕ್ಸ್ ಕ್ರೀಡೆಯಲ್ಲಿ ಸ್ಪರ್ಧಿಸುವಂತೆ ಪ್ರೇರೇಪಿಸುವ ಮೂಲಕ ಈ ಕ್ರೀಡೆಗೆ ವಿಶ್ವ ಮಾನ್ಯತೆ ಬರುವಂತೆ ಮಾಡಲು ಇತರ ಸಂಘಗಳೊಂದಿಗೆ ಕೈಜೋಡಿಸುತ್ತಿರುವುದು ಗಮನಾರ್ಹ ಎಂದು ಅವರು ಇದೇ ಸಂದರ್ಭ ನುಡಿದರು.

ಎನ್‌ಸಿಸಿ, ಆರ್‌ಎಂಎಸ್‌ಸಿ, ರಾಯಲ್ ಮದ್ರಾಸ್ ಯಾಚ್ ಕ್ಲಬ್ (ಆರ್‌ಎಂವೈಸಿ), ಕರ್ನಾಟಕ ಸ್ಟೇಟ್ ಸೈಲಿಂಗ್ ಅಸೋಸಿಯೇಷನ್ (ಕೆಎಸ್‌ಎಸ್‌ಎ) ಮತ್ತು ಮುಂಬೈನ ಇಂಡಿಯನ್ ನೇವಲ್ ವಾಟರ್ ಟ್ರೈನಿಂಗ್ ಸೆಂಟರ್ ಮೂಲಕ ಭಾರತೀಯ ನೌಕಾದಳವು ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ವೈಎಐ) ಸಹಯೋಗದಲ್ಲಿ ಯುವ ಸಮೂಹಕ್ಕೆ ಸೈಲಿಂಗ್‌ನಲ್ಲಿ ಸೂಕ್ತ ತರಬೇತಿ ನೀಡಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿರುವುದರಿಂದ ಸೈಲಿಂಗ್ ಕ್ರೀಡೆಯೂ ಸಹ ಒಲಂಪಿಕ್ಸ್‌ನಂತಹ ಸ್ಪರ್ಧೆಗೆ ಭಾಗವಹಿಸುವ ಮಟ್ಟಕ್ಕೆ ಪ್ರಾಧಾನ್ಯತೆ ಪಡೆದಿದೆ ಎಂದು ಅರವಿಂದ ಶರ್ಮ ತಿಳಿಸಿದರು.

ಸೈಲಿಂಗ್ ಸ್ಪರ್ಧೆಗಳಿಗೆ ರಾಯಲ್ ಮೈಸೂರು ಸೈಲಿಂಗ್ ಕ್ಲಬ್ ಸದಸ್ಯರೂ ಆದ ಸಿದ್ಧಾರ್ಥ ಗ್ರೂಪ್ ಮಾಲೀಕ ಹಾಗೂ ಖ್ಯಾತ ಹೋಟೆಲ್ ಉದ್ಯಮಿ ಪಿ.ವಿ. ಗಿರಿ ಅವರು ನಿರಂತರವಾಗಿ ಪ್ರಾಯೋಜನೆ ನೀಡಿ ಪ್ರೋತ್ಸಾಹಿಸುತ್ತಿದ್ದಾರಲ್ಲದೆ, ಕೆ.ಆರ್.ಎಸ್. ಹಿನ್ನೀರಿನಲ್ಲಿ ಸ್ಥಳೀಯ ಗ್ರಾಮಸ್ಥರೂ ಸಹ ನಾವಿಕರಾಗಿ ತರಬೇತಿ ಪಡೆಯಲು ನೆರವಾಗಿದ್ದಾರೆ ಎಂದು ಅವರು ತಿಳಿಸಿದರು. ಪಿ.ವಿ.ಗಿರಿ, ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಕಾರ್ಯದರ್ಶಿ ಕ್ಯಾಪ್ಟನ್ ಜಿತೇಂದ್ರ ದೀಕ್ಷಿತ್, ಎನ್‌ಸಿಸಿ ಕರ್ನಾಟಕ ಮತ್ತು ಗೋವಾ ವಿಭಾಗದ ಡೆಪ್ಯುಟಿ ಡೈರೆಕ್ಟರ್ ಜನರಲ್ ಬಿ.ಎಸ್. ಕನ್ವರ್, ಇಂಡಿಯನ್ ಯಾಚಿಂಗ್ ಅಸೋಸಿಯೇಷನ್ ಸದಸ್ಯ ತರಂದೀಪ್ ಬಕ್ಷಿ, ಕ್ಯಾಪ್ಟನ್ ಜೈಸ್ವಾಲ್, ಆರ್‌ಎಂಎಸ್‌ಸಿಯ ಅಜಯ್ ಕುಮಾರ್ ಸಿಂಗ್, ಪೂಜಾ, ಅಪೂರ್ವ ಹಾಗೂ ಯಶ್ವಂತ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ಒಲಂಪಿಕ್ಸ್ ತರಬೇತಿಗೆ ಆಯ್ಕೆಯಾಗಿರುವ ಅಪೂರ್ವ (ಮುಂದಿನ ಸಾಲಿನ ಎಡತುದಿ) ಹಾಗೂ ಪೂಜಾ (ಬಲತುದಿ), ಮಧ್ಯದ ಸಾಲಿನಲ್ಲಿ ಕುಳಿತಿರುವವರು ಆರ್‌ಎಂಎಸ್‌ಸಿ ಪ್ರಮೋಟರ್ ಪಿ.ವಿ. ಗಿರಿ, ಸಂಸ್ಥಾಪಕ ಕ್ಯಾಪ್ಟನ್ ಅರವಿಂದ ಶರ್ಮ, ವೈಎಐ ಕಾರ್ಯದರ್ಶಿ ಕ್ಯಾಪ್ಟನ್ ಜಿತೇಂದರ್ ದೀಕ್ಷಿತ್, ಏರ್ ಕಮಾಂಡರ್ ಬಿ.ಎಸ್. ಕನ್ವರ್, ಸದಸ್ಯ ಕಮಾಂಡರ್ ತರಂದೀಪ್ ಭಕ್ಷಿ, ಹಾಗೂ ಆರ್‌ಎಂಎಸ್‌ಸಿ ಸದಸ್ಯ ಕ್ಯಾಪ್ಟನ್ ತ್ರಿಭುವನ್ ಜೈಸ್ವಾಲ್, ಯಶ್ವಂತ್ (ನಿಂತಿರುವವರ ಸಾಲಿನಲ್ಲಿ ಎಡದಿಂದ ಆರನೇಯವರು) ಹಾಗೂ ಎನ್‌ಸಿಸಿ ಕೆಡೆಟ್‌ಗಳನ್ನು ಚಿತ್ರದಲ್ಲಿ ಕಾಣಬಹುದು.

ಮನೆ ಹಿಂಬಾಗಿಲು ಮುರಿದು ಚಿನ್ನಾಭರಣ, ನಗದು ಕಳವು

ಮೈಸೂರು, ಮಾ. 4–ಸಾಫ್ಟ್‌ವೇರ್ ಇಂಜಿನಿಯರ್ ಮನೆಯ ಹಿಂಬಾಗಿಲ ಮೂಲಕ ಒಳನುಗ್ಗಿದ ಖದೀಮರು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವುದಾಗಿ ವರದಿಯಾಗಿದೆ. ಮೈಸೂರಿನ ಲೋಕನಾಯಕ ನಗರದಲ್ಲಿ ವಾಸವಿರುವ ಸಾಫ್ಟ್‌ವೇರ್ ಇಂಜಿನಿಯರ್ ಎಸ್.ಹರ್ಷ(25) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಮಾರ್ಚ್ 1ರಂದು ಸಂಜೆ 7.30ರಲ್ಲಿ ಮನೆಗೆ ಬೀಗ ಹಾಕಿಕೊಂಡು ರಾತ್ರಿ ಪಾಳಿ ಕೆಲಸಕ್ಕೆ ಹೋಗಿದ್ದರು. ಮಾರ್ಚ್ 2ರಂದು ಬೆಳಗಿನಜಾವ 5.45ರಲ್ಲಿ ಹಿಂತಿರುಗಿದಾಗ ಇವರ ಮನೆಯ ರೂಂನ ಬೀರುವಿನಲ್ಲಿಟ್ಟಿದ್ದ 29 ಗ್ರಾಂ ಚಿನ್ನಾಭರಣ, 300 ಗ್ರಾಂ ಬೆಳ್ಳಿ ಪದಾರ್ಥ ಮತ್ತು 10 ಸಾವಿರ ರೂ. ನಗದನ್ನು ಖದೀಮರು ಹಿಂಬಾಗಿಲ ಮೂಲಕ ಒಳನುಗ್ಗಿ ಕಳವು ಮಾಡಿರುವುದು ಗೊತ್ತಾಗಿದೆ ಈ ಸಂಬಂಧ ಮೇಟಗಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಡಾಕ್ಟರ್ ಆಫ್ ಫಿಲಾಸಫಿ ಪದವಿಗೆ ಆಯ್ಕೆ



ಮೈಸೂರು, ಮಾ. 4– ಮೆಕ್ಯಾನಿಕಲ್ ಇಂಜಿನಿಯರಿಂಗ್ ಸೈನ್ಸ್‌ನಲ್ಲಿ ಸಂಶೋಧನೆ ನಡೆಸಿ, ಮಂಡಿಸಿದ ಮಹಾ ಪ್ರಬಂಧಕ್ಕೆ ಎಸ್.ಮಂಜುನಾಥ್ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಿದೆ. ಇವರು ಡಾ. ರಾಮಕೃಷ್ಣ ಎನ್. ಹೆಗ್ಡೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧ ಮಂಡಿಸಿದ್ದರು.

ಸಖಿ ಫೌಂಡೇಷನ್, ಸೂರ್ಯ ಚಾರಿಟೆಬಲ್ ಟ್ರಸ್ಟ್ ಮಾ.12ಕ್ಕೆ ಉದ್ಘಾಟನೆ



ಮೈಸೂರು,ಮಾ.4(ಎಂಟಿವೈ)– ಮಹಿಳಾ ಸಬಲೀಕರಣ, ಕೌಶಲ್ಯ ತರಬೇತಿ ಮತ್ತು ಸಾಹಿತ್ಯ ಸಾಂಸ್ಕೃತಿಕ ಹಾಗೂ ಪರಿಸರ ಸಂರಕ್ಷಣೆಯ ಧ್ಯೇಯದೊಂದಿಗೆ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭ ಮಾ.12ರಂದು ನೃಪತುಂಗ ಕನ್ನಡ ಶಾಲೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣದೊಂದಿಗೆ ಅವರಿಗೆ ವಿವಿಧ ಕೌಶಲ್ಯಗಳ ಬಗ್ಗೆ ತರಬೇತಿ ನೀಡುವ ಉದ್ದೇಶ ನಮ್ಮ ಸಂಸ್ಥೆಯದ್ದಾಗಿದೆ. ಮಾ. 12ರಂದು ಬೆಳಗ್ಗೆ 9.30ರಿಂದ ಸಂಜೆ 6 ಗಂಟೆವರೆಗೆ ಮೈಸೂರಿನ ರಾಮಕೃಷ್ಣ ನಗರದ ನೃಪತುಂಗ ಕನ್ನಡ ಶಾಲೆಯಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11.30ಕ್ಕೆ ಶಾಸಕ ಜಿ.ಟಿ.ದೇವೇಗೌಡ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ಉದ್ಘಾಟಿಸಲಿದ್ದಾರೆ ಎಂದರು. ಇದೇ ವೇಳೆ ಮಹಿಳಾ ಸಬಲೀಕರಣದ ಅಂಗವಾಗಿ ಆಹಾರ ಮತ್ತು ಕರಕುಶಲ ಮೇಳ ಏರ್ಪಡಿಸಲಾಗಿದೆ. 20ಕ್ಕೂ ಹೆಚ್ಚು ಮಳಿಗೆಗಳಲ್ಲಿ ಮಹಿಳೆಯರು ತಾವೇ ತಯಾರಿಸಿದ ವಿವಿಧ ತಿನಿಸುಗಳನ್ನು ಮಾರಾಟ ಮಾಡಲಿದ್ದಾರೆ. ಸಾಹಿತ್ಯ ಸಖಿಯರು ಸೇರಿ ಬರೆದಿರುವ ಹದಿನಾರು ಗೆಳತಿಯರ ಹತ್ತಾರು ಕಥೆಗಳು–ಸಖೀ ಕಥಾ' ಎಂಬ ಕಥಾ ಸಂಕಲನ ಲೋಕಾರ್ಪಣೆ ಮಾಡಲಾಗುತ್ತದೆ. ಕಾರ್ಯಕ್ರಮದಲ್ಲಿ ಶ್ರೀಮತಿ ಮತ್ತು ತಂಡದವರಿಂದ ಚಂಡೆ ಮೇಳ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ತರಕಾರಿ ಕೆತ್ತನೆ ಸ್ಪರ್ಧೆ, ದೇಸಿ ಪಾನೀಯ ಸ್ಪರ್ಧೆ, ಕೇಕ್ ತಿನ್ನುವ ಸ್ಪರ್ಧೆ, ಜನಪದ ಹಾಗೂ ಭಾವಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಹೆಚ್.ಆರ್. ಸುಂದರೇಶನ್, ಉಪಾಧ್ಯಕ್ಷ ಹೆಚ್.ಎಸ್. ರಾಮಣ್ಣ, ರೇಖಾ ಹಾಗೂ ಗೀತಾ ಇದ್ದರು.

ಚಾಮುಂಡೇಶ್ವರಿಯಿಂದ ನಾನೂ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ




ಮೈಸೂರು,ಮಾ.4(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಡುವಂತೆ ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ, ಕಾಂಗ್ರೆಸ್ ಮುಖಂಡ ಮೆಲ್ಲಹಳ್ಳಿ ಮಹದೇವಸ್ವಾಮಿ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರ ಬೆಂಬಲಿಗರಾಗಿ ಗುರುತಿಸಿಕೊಂಡು, ಕಳೆದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಕ್ರಿಯ ರಾಜಕಾರಣದಲ್ಲಿದ್ದುಕೊಂಡು, ಪಿಎಲ್‌ಡಿ ಬ್ಯಾಂಕ್, ಎಂಸಿಡಿಸಿಸಿ ಬ್ಯಾಂಕ್ ಸೇರಿದಂತೆ ಹಲವು ಚುನಾವಣೆಗಳನ್ನು ಎದುರಿಸಿದ್ದು ಕ್ಷೇತ್ರಾದ್ಯಂತ ಅತೀ ಹೆಚ್ಚು ಚಿರಪರಿಚಿತನಾಗಿರುತ್ತೇನೆ. ಚಾಮುಂಡೇಶ್ವರಿ ರಾಜ್ಯದಲ್ಲಿ ಪ್ರತಿಷ್ಠಿತ ಕ್ಷೇತ್ರವಾಗಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ರಾಜಕೀಯ ಜನ್ಮ–ಪುನರ್ಜನ್ಮ ನೀಡಿದ ಕ್ಷೇತ್ರ ಇದಾಗಿದೆ. 2023ನೇ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲು ಹಲವಾರು ಮಂದಿ ಸ್ನೇಹಿತರು ಕಾಂಗ್ರೆಸ್‌ನಿಂದ ಟಿಕೆಟ್ ಬಯಸಿ, ಸಿದ್ದರಾಮಯ್ಯ ಅವರ ಸೂಚನೆಗಾಗಿ ಕಾಯುತ್ತಿದ್ದಾರೆ. ನಾನು ಸಹ ಪ್ರಬಲ ಆಕಾಂಕ್ಷಿಯಾಗಿದ್ದೇನೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರವು 1983ರಲ್ಲಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ನೆಲೆಯನ್ನು ಕಲ್ಪಿಸಿಕೊಟ್ಟು, ಅವರು ಮುಂದೆ ರಾಜ್ಯದ ಪ್ರಮುಖ ಸ್ಥಾನವಾದ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸುವ ಮೂಲಕ ಇವತ್ತು ಇಡೀ ರಾಜ್ಯದ ಜನ ಮೆಚ್ಚಿದ ನಾಯಕರಾಗಿ ಹೊರಹೊಮ್ಮಲು ಸಾಧ್ಯವಾಯಿತು. ತದನಂತರದ ದಿನಗಳಲ್ಲಿ ಸಿದ್ದರಾಮಯ್ಯನವರ ನೆರಳಿನಲ್ಲಿ ಬೆಳೆದ ವ್ಯಕ್ತಿ, ಮುಳ್ಳಾಗಿ ಅವರನ್ನು ಚುಚ್ಚುವ ಮೂಲಕ ಮಾಸದ ಗಾಯವನ್ನುಂಟು ಮಾಡಿದ್ದು ದುರದೃಷ್ಟಕರ ಸಂಗತಿ. ಆದರೆ, ಅಂತಹ ಮುಳ್ಳಿನ ಗಿಡವನ್ನು ತೆಗೆದು ಉತ್ತಮವಾದ ರಾಜಕೀಯ ಸಸಿಯೊಂದನ್ನು ಬೆಳೆಸುವ ಗುರುತರ ಜವಾಬ್ದಾರಿ ಸಿದ್ದರಾಮಯ್ಯ ಅವರ ಕೈಯ್ಯಲ್ಲಿದೆ ಎಂದು ಅಭಿಪ್ರಾಯಪಟ್ಟರು.

ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಅವರಿಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನೀಡಲಾಗುವುದೆಂಬ ಮಾಹಿತಿ ಇದೆ ಇದರಿಂದ ಕೆಲವರಲ್ಲಿ ಗೊಂದಲ ಉಂಟಾಗಿದೆ. ಅವರು ಇತ್ತೀಚೆಗಷ್ಟೇ ಪಕ್ಷಕ್ಕೆ ಬಂದವರಾಗಿದ್ದಾರೆ. ಆದರೆ ತಾವು ಹಲವಾರು ವರ್ಷಗಳಿಂದ ಪಕ್ಷದಲ್ಲಿಯೇ ಇದ್ದು, ಸೇವೆ ಮಾಡುತ್ತಿರುವ ಕಾರಣ ತಮಗೆ ಟಿಕೆಟ್ ನೀಡಬೇಕೆಂದು ಕೋರಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.3.2023 ಭಾನುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.02.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಲಲಿತಾ ಹೊಸಪ್ಯಾಟಿ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಅಂಬಯ್ಯನುಲಿ, ಬಿ. ಶ್ರೀರಾಂ ಭಟ್, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 9.40 ನಮ್ಮ ಆರೋಗ್ಯ–"ಕೇಳು ಕಿಶೋರಿ–ಪುಟ್ಟ ತಂಗಿಗೊಂದು ಕಿವಿಮಾತು" ಹೇಳಲಿದ್ದಾರೆ ಡಾ.ಶಿಲ್ಪಾ ಎನ್.ವಿಜಯ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪಾಲಹಳ್ಳಿಯ ಶ್ರೀ ಶಾರದಾ ದೇವಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಕೆ.ಎಸ್.ಸುರೇಖ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತು ಕಾರ್ಯಕ್ರಮ ಸರಣಿ– ಪ್ರಧಾನ ಮಂತ್ರಿ ಫೇಮ್ ಇಂಡಿಯಾ ಯೋಜನಾ ಕುರಿತು ಮಾತನಾಡುತ್ತಾರೆ ದಿವ್ಯಾಹೆಗಡೆ ಕಬ್ಬಿನಗದ್ದೆ, 1.20 ಭಾವಗೀತೆಗಳು–ರಜನಿ ಅನಿಲ್, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ವಿದ್ಯುನ್ಮತಿ ಕಲ್ಯಾಣ, ಪ್ರಸ್ತುತಿ– ಉಡುಪಿ ಹೇರಂಜೆಯ ನೀಲಾವರ ಲಕ್ಷ್ಮೀನಾರಾಯಣರಾವ್ ಮತ್ತು ಬಳಗದವರು, 6.50 ಕೃಷಿರಂಗ, ರೂಪಕ–"ಭಜತಾಂ ಕಲ್ಪವೃಕ್ಷಾಯ", ಪ್ರಸ್ತುತಿ– ಎಸ್.ಸಿ.ಹೇಮಕುಮಾರ್, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಮಂಡ್ಯದ 5 ರೂ. ಡಾಕ್ಟರ್ ಶಂಕರೇಗೌಡ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.15 ರಂಗಗೀತೆಗಳು 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಕೋಮಂದುರಿ ಶೇಷಾದ್ರಿ–ವಯೋಲಿನ್ ವಾದನ

■ **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ :** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಶ್ರೀಮತಿ ಚಂದ್ರಿಕಾ ವಿಜಯಕುಮಾರ್ ಅವರಿಂದ ಗಾಥ : 526 ರಿಂದ 550 ಕುರಿತು ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕುವೆಂಪುನಗರ ಜೋಡಿ ರಸ್ತೆ, ಬೆಳಗ್ಗೆ 7 ರಿಂದ.

■ **ಎಡಿನ್ ಸಿನರ್ಜಿ ಮಾನವ ಸಂಪನ್ಮೂಲ ಸಂಸ್ಥೆ :** ಟೆನ್ನಿಸ್‌ಬಾಲ್ ಎನ್‌ಐಇ ಮೈಸೂರು ಎಡಿನ್ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಎನ್‌ಐಇ ಕಾಲೇಜು ಮೈದಾನ, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಬೆಳಗ್ಗೆ 7.30 ರಿಂದ.

■ **ಸೋಮನಾಥನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಚಂದನವನ ಪಾರ್ಕ್ ಸಮಿತಿ :** ಸೋಮನಾಥನಗರ ಬಡಾವಣೆಯಲ್ಲಿ ಕಬಿನಿ ಕುಡಿಯುವ ನೀರಿನ ಜಲಧಾರೆ ಪೂಜೆ, ಗಂಗಾಪೂಜೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪುಟ್ಟೇಗೌಡ, ಪ್ರಾಸ್ತಾವಿಕ ನುಡಿ : ಸಂಘದ ಗೌರವ ಅಧ್ಯಕ್ಷ ರಮೇಶ್ ಕಳ್ಳಿಪಾಳ್ಯ, ಮುಖ್ಯ ಅತಿಥಿಗಳು : ಮಹೇಶ್, ಅಣ್ಣೇಗೌಡ, ಸಿ. ಶ್ಯಾಮಸುಂದರ್, ಡಿ.ಎನ್. ವಿಜಯಕುಮಾರ್, ಧನುಷ್, ಸ್ಥಳ: ವಾಟರ್ ಟ್ಯಾಂಕ್ ಪಾರ್ಕ್, ಸೋಮನಾಥನಗರ, ಬೆಳಗ್ಗೆ 8ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ವೃಷಭಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಕ್ಯಾತಮಾರನಹಳ್ಳಿ ಗ್ರಾಮಸ್ಥರು :** ಹುಲಿಯಮ್ಮ ಜಾತ್ರಾ ಮಹೋತ್ಸವ, ಹುಲಿಯಮ್ಮ ದೇವಿಗೆ ಬಾಳೆ ಕಂಬದಿಂದ ಅಲಂಕಾರ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

■ **ಸನಾತನ ಸಭಾ :** ಡಾ. ಕೆ.ಎಸ್. ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ ಮತ್ತು ಅವರ ಸ್ವಾಧ್ಯಾಯ ಪ್ರವಚನ ಕುರಿತಾದ ಒಂದು ಅವಲೋಕನ, ಸಭಾ ಕಾರ್ಯಕ್ರಮ ಬೆಳಗ್ಗೆ 9.30ಕ್ಕೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಹಿರಿಯ ಸಂಶೋಧಕ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಉದ್ಘಾಟನೆ : ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟ, ಮುಖ್ಯ ಅತಿಥಿಗಳು : ಡಾ. ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಕಾರ್ಯದರ್ಶಿ ಡಾ. ಜಿ.ಎಲ್. ಶಂಕರ್, ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮ್ಯಾನೇಜಿಂಗ್ ಪಾರ್ಟನರ್ ಡಾ. ಎಂ. ಜಗನ್ನಾಥ್ ಶೆಣೈ, ಉಪಸ್ಥಿತರು: ಸನಾತನ ಸಭಾ ಅಧ್ಯಕ್ಷ ಎನ್.ಎಸ್. ದ್ವಾರಕಾನಾಥ, ಉಪಾಧ್ಯಕ್ಷ ಪ್ರೊ. ಎಸ್. ರಾಮಪ್ರಸಾದ್, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಹೋಟೆಲ್ ಉದ್ಯಮಿ ಪೊಲ್ಯ ಉಮೇಶ್ ಶೆಟ್ಟಿ, ಮುಖ್ಯ ಅತಿಥಿಗಳು : ಹಿರಿಯ ನ್ಯಾಯವಾದಿ ಓ. ಶ್ಯಾಮಭಟ್ಟ, 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ.

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ :** ಮೈಸೂರು ವಿಭಾಗ ಮಟ್ಟದ ನೌಕರರ ಜಾಗೃತ ಸಮಾವೇಶ, ಸಾನ್ನಿಧ್ಯ : ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳು, ಸಮ್ಮುಖ : ಭೋದಿದತ್ತ ಭಂತೇಜಿ, ಅಧ್ಯಕ್ಷತೆ : ಸಮಿತಿ ರಾಜ್ಯಾಧ್ಯಕ್ಷ ಡಿ. ಶಿವಶಂಕರ್, ಮುಖ್ಯ ಅತಿಥಿಗಳು : ಶಾಸಕರಾದ ಅಶ್ವಿನ್‌ಕುಮಾರ್, ಬಿ. ಹರ್ಷವರ್ಧನ್, ಅನಿಲ್ ಚಿಕ್ಕಮಾದು, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಪುಷ್ಪ ಅಮರನಾಥ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 9.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಹಿಮಾಲಯ ಪ್ರತಿಷ್ಠಾನ :** ಬೆಳಗ್ಗೆ 10ಕ್ಕೆ ವಚನ ಉತ್ಸವ, ಸಾನ್ನಿಧ್ಯ : ಬಂಡಹಳ್ಳಿ ದೊಡ್ಡ ಮಠದ ಶ್ರೀ ಫಲಾಹಾರ ಪ್ರಭುದೇವ ಸ್ವಾಮೀಜಿ, ನಂದಿಗುಡಿ ಮಠದ ಶ್ರೀ ನಂದೀಶ್ವರ ಮಠದ ಶಿವಾಚಾರ್ಯ ಸ್ವಾಮೀಜಿ, ಮಡಿವಾಳ ಸ್ವಾಮಿ ಗದ್ದುಗೆಯ ಶ್ರೀ ಅಡವಿ ಸ್ವಾಮೀಜಿ, ಶ್ರೀ ಸೋಮಶೇಖರ ಸ್ವಾಮೀಜಿ, ಶ್ರೀ ಬಸವ ಜ್ಞಾನಮಂದಿರದ ಡಾ. ಬಸವಾಂಜಲಿದೇವಿ, ಉದ್ಘಾಟನೆ : ಹಿರಿಯ ಸಾಹಿತಿ ಡಾ. ಸಿಪಿಕೆ, ಅಧ್ಯಕ್ಷತೆ : ವೈದ್ಯ ಸಾಹಿತಿ ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಉದ್ಯಮಿ ಎಸ್.ಎಂ. ಶಿವಪ್ರಕಾಶ್, ಭೂಮಿಪುತ್ರ ಚಂದನ್‌ಗೌಡ, ಲಿಂಗಾಯತ ಗೌಡ ಮಹಾಸಭಾದ ಅಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಮ.ನಾ. ಲತಾ ಮೋಹನ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್, ಲೇಖಕಿ ಡಾ. ಮಂಜುಳಾ ಉಮೇಶ್, ಮುಕ್ತಕ ಸಾಹಿತಿ ಮುತ್ತುಸ್ವಾಮಿ, ಕನ್ನಡ ಹೋರಾಟಗಾರ ಅರವಿಂದಶರ್ಮ, ಅಂಸಿ ಚೇತನ್, ಸುಪ್ರೀತ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ.

■ **ಬಸವ ಸಮಿತಿ :** ಶರಣ ಸಂಗಮ–279, ವಚನ ಸಂಗೀತ, ಗಾಯಕರು : ಪ್ರಭುರಾವ್ ಮತ್ತು ತಂಡ, ತಬಲ : ರಮೇಶ್ ಧನ್ನೂರು, ಸನ್ಮಾನಿತರು : ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಹಾಗೂ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಟಿ. ಲಿಂಗರಾಜು, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಡಾ. ಗಂಗೂಬಾಯಿ ಹಾನಗಲ್ ಅವರ 110ನೇ ಜನ್ಮ ದಿನೋತ್ಸವ, ಅಧ್ಯಕ್ಷತೆ : ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಉದ್ಘಾಟನೆ : ಹಾನಗಲ್ ಅವರ ಹಿರಿಯ ಶಿಷ್ಯ ಕರ್ನಾಟಕ ಕಲಾಶ್ರೀ ಡಾ. ಸುಲಭಾದತ್ತ ನೀರಲಗಿ, ಮುಖ್ಯ ಅತಿಥಿಗಳು : ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ ಪಂಡಿತ್ ಡಾ. ನಾಗರಾಜ ಹವಾಲ್ದಾರ, ನಿವೃತ್ತ ಐಎಎಸ್ ಅಧಿಕಾರಿ ಡಾ. ಮುದ್ದುಮೋಹನ, ಕುಲಸಚಿವ ಪ್ರೊ. ಟಿ.ಎಸ್. ದೇವರಾಜ, ಸ್ಥಳ: ವಿಶ್ವವಿದ್ಯಾಲಯದ ಆವರಣ, ಬೆಳಗ್ಗೆ 10.30ಕ್ಕೆ.

■ **ರೂಪಾ ಪ್ರಕಾಶನ, ಅಂಗಳ ಸಾಹಿತ್ಯ ಬಳಗ :** ನಾ. ದಿವಾಕರ ಅವರ ನಡೆವ ಹಾದಿಯ ಬೇಲಿ ಮತ್ತು ಭಾಬಕಣಜ ಕವನ ಸಂಕಲನಗಳ ಬಿಡುಗಡೆ ಕಾರ್ಯಕ್ರಮ, ಅಧ್ಯಕ್ಷತೆ : ಸಾಹಿತಿ ಪ್ರೊ. ರಾಜಪ್ಪ ದಳವಾಯಿ, ಪುಸ್ತಕ ಬಿಡುಗಡೆ : ಉಪನ್ಯಾಸಕ ಕೆ.ಪಿ. ಮೃತ್ಯುಂಜಯ, ಪುಸ್ತಕ ಕುರಿತು : ಪ್ರೊ. ಲತಾ ಮೈಸೂರು, ಪ್ರೊ. ಜಯಶಂಕರ್ ಹಲಗೂರು, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ನಾಯಕರ ವಿದ್ಯಾಭಿವೃದ್ಧಿ ಸಂಘ, ನಾಯಕರ ವಿದ್ಯಾರ್ಥಿ ನಿಲಯ :** ಮೇಯರ್ ಶಿವಕುಮಾರ್ ಅವರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ನಾಯಕರ ವಿದ್ಯಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಎಂ.ಸಿ. ಸುಬ್ಬಣ್ಣ, ಉಪಾಧ್ಯಕ್ಷ ಮಹದೇವ ನಾಯಕ, ಮಾಜಿ ಕಾರ್ಯದರ್ಶಿ ಡಿ. ಮಹದೇವಪ್ಪ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ರಾಮನಾಯಕ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಚಿಕ್ಕಣ್ಣ, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ವಿಧಾನಪರಿಷತ್ ಸದಸ್ಯ ಸಿದ್ದರಾಜು, ಎಂ. ರಾಮಚಂದ್ರ, ಎಂ. ಅಪ್ಪಣ್ಣ, ಎಸ್.ಸಿ. ಬಸವರಾಜು, ಸ್ಥಳ: ಶ್ರೀ ವಾಲ್ಮೀಕಿ ಸಮುದಾಯ ಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ

■ **ಜೆಎಸ್‌ಎಸ್ ಮಹಿಳಾ ಕಾಲೇಜು :** 15ನೇ ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಉಪ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್, ಅಧ್ಯಕ್ಷತೆ : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ:ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11.30ಕ್ಕೆ.

■ **ಪ. ಮಲ್ಲೇಶ್ ವೇದಿಕೆ, ರಂಗವಾಹಿನಿ, ರಾಮಮನೋಹರ ಲೋಹಿಯ ಟ್ರಸ್ಟ್, ನೆಲೆ ಹಿನ್ನೆಲೆ, ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ :** ರಾಜ್ಯ ಮಟ್ಟದ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ ಹಾಗೂ ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಆರ್. ರವಿ, ಅಧ್ಯಕ್ಷತೆ : ಪ್ರದೇಶಾಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಪ್ರಶಸ್ತಿ ಪ್ರದಾನ : ಹಿರಿಯ ಪತ್ರಕರ್ತ ಬಿ.ಎಂ. ಹನೀಫ, ಪ್ರಶಸ್ತಿ ಪುರಸ್ಕೃತರ ಕುರಿತು : ಕವಿ ಸುಬ್ಬು ಹೊಲೆಯಾರ್, ರಾಜಶೇಖರ ಕೋಟಿ ಕುರಿತು : ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ ಸೋಸ್ಲೆ, ಮುಖ್ಯ ಅತಿಥಿಗಳು : ಆಂದೋಲನ ಪತ್ರಿಕೆ ಸಂಪಾದಕ ರವಿ ಕೋಟಿ, ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಕೆ.ಆರ್. ಗೋಪಾಲಕೃಷ್ಣ, ಬಿ.ಆರ್. ಪರಂಜ್ಯೋತಿ, ಸ್ಥಳ: ಬಿಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಸ್ತೋತ್ರದ ವೈಶಿಷ್ಟ್ಯತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನೃತ್ಯಾಲಯ ಟ್ರಸ್ಟ್ ಪ್ರದರ್ಶಕ ಕಲೆಗಳ ಅಕಾಡೆಮಿ :** ನಲಿವಿನ ಪಯಣ–44 ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಚನಾಂಜಲಿ : ಡಾ. ತುಳಸೀ ರಾಮಚಂದ್ರ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್.ಎಲ್. ಭೈರಪ್ಪ ಅವರಿಂದ ತುಳಸೀಪ್ರಿಯ ನರ್ತನ ಗುಚ್ಛ ಪುಸ್ತಕ ಬಿಡುಗಡೆ, ಪುಸ್ತಕ ಪರಿಚಯ : ಡಾ. ನಾಗಮಣಿ ಶ್ರೀನಾಥ್, ಸನ್ಮಾನಿತರು : ಅಂತರಾಷ್ಟ್ರೀಯ ಪಿಟೀಲು ವಿದ್ವಾಂಸರಾದ ಮೈಸೂರು ನಾಗರಾಜ್ ಮತ್ತು ಡಾ. ಮೈಸೂರು ಮಂಜುನಾಥ್, ಸಂಜೆ 6 ರಿಂದ ಸ್ವರಮಂಥನ–ಕರ್ನಾಟಕ ವಿಶೇಷ ನೃತ್ಯ ಪ್ರಕಾರ, ಸಂಜೆ 6.15 ರಿಂದ ಮೈಸೂರು ನಾಗರಾಜ್ ಮತ್ತು ಡಾ. ಮೈಸೂರು ಮಂಜುನಾಥ್ ಅವರಿಂದ ಯುಗಳ ಪಿಟೀಲು ವಾದನ, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಘಟಂ, ಪಂಚತತ್ತ್ವದರ್ಶನ ನೃತ್ಯ ರೂಪಕ, ತಿಲ್ಲಾನ, ಮಂಗಳ, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 5 ಭಾನುವಾರ 2023


ಸಂಪುಟ: 43 | ಸಂಚಿಕೆ: 315 | ಪುಟಗಳು: 12

43 ಅತ್ಯುತ್ತಮ ಪತ್ರಿಕೋದ್ಯಮ

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಕಾಂಗ್ರೆಸ್‌ಗೆ ಕಡಿವಾಣ ಹಾಕಲು

ಬಿಜೆಪಿಗೆ 'ಬಂಡಾಯ' ಅಸ್ತ್ರ!

- ಕಡಿಮೆ ಅಂತರದಲ್ಲಿ ಕಾಂಗ್ರೆಸ್ ಗೆಲ್ಲುವ ಕ್ಷೇತ್ರಗಳ ಟಾರ್ಗೆಟ್ ಮಾಡಿರುವ ಬಿಜೆಪಿ ಚಾಣಕ್ಯರು
- ಬಂಡಾಯಗಾರರಿಗೆ ಮಣೆ ಹಾಕಿ ಆ ಮೂಲಕ ಕಾಂಗ್ರೆಸ್ ಗೆಲುವಿನ ಓಟಕ್ಕೆ ಬ್ರೇಕ್

ಬೆಂಗಳೂರು, ಮಾ.4(ಕೆಎಂಶಿ)-ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲೇಬೇಕೆಂದು ಪಣತೊಟ್ಟಿರುವ ಬಿಜೆಪಿಯು, ಪ್ರತಿಪಕ್ಷ ಕಾಂಗ್ರೆಸ್‌ಗೆ ಒಳ ಏಟು ನೀಡಲು ತಂತ್ರಗಾರಿಕೆಯನ್ನು ರೂಪಿಸಿದೆ.



ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ 25-30 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯ ಗಳಿಸಲಿದ್ದಾರೆ ಎಂಬ ಸಮೀಕ್ಷೆಯ ವರದಿ ಆಧರಿಸಿ ಆ ಪಕ್ಷದ ಮುಖಂಡರನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ. ಇಂತಹವರನ್ನು ಚುನಾವಣೆಯಲ್ಲಿ ಸುಲಭವಾಗಿ ಮಣಿಸುವ ಮಾರ್ಗವನ್ನು ಕಂಡುಕೊಂಡಿದ್ದು, ಅದಕ್ಕೆ ಬೇಕಾದ ಕಾರ್ಯತಂತ್ರ ರೂಪಿಸಿದೆ. ಬಿಜೆಪಿ, ಈಗಾಗಲೇ ಐದಾರು ಚುನಾವಣಾ ಪೂರ್ವ ಸಮೀಕ್ಷೆಗಳನ್ನು ನಡೆಸಿದ್ದು, ಆ ವರದಿಯನ್ನು ಆಧರಿಸಿ ಕಾಂಗ್ರೆಸ್ ಮುಖಂಡರ ಆಪರೇಷನ್ ಕಾರ್ಯಾಚರಣೆಗೆ ಸಜ್ಜಾಗಿದೆ.

ಕಾಂಗ್ರೆಸ್ ಪ್ರಬಲವಾಗಿರುವ ಕ್ಷೇತ್ರಗಳಲ್ಲಿ ಚುನಾವಣಾ ಸ್ಪರ್ಧಾಕಾಂಕ್ಷಿಗಳ ದಂಡೇ ಇದೆ. ಇಂತಹ ಕಡೆಗಳಲ್ಲಿ ಪ್ರಬಲರಲ್ಲಿ ಒಬ್ಬರಿಗೆ ಮಾತ್ರ ಟಿಕೆಟ್ ದೊರೆತರೆ, ಉಳಿದ ಪಕ್ಷದ ಟಿಕೆಟ್ ಆಕಾಂಕ್ಷಿಗಳೇ ಕಾಂಗ್ರೆಸ್‌ಗೆ ಸಮಸ್ಯೆ ಆಗಲಿದ್ದಾರೆ. ದೆಹಲಿಯ ಬಿಜೆಪಿ ಚಾಣಕ್ಯರು, ಟಿಕೆಟ್ ವಂಚಿತರನ್ನು ಗುರುತಿಸಿ ಅಂಥವರಲ್ಲಿ ಒಬ್ಬರನ್ನು ಆಯ್ಕೆ ಮಾಡಿ, ಪಕ್ಷೇತರರನ್ನಾಗಿ ಚುನಾವಣಾ ಕಣಕ್ಕೆ ಇಳಿಸಲು ಸಿದ್ಧತೆ ನಡೆಸಲಾಗಿದೆ. ಅಂಥವರಿಗೆ ಕೆಲವೊಂದು ಆಮಿಷ ನೀಡಿರುವುದಲ್ಲದೆ, ಚುನಾವಣಾ ವೆಚ್ಚವನ್ನು ಕೆಲವು ಉದ್ದಿಮೆದಾರರ ಮೂಲಕ ಭರಿಸಲು ವ್ಯವಸ್ಥೆ ಮಾಡಲಾಗಿದೆ. ಎರಡರಿಂದ ಐದು ಸಾವಿರ ಅಂತರದಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ ಎಂಬ ಕ್ಷೇತ್ರಗಳಲ್ಲಿ ಆ ಪಕ್ಷದ ಭಿನ್ನರನ್ನು ಗುರುತಿಸಿ, ಅವರನ್ನೇ ಅಸ್ತ್ರವನ್ನಾಗಿ ಬಳಸಲಿದೆ. ಅವರನ್ನು ಈಗಾಗಲೇ ಪ್ರಚಾರಕ್ಕೂ ಅಣಿಗೊಳಿಸಿದೆ. ಇಂಥವರ ಸ್ಪರ್ಧೆಯಿಂದ ಕಾಂಗ್ರೆಸ್ ಅಭ್ಯರ್ಥಿಗಳು ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದರೆ, ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್, ಇಲ್ಲವೇ ಸ್ವತಂತ್ರ ಅಭ್ಯರ್ಥಿಗಳಿಗೆ ಅದರ ಲಾಭ ಆಗಲಿದೆ. ಇಂತಹ ಅಭ್ಯರ್ಥಿಗಳು ಪಡೆಯುವ 10ರಿಂದ 15 ಸಾವಿರ ಮತಗಳು ಕಾಂಗ್ರೆಸ್‌ನಿಂದಲೇ ಕಸಿದುಕೊಳ್ಳುವ ಲೆಕ್ಕಾಚಾರವಿದ್ದು, ಇದು ಬಿಜೆಪಿಯ ಪಾಲಿಗೆ ಮರುಭೂಮಿಯಲ್ಲಿ ನೀರು ಸಿಕ್ಕಂತಾಗಿದೆ. ಮೂರೂ ರಾಜಕೀಯ ಪಕ್ಷಗಳು ಈಗಾಗಲೇ 15-20 ಚುನಾವಣಾ ಪೂರ್ವ ಸಮೀಕ್ಷೆಗಳನ್ನು ನಡೆಸಿವೆ. ಯಾವ ಪೂರ್ವ ಸಮೀಕ್ಷಾ ವರದಿಯಲ್ಲೂ ಯಾವುದೇ ಪಕ್ಷಕ್ಕೆ ಸ್ಪಷ್ಟವಾದ ಬಹುಮತವನ್ನು ಮತದಾರ ಪ್ರಭುಗಳು ನೀಡಿಲ್ಲ. ಇದರಿಂದಾಗಿ ಚುನಾವಣಾ ಪೂರ್ವದಲ್ಲೇ ಭರವಸೆಗಳ ಮಹಾಪೂರವನ್ನೇ ಕಾಂಗ್ರೆಸ್ ಹರಿಸಿ ತಮ್ಮ ಗುರಿ ಮುಟ್ಟಲು ಮುಂದಾಗಿದ್ದರೆ, ಬಿಜೆಪಿ ತನ್ನ ಚಾಣಕ್ಯತನದಿಂದಲೇ ಅಧಿಕಾರ ಹಿಡಿಯಲು ಒಳತಂತ್ರಗಳನ್ನು ರೂಪಿಸಿ ಗುರಿ ಮುಟ್ಟಲು ಸಜ್ಜಾಗುತ್ತಿದೆ.

ಕಿಡಿಗೇಡಿಗಳಿಂದ ಕೊಳ್ಳಿ: ಚಾಮುಂಡಿಬೆಟ್ಟದಲ್ಲಿ ಅಪಾರ ಪ್ರಮಾಣದ ಸಸ್ಯ ಸಂಪತ್ತು ನಾಶ

- ಬೆಂಕಿ ನಂದಿಸಲು ಅರಣ್ಯ ಸಿಬ್ಬಂದಿ ಹರಸಾಹಸ
- ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲೂ ಬೆಂಕಿ





ಮೈಸೂರು, ಮಾ.4(ಎಂಟಿವೈ)- ಚಾಮುಂಡಿಬೆಟ್ಟದಲ್ಲಿ ಶನಿವಾರ ಮಧ್ಯಾಹ್ನ ಕಿಡಿಗೇಡಿಗಳು ಇಟ್ಟ ಬೆಂಕಿಗೆ ಅಪಾರ ಪ್ರಮಾಣದ ಸಸ್ಯ ಸಂಪತ್ತು ನಾಶವಾಗಿದೆ.

ದೈವಿವನದ ನಂದಿ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ದುಷ್ಕರ್ಮಿಗಳು ಕೊಳ್ಳಿ ಇಟ್ಟಿದ್ದಾರೆ. ಇದರಿಂದ ಅಗ್ನಿ ಜ್ವಾಲೆ ಬೆಟ್ಟವನ್ನು ಆವರಿಸಿದೆ. ಕಿಡಿಗೇಡಿಗಳು ಇಟ್ಟ ಬೆಂಕಿಗೆ ಅಮೂಲ್ಯ ಗಿಡ-ಮರ ಮಾತ್ರವಲ್ಲದೆ, ಪೊದೆಗಳಲ್ಲಿ ಪಕ್ಷಿಗಳು ಕಟ್ಟಿದ್ದ ಗೂಡುಗಳು ಭಸ್ಮವಾಗಿವೆ. ಬಿಸಿಲ ಬೇಗೆ ಹಾಗೂ ಗಾಳಿ ರಭಸದಿಂದ ಬೆಂಕಿಯ ರುದ್ರನರ್ತನಕ್ಕೆ ಅಪಾರ ಹಾನಿ ಸಂಭವಿಸಿದೆ.

ಕಿಡಿಗೇಡಿಗಳು ದುರುದ್ದೇಶದಿಂದಲೇ 4-5 ಕಡೆ ಬೆಂಕಿ ಹಾಕಿದ್ದಾರೆ. ಇದರಿಂದ ಬೆಂಕಿ ಎಲ್ಲೆಡೆ ಆವರಿಸಿದೆ. ಅರಣ್ಯ ಇಲಾಖಾ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸುತ್ತಿದ್ದಾಗಲೇ ಜೋರಾಗಿ ಬೀಸಿದ ಗಾಳಿ ಬೆಂಕಿಯ ದಿಕ್ಕನ್ನೇ ಬದಲಿಸಿದೆ. ಇದರಿಂದ ಬೆಟ್ಟದ ಮೇಲ್ಭಾಗದವರೆಗೂ ಅಗ್ನಿ ಜ್ವಾಲೆ ವ್ಯಾಪಿಸಿದೆ. ಕೊನೆಗೆ ವ್ಯೂವ್ ಪಾಯಿಂಟ್‌ವರೆಗೂ ಹಬ್ಬಿದೆ. ಬೆಂಕಿ, ಬಿಸಿಲು, ಗಾಳಿಯೊಂದಿಗೆ ದಟ್ಟ ಹೊಗೆ ಆವರಿಸಿದ್ದರಿಂದ ಕಾರ್ಯಾಚರಣೆಗೆ ಕೆಲ ಕಾಲ ಅಡಚಣೆಯಾಯಿತು. ಬೆಂಕಿ ನಂದಿಸಲು ಆಗಮಿಸಿದ ಅಗ್ನಿಶಾಮಕ ದಳದ 40 ಸಿಬ್ಬಂದಿ, 4 ಭಾರೀ, 2 ಚಿಕ್ಕ ವಾಹನಗಳ ಮೂಲಕ ಬೆಂಕಿ ನಂದಿಸುವ ಪ್ರಯತ್ನಕ್ಕೆ ಮುಂದಾದರು. ಬೆಟ್ಟದ ವ್ಯೂವ್ ಪಾಯಿಂಟ್ ಬಳಿಯೇ ನೀರು ಪಂಪ್ ಮಾಡಿ, ಬೆಂಕಿ ಇನ್ನೂ ವ್ಯಾಪಕವಾಗಿ

▶ 9ನೇ ಪುಟಕ್ಕೆ

ಆರೋಗ್ಯ ಅಭಿಯಾನದ ಗುತ್ತಿಗೆ ನೌಕರರ ಸಂಭಾವನೆ ಶೇ.15ರಷ್ಟು ಹೆಚ್ಚಳ

ಬೆಂಗಳೂರು, ಮಾ.4(ಕೆಎಂಶಿ)- ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ನೌಕರರ ಸಂಭಾವನೆಯನ್ನು ಶೇ.15ರಷ್ಟು ಹೆಚ್ಚಿಸಲಾಗಿದೆ. ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. ಏಪ್ರಿಲ್ 1 ರಿಂದ ಇದು ಅನ್ವಯವಾಗಲಿದೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಅವರು, ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ವೇತನ ಹೆಚ್ಚಳ ಮಾಡಲು ಕ್ರಮ ವಹಿಸುವ ಬಗ್ಗೆ ಆಶ್ವಾಸನೆ ನೀಡಿದ್ದರು. ಕೆಲಸಕ್ಕೆ ಸೇರ್ಪಡೆಯಾಗುವ ಸಂದರ್ಭದಲ್ಲಿ 20 ಸಾವಿರ ರೂ.ಗಿಂತ ಕಡಿಮೆ ಸಂಭಾವನೆ ಇರುವ ನೌಕರರಿಗೆ ಶೇ.15ರಷ್ಟು ಹೆಚ್ಚಳವಾಗಲಿದೆ. 5 ವರ್ಷಕ್ಕಿಂತ ಹೆಚ್ಚು ಕಾಲ ನಿರಂತರವಾಗಿ ಕಾರ್ಯನಿರ್ವಹಿಸಿದ ಎನ್‌ಎಚ್‌ಎಂ ಮೆಡಿಕಲ್ ಅಧಿಕಾರಿಗಳಿಗೆ (ಎಂಬಿಬಿಎಸ್, ಆಯುಷ್, ಆರ್‌ಬಿಎಸ್‌ಕೆ, ದಂತವೈದ್ಯ ಸರ್ಜನ್‌ಗಳು) ಕೂಡ ಶೇ.15ರಷ್ಟು ಸಂಭಾವನೆ ಹೆಚ್ಚಿಸಲಾಗಿದೆ. ಎನ್‌ಎಚ್‌ಎಂ ಗುತ್ತಿಗೆ ತಜ್ಞರಿಗೆ, 3-5 ವರ್ಷಗಳ ಸೇವೆಯಲ್ಲಿರುವವರಿಗೆ ಶೇ.5, 5-10 ವರ್ಷಗಳ ಸೇವೆಯಲ್ಲಿರುವವರಿಗೆ ಶೇ.10, 10 ವರ್ಷಕ್ಕೂ ಅಧಿಕ ಕಾಲ ಸೇವೆಯಲ್ಲಿರುವವರಿಗೆ ಶೇ.15ರಷ್ಟು ಸಂಭಾವನೆ ಹೆಚ್ಚಳ ಮಾಡಲಾಗಿದೆ.

ಲಂಚಾವತಾರ: ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಬಂಧನಕ್ಕೆ ಆಗ್ರಹಿಸಿ

ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಯತ್ನ

ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೆವಾಲ, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿ ಇತರರ ಬಂಧನ





ಬೆಂಗಳೂರು, ಮಾ.4(ಕೆಎಂಶಿ)- ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಬಂಧಿಸಬೇಕು, ಭ್ರಷ್ಟಾಚಾರದ ಆರೋಪದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಶನಿವಾರ ಬೃಹತ್ ಪ್ರತಿಭಟನೆ ನಡೆಸಿತು. ಈ ಬೇಡಿಕೆ ಇಟ್ಟು ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ಕಾಂಗ್ರೆಸ್ ನಾಯಕರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದ್ದಾರೆ.

ಪ್ರತಿಭಟನೆಯಲ್ಲಿ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಅವರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಲಾಯಿತು. ರಣದೀಪ್ ಸಿಂಗ್ ಸುರ್ಜೆವಾಲ ಮಾತನಾಡಿ, ಭಾರತೀಯ ಜನತಾ ಪಕ್ಷ ಎಂಬುದರ ಬದಲು ಭ್ರಷ್ಟ ಜನತಾ ಪಕ್ಷ ಎಂದು ಮರುನಾಮಕರಣ ಮಾಡಿಕೊಳ್ಳಬೇಕು. ಬಸವರಾಜ ಬೊಮ್ಮಾಯಿ ಅವರ ಸರ್ಕಾರವನ್ನು ಭ್ರಷ್ಟಾಸುರ ಬೊಮ್ಮಾಯಿ ಸರ್ಕಾರ ಎಂದು ಕರೆಯಬೇಕು. ಈ ರಾಜ್ಯದಲ್ಲಿ ಬಿಜೆಪಿ ಹಾಗೂ ಬೊಮ್ಮಾಯಿ ಸರ್ಕಾರ ಜನರ ಹಣವನ್ನು ಸಂಪೂರ್ಣವಾಗಿ ಲೂಟಿ ಮಾಡುತ್ತಿದೆ. ರಾಜ್ಯದ ಬಿಜೆಪಿ ಸರ್ಕಾರ ದೇಶದಲ್ಲೇ ಭ್ರಷ್ಟಾಚಾರದ ಮಾದರಿಯನ್ನು ನೀಡಿದೆ. ಈ ಸರ್ಕಾರ 40% ಸರ್ಕಾರ ಎಂದು, ಮುಖ್ಯಮಂತ್ರಿಯನ್ನು ಪೇಸಿಎಂ ಎಂದು ಕರೆಯುತ್ತಾರೆ. ಈ ಮಾತನ್ನು ನಾವು ಮಾತ್ರ ಹೇಳುತ್ತಿಲ್ಲ. ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿಗೆ ಪತ್ರ ಬರೆದು, ಈ ಸರ್ಕಾರದಲ್ಲಿ ಕಮಿಷನ್ ನೀಡದೇ ಏನೂ ನಡೆಯುವುದಿಲ್ಲ ಎಂದು ಹೇಳಿದೆ.

▶ 6ನೇ ಪುಟಕ್ಕೆ

ಬಿಜೆಪಿ ಸೇರಲು ಸಂಸದೆ ಸುಮಲತಾ ಸಿದ್ಧತೆ

- ಎಸ್.ಎಂ.ಕೃಷ್ಣರ ಭೇಟಿ ಮಾಡಿ ಮಾತುಕತೆ
- ಬೆಂಬಲಿಗರೊಂದಿಗೆ ಸಭೆ ನಡೆಸಿ ಚರ್ಚೆ
- ಮಾ.12ರಂದು ಪ್ರಧಾನಿ ಸಮ್ಮುಖದಲ್ಲಿ ಬಿಜೆಪಿ ಸೇರುವ ಸಾಧ್ಯತೆ



ಬೆಂಗಳೂರು, ಮಾ. 4- ಬಿಜೆಪಿ ಸೇರಲು ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದು ಹೇಳಲ್ಪಡುತ್ತಿರುವ ಮಂಡ್ಯ ಪಕ್ಷೇತರ ಸಂಸದೆ ಸುಮಲತಾ ಅಂಬರೀಷ್ ಇಂದು ಈ ಸಂಬಂಧ ಕೆಲ ಆಪ್ತರ ಸಭೆ ಕರೆದು ಚರ್ಚಿಸಿದ್ದಾರೆ. ಅಲ್ಲದೇ, ಈ ಹಿಂದೆ ಬಿಜೆಪಿಯಲ್ಲಿದ್ದು ರಾಜಕೀಯ ನಿವೃತ್ತಿ ಹೊಂದಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

ಬೆಂಗಳೂರಿನ ಸದಾಶಿವನಗರದಲ್ಲಿರುವ ಎಸ್.ಎಂ.ಕೃಷ್ಣ ನಿವಾಸಕ್ಕೆ ತೆರಳಿದ ಸುಮಲತಾ ಅವರೊಂದಿಗೆ ಕೆಲ ನಿಮಿಷಗಳ ಕಾಲ ರಹಸ್ಯ ಸಮಾಲೋಚನೆ ನಡೆಸಿದರು. ಈ ವೇಳೆ ಅವರು ಮಾರ್ಚ್ 12ರಂದು ದಶಪಥ ರಸ್ತೆ ಉದ್ಘಾಟನೆಗೆ ಪ್ರಧಾನಿ ಮೋದಿ ಆಗಮಿಸುವ ವೇಳೆ ಸಮಾವೇಶದಲ್ಲಿ ಬಿಜೆಪಿ ಸೇರ್ಪಡೆಗೊಳ್ಳುವ ಬಗ್ಗೆ ಎಸ್.ಎಂ.ಕೃಷ್ಣ

▶ 9ನೇ ಪುಟಕ್ಕೆ

ಕಾಡಾನೆ ದಾಳಿ: ಅರಣ್ಯ ಸಿಬ್ಬಂದಿ ಬಲಿ



ಸರಗೂರು, ಮಾ.4-ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಬಲಿಯಾದ ಘಟನೆ ಹೆಚ್.ಡಿ. ಕೋಟೆ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಕಲ್ಕೆರೆ ವಲಯದಲ್ಲಿ ಸಂಭವಿಸಿದೆ. ತಾಲೂಕಿನ ದಡದಹಳ್ಳಿ ಹಾಡಿ ಆದಿವಾಸಿ, ಅರಣ್ಯ ಸಿಬ್ಬಂದಿ ಬೊಮ್ಮ (59) ದುರಂತ ಸಾವಿಗೀಡಾದವರು.

ವಿವರ: ಕಲ್ಕೆರೆ ವನ್ಯಜೀವಿ ವಲಯಕ್ಕೆ ಸೇರಿದ ವಾಚರ್‌ಗಳಾದ ಬೊಮ್ಮ ಹಾಗೂ ಮಧು ಕೋಯ್ಲಿರ್ ಶುಕ್ರವಾರ ಸಂಜೆ 5 ಗಂಟೆ ಸಮಯದಲ್ಲಿ ವಡೇರಹಳ್ಳಿ ಹಾಡಿಯಿಂದ ಎರನಕಡು ಕ್ಯಾಂಪ್‌ಗೆ ಹೋಗುತ್ತಿದ್ದ ವೇಳೆ ಕಾಡಾನೆ ಪ್ರತ್ಯಕ್ಷವಾಗಿ ಬೊಮ್ಮನನ್ನು ಅಟ್ಟಾಡಿಸಿದೆ. ಈ ವೇಳೆ ಗುಂಡಿಗೆ ಬಿದ್ದ ಬೊಮ್ಮನನ್ನು ಆನೆ ಸೊಂಡಿಲಿನಿಂದ ಎತ್ತಿ ಬಿಸಾಡಿ, ತನ್ನ ದಂತದಿಂದ ತಿವಿದು, ತುಳಿದು ಹಾಕಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ಬೊಮ್ಮನ ಸ್ಥಿತಿ ಬಗ್ಗೆ ಮಧು ಕೋಯ್ಲಿರ್

▶ 6ನೇ ಪುಟಕ್ಕೆ

ವಿರೂಪಾಕ್ಷಪ್ಪ ನಿವಾಸದಲ್ಲಿ ಲೋಕಾಯುಕ್ತ ಶೋಧ ಅಂತ್ಯ

ಕೆಜಿಗಟ್ಟಲೆ ಚಿನ್ನಾಭರಣ, ನಗದು, ಆಸ್ತಿ ಪತ್ರ ವಶ



ದಾವಣಗೆರೆ, ಮಾ.4- ಜಿಲ್ಲೆಯ ಚನ್ನಗಿರಿ ತಾಲೂಕಿನ ಚನ್ನೇಶಪುರ ಗ್ರಾಮದ ಮಾಡಾಳ್ ನಿವಾಸದಲ್ಲಿ ಸತತ 10 ಗಂಟೆಗಳ ಕಾಲ ಲೋಕಾಯುಕ್ತ ಪೊಲೀಸರು ನಡೆಸಿದ್ದ ಶೋಧ ಕಾರ್ಯ ಮುಕ್ತಾಯಗೊಂಡಿದ್ದು ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿದೆ. ಮಾಡಾಳ್ ನಿವಾಸದಲ್ಲಿ 2.800 ಕೆ.ಜಿ. ಚಿನ್ನಾಭರಣ, 20 ಕೆಜಿ ಬೆಳ್ಳಿ ಆಭರಣಗಳು, 16.5 ಲಕ್ಷ ರೂಪಾಯಿ ನಗದು ಹಾಗೂ ಅಪಾರ ಪ್ರಮಾಣದ ಆಸ್ತಿ ಪತ್ರಗಳು ಪತ್ತೆಯಾಗಿವೆ. ಲೋಕಾಯುಕ್ತ ಪೊಲೀಸರು ಚಿನ್ನ, ಬೆಳ್ಳಿ, ನಗದು ಮತ್ತು ಆಸ್ತಿ ಪತ್ರಗಳ ಪಟ್ಟಿ ಮಾಡಿದ್ದು ಇದಕ್ಕೆ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪತ್ನಿ ಲೀಲಾವತಿಯವರಿಂದ ಸಹಿ ಪಡೆದಿದ್ದಾರೆ.

ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಇಲ್ಲ: ಲಂಚ ಪಡೆದು ಸಿಕ್ಕಿಬಿದ್ದ ಆರೋಪಿ ಪಕ್ಷದ ಶಾಸಕ ಮತ್ತು ಅವರ ಮಗನನ್ನು ರಾಜ್ಯದ ಬಿಜೆಪಿ ಸರ್ಕಾರ ರಕ್ಷಿಸುವುದಿಲ್ಲ ಮತ್ತು ಲೋಕಾಯುಕ್ತ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶನಿವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಬಗ್ಗೆ ಈಗಾಗಲೇ ಹೇಳಿಕೆ ನೀಡಿದ್ದಾರೆ. ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಯಾರೂ ಪ್ರಯತ್ನಿಸುತ್ತಿಲ್ಲ. ಕಾನೂನು ಚೌಕಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಹೀಗಾಗಿ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ ಎಂದು ಹೇಳಿದರು.

ಬೊಮ್ಮಾಯಿ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಮುಖಂಡರು ನಡೆಸುತ್ತಿರುವ ಪ್ರತಿಭಟನೆ ಬಗ್ಗೆ ಪ್ರತಿಕ್ರಿಯಿಸಲು ಯಡಿಯೂರಪ್ಪ ನಿರಾಕರಿಸಿದರು. ಇದೇ ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚನ್ನಗಿರಿ ಕ್ಷೇತ್ರದ ಶಾಸಕ

▶ 9ನೇ ಪುಟಕ್ಕೆ

ಕಬ್ಬು ಬೆಳೆಗಾರರಿಗೆ ಟನ್ ಕಬ್ಬಿಗೆ ಹೆಚ್ಚುವರಿ 150 ರೂ. ನೀಡುವುದಕ್ಕೆ ತಡೆಯಾಜ್ಞೆ ತಂದ ಸಕ್ಕರೆ ಕಾರ್ಖಾನೆಗಳು

- ಜಿಲ್ಲಾಧಿಕಾರಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ವಿಷಯ ಬಯಲು
- ಸಕ್ಕರೆ ಕಾರ್ಖಾನೆಗಳ ಒಳೇಟಿನಿಂದ ಕಂಗಾಲಾದ ರೈತರು



ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಶನಿವಾರ ರೈತ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳ ಸಭೆ ನಡೆಯಿತು.

ಮೈಸೂರು, ಮಾ.4(ಎಸ್‌ಬಿಡಿ)- ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಟನ್‌ಗೆ ಹೆಚ್ಚುವರಿ 150 ರೂ. ನೀಡಬೇಕೆಂಬ ಸರ್ಕಾರದ ಆದೇಶಕ್ಕೆ ಕಾರ್ಖಾನೆಗಳು ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ಮೈಸೂರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇಂದು ನಡೆದ ರೈತರು, ಅಧಿಕಾರಿಗಳು ಹಾಗೂ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳ ಸಭೆಯಲ್ಲಿ ಬೆಳಕಿಗೆ ಬಂದಿದೆ.

ರೈತರ ನಿರಂತರ ಹೋರಾಟದ ಫಲವಾಗಿ ಟನ್ ಕಬ್ಬಿಗೆ 150 ರೂ. ಹೆಚ್ಚುವರಿ ನೀಡುವಂತೆ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ಆದೇಶಿಸಿತ್ತು. ಆದಾಗ್ಯೂ ರೈತರಿಗೆ ಹೆಚ್ಚುವರಿ ಹಣ ನೀಡುತ್ತಿಲ್ಲ ಎಂದು ನಾಲ್ಕೈದು ದಿನಗಳ ಹಿಂದೆಯೂ ಮೈಸೂರಿನಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ರೈತ ಮುಖಂಡರು ಹಾಗೂ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಹೆಚ್ಚುವರಿ 150 ರೂ. ಸಂಬಂಧ ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ಅಧಿಕಾರಿಗಳು ಹಾಗೂ ರೈತರಿಗೆ ಗೊತ್ತಾಗಿದ್ದು ಈ ಸಭೆಯಲ್ಲೇ ಎನ್ನುವುದು ವಿಶೇಷ. ನ್ಯಾಯಾಲಯದಲ್ಲಿ ಅಮೆಂಡ್ಮೆಂಟ್ ಪಿಟಿಷನ್ ಹಾಕಿ ತಡೆಯಾಜ್ಞೆ ಸಿಕ್ಕಿರುವ ಪ್ರತಿಯನ್ನೂ ಕೊಡದೆ, ರೈತರಿಗೆ ಹೆಚ್ಚುವರಿ ಹಣವನ್ನೂ ನೀಡದಿದ್ದರೆ ಹೇಗೆ ಎಂದು ಬಣ್ಣಾರಿ ಅಮ್ಮನ್ ಕಾರ್ಖಾನೆ ಪ್ರತಿನಿಧಿಗಳ ತರಾಟೆಗೆ ತೆಗೆದುಕೊಂಡ ಜಿಲ್ಲಾಧಿಕಾರಿಗಳು, ಈ ಬಗ್ಗೆ ಕಬ್ಬು ಅಭಿವೃದ್ಧಿ ಆಯುಕ್ತರಿಗೆ ಕರೆ ಮಾಡಿ ಖಚಿತಪಡಿಸಿಕೊಂಡರು. ಬಳಿಕ ಮುಂದಿನ ವಿಚಾರಣೆಯಲ್ಲಿ ತಡೆಯಾಜ್ಞೆ ತೆರವಿಗಾಗಿ ಪ್ರಯತ್ನಿಸುವುದಾಗಿ ಸಕ್ಕರೆ ಅಭಿವೃದ್ಧಿ ಆಯುಕ್ತರು ತಿಳಿಸಿದ್ದು, ನಾನು ಮಾ. 10ರೊಳಗೆ ಅಡ್ವೊಕೇಟ್ ಜನರಲ್ ಹಾಗೂ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ರೈತರ ಸಮಸ್ಯೆ ಹಾಗೂ ಆಗ್ರಹವನ್ನು ತಿಳಿಸುತ್ತೇನೆ. ನ್ಯಾಯಾಲಯದಲ್ಲಿ ಪ್ರಕರಣವಿರುವ ಕಾರಣ ನನ್ನ ಹಂತದಲ್ಲಿ ಏನೆಲ್ಲಾ ಪ್ರಯತ್ನ ಮಾಡಬಹುದೋ ಖಂಡಿತ ಮಾಡುತ್ತೇನೆ ಎಂದು ತಿಳಿಸಿದರು.

ರೈತರ ಬೇಸರ: ರೈತರು ಇಷ್ಟೆಲ್ಲಾ ಹೋರಾಟ ಮಾಡಿದರೂ ಹೀಗಾದರೆ ಏನು ಮಾಡುವುದು. ಸರ್ಕಾರ, ಜಿಲ್ಲಾಡಳಿತ ನಮಗೆ ನ್ಯಾಯ ಕೊಡಿಸದಿದ್ದರೆ ಇನ್ನೆಲ್ಲಿ ಹೋಗುವುದು. ನಾವು 500 ರೂ. ಹೆಚ್ಚಿಸಲು ಆಗ್ರಹಿಸಿದ್ದೆವು. ಆದರೂ ಸರ್ಕಾರ 150ರೂ. ಹೆಚ್ಚುವರಿ ನೀಡಲು ಆದೇಶಿಸಿತ್ತು.

▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಂಡ : ಏನೇ ಇವತ್ತು ಒಬ್ಬಟ್ಟು ಮಾಡಿದ್ದೀಯಾ? ಏನ್ ವಿಶೇಷ ಮತ್ತೆ ಹೊಸದಾಗಿ ಒಡವೆ ಬೇಕು ಅಂತ ಕೇಳ್ಬೇಡ ಆಮೇಲೆ

ಹೆಂಡತಿ : ಇಲ್ಲಾರೀ, ಮೊನ್ನೆ ನಿಮ್ಮ ಎಟಿಎಂನಲ್ಲಿ ನಲವತ್ತು ಸಾವಿರ ರೂ. ಡ್ರಾ ಮಾಡಿ ಸರ ಮಾಡಿಸಿಕೊಂಡೆ. ಅದನ್ನು ಹೇಳೋಣ ಅಂತಾನೇ ಒಬ್ಬಟ್ಟು ಮಾಡಿದ್ದು!

ಮೈಸೂರು ಮಿತ್ರ

ಭಾನುವಾರ, 5 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅಸಾಮಾನ್ಯ ವ್ಯಕ್ತಿಗಳು ಐಡಿಯಾಗಳ ಬಗ್ಗೆ ಚರ್ಚಿಸುತ್ತಾರೆ. ಸಾಮಾನ್ಯ ವ್ಯಕ್ತಿಗಳು ಸಂದರ್ಭಗಳ ಬಗ್ಗೆ ಚರ್ಚಿಸುತ್ತಾರೆ. ದುರ್ಬಲರು ಮಾತ್ರ ವ್ಯಕ್ತಿಯ ಅವಗುಣಗಳ ಬಗ್ಗೆ ಮಾತನಾಡುತ್ತಾರೆ –ಸಾಕ್ರಟಿಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಪ್ಪನಂತ ನಂಟನಿಲ್ಲ, ಸೊಪ್ಪಿನಂತ ಊಟವಿಲ್ಲ

ನಿಮ್ಮ ಪತ್ರಗಳು

ಆಹಾರ ಪದಾರ್ಥಗಳ ವಿತರಕರಿಗೆ ಹೊರೆಯಾದ ಅವೈಜ್ಞಾನಿಕ ಪ್ರವೇಶ ಶುಲ್ಕ

ಮಾನ್ಯರೆ,

ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ಸುಮಾರು 300ಕ್ಕೂ ಮೇಲ್ಪಟ್ಟು ಆಹಾರ ಹಾಗೂ ಇನ್ನಿತರ ಗ್ರಾಹಕ ವಸ್ತುಗಳ ವಿತರಕರು ಕಾರ್ಯನಿರ್ವಹಿಸುತ್ತಿದ್ದು, ನಗರ ಹಾಗೂ ಜಿಲ್ಲೆಯ ಅನೇಕ ದಿನಸಿ ಹಾಗೂ ಕಿರಾಣಿ ಅಂಗಡಿಗಳು, ಸೂಪರ್ ಮಾರ್ಕೆಟ್‌ಗಳು, ಔಷಧಿ ಅಂಗಡಿಗಳಿಗೆ ಸ್ವದೇಶಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಂದ ಉತ್ಪಾದಿಸಲ್ಪಟ್ಟ ಆಹಾರ ಹಾಗೂ ಇನ್ನಿತರ ಜೀವನಾವಶ್ಯಕ ಪದಾರ್ಥಗಳನ್ನು ನಿರಂತರವಾಗಿ ಪೂರೈಕೆ ಮಾಡುವ ಹೊಣೆಗಾರಿಕೆಯನ್ನು ನಿಭಾಯಿಸುತ್ತಾ ಬಂದಿದೆ. ಕಂಪನಿಯವರು ನಿಗದಿಪಡಿಸಿದ ಕನಿಷ್ಠ (ಶೇ. 4ರಂತೆ) ಕಮಿಷನ್ ಹಣದಲ್ಲಿ ಮುಂಚಿತವಾಗಿ ಹಣವನ್ನು ಪಾವತಿಸಿ ಪದಾರ್ಥಗಳನ್ನು ತರಿಸಿಕೊಂಡು ಮಾರುಕಟ್ಟೆಗಳಿಗೆ ಸಾಲದ ರೂಪದಲ್ಲಿ ಪೂರೈಕೆ ಮಾಡುವುದಲ್ಲದೆ, ಬರುವ ಅಲ್ಪ ಆದಾಯದಲ್ಲಿ ಕೆಲಸಗಾರರ ಸಂಬಳ, ಕಚೇರಿ ಹಾಗೂ ಗೋದಾಮಿನ ಬಾಡಿಗೆ, ಇಂಧನ, ಬ್ಯಾಂಕ್ ಸಾಲದ ಬಡ್ಡಿ ಹಣ ಹಾಗೂ ಕಾಲಕಾಲಕ್ಕೆ ಸರಕಾರಕ್ಕೆ ಸಲ್ಲಬೇಕಾದ ತೆರಿಗೆ ಪಾವತಿಸುವುದು ಹೀಗೆ ಎಲ್ಲಾ ಖರ್ಚು ವೆಚ್ಚಗಳನ್ನು ಹೊಂದಿಸಿಕೊಂಡು ಜೀವನ ನಿರ್ವಹಣೆಗಾಗಿ ನಂಬಿಕೊಂಡು ಬಂದ ವ್ಯವಹಾರವನ್ನು ತುಂಬಾ ಕಷ್ಟಪಟ್ಟು ನಡೆಸಿಕೊಂಡು ಹೋಗುವ ಪರಿಸ್ಥಿತಿ ಉದ್ಭವಿಸಿದೆ.

ಇದೆಲ್ಲದರ ನಡುವೆ ಇತ್ತೀಚಿನ ದಿನಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇವರಿಂದ ಬಂಡಿಪಾಳ್ಯದಲ್ಲಿ ನಮ್ಮಗಳ ಸರಕು ಸಾಗಣೆ ವಾಹನಗಳ ಮೇಲೆ (ಆಯಾ ಶ್ರೇಣಿಯ ವಾಹನಗಳಿಗೆ ಅನುಗುಣವಾಗಿ ದರವನ್ನು ನಿಗದಿಪಡಿಸಿ ಉದಾ: ಗೂಡ್ಸ್ ಆಟೋ, ಟಾಟಾ ಏಸ್, ಲಾರಿಗಳು) ಅವೈಜ್ಞಾನಿಕ ರೀತಿಯಲ್ಲಿ ಪ್ರವೇಶ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಈ ರೀತಿಯ ಪ್ರವೇಶ ಶುಲ್ಕ ಪ್ರತೀ ಬಾರಿ ಸದರಿ ಮಾರುಕಟ್ಟೆಯ ಪ್ರವೇಶ ದ್ವಾರದಲ್ಲಿ ವಸೂಲಾತಿ ಮಾಡುತ್ತಿರುವುದರಿಂದ ಸಾಮಾನ್ಯವಾಗಿ ದಿನಂಪ್ರತಿ ನಾಲ್ಕರಿಂದ ಐದು ಬಾರಿ ನಮ್ಮಗಳ ಸರಕು ಸಾಗಣೆ ವಾಹನಗಳ ಮೂಲಕ ಪದಾರ್ಥಗಳನ್ನು ಮಾರುಕಟ್ಟೆಗೆ ಪೂರೈಕೆ ಮಾಡುವ ಸಂದರ್ಭದಲ್ಲಿ ಹೆಚ್ಚೂ ಕಡಿಮೆ 600 ರಿಂದ 800 ರೂಗಳವರೆಗೆ ಹೊರೆ ಬೀಳುತ್ತಿದ್ದು, ಇವೆಲ್ಲವನ್ನೂ ತಮ್ಮ ಕನಿಷ್ಠ ಕಮಿಷನ್ ಹಣದಲ್ಲಿ ಭರಿಸಬೇಕಾದ ಪರಿಸ್ಥಿತಿ ಉದ್ಭವಿಸಿದೆ. ಇದರಿಂದ ನಮ್ಮ ವ್ಯವಹಾರದಲ್ಲಿ ತೀವ್ರತರನಾದ ಆರ್ಥಿಕ ತೊಂದರೆ ಅನುಭವಿಸುವಂತಾಗಿದೆ. ಈ ರೀತಿ ಪದೇ ಪದೆ ಪ್ರವೇಶ ಶುಲ್ಕ ವಸೂಲು ಮಾಡುವ ಬದಲಾಗಿ, ವಿತರಕರಿಗೆ ಹೆಚ್ಚಿನ ಹೊರೆಯಾಗದಂತೆ ಆದಷ್ಟು ರಿಯಾಯಿತಿ ದರದಲ್ಲಿ ದರ ನಿಗದಿಪಡಿಸಿ ತಿಂಗಳ ಅಥವಾ ಮೂರು ತಿಂಗಳಿಗೊಮ್ಮೆ ಹಣವನ್ನು ಕಟ್ಟಿಸಿಕೊಂಡು ಉಚಿತ ಪ್ರವೇಶ ಪಾಸ್ ಅವಧಿಗೆ ಅನುಗುಣವಾಗಿ ವಿತರಿಸಿದರೆ ಈ ಮೂಲಕ ಸ್ವಲ್ಪಮಟ್ಟಿಗಾದರೂ ಅನುಕೂಲವಾಗುವುದು. ದಯವಿಟ್ಟು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಮ್ಮ ದೂರಿಗೆ ಸ್ಪಂದಿಸಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕಳಕಳಿಯ ಮನವಿ.

–ಜಿ.ಎಸ್. ಗಣೇಶ್ ರಾವ್, ಮೈಸೂರು ಜಿಲ್ಲಾ ವಿತರಕರ ಸಂಘ, ಮೈಸೂರು.

ಸಾರ್ವಜನಿಕ ಶೌಚಾಲಯ ಉಪಯೋಗಕ್ಕೆ ಮುಕ್ತಗೊಳಿಸಿ



ಮಾನ್ಯರೆ,

ಮೈಸೂರಿನ ಕೆಲವು ಉದ್ಯಾನವನಗಳಲ್ಲಿ ಸಾರ್ವಜನಿಕರಿಗೆ ಉಪಯೋಗವಾಗಲೆಂದು ಶೌಚಾಲಯ ನಿರ್ಮಾಣ ಮಾಡಲಾಗಿದೆ. ಉದಾಹರಣೆಗೆ–1. ಉದಯಗಿರಿ ನೆಹರು ಪಾರ್ಕ್ ಬಳಿ, 2. ಗಾಯತ್ರಿಪುರಂನ ಮದಕರಿನಾಯಕ ಪಾರ್ಕ್ ಬಳಿ, 3. ಕಲ್ಯಾಣಗಿರಿಯ ತ್ರಿವೇಣಿ ಪಾರ್ಕ್ ಬಳಿ. ಆದರೆ, ಇದು ಒಂದು ದಿನವು ಉಪಯೋಗಕ್ಕೆ ಬಾರಲಿಲ್ಲ. ಅವಶ್ಯಕತೆ ಇಲ್ಲದಿದ್ದಲ್ಲಿ ಪಾಲಿಕೆ ಇದರ ನಿರ್ಮಾಣ ಮಾಡಿರುವುದಾದರೂ ಏಕೆ ಎಂಬ ಪ್ರಶ್ನೆ ಮೂಡಿದೆ? ನಿರ್ಮಾಣ ಮಾಡಿ ಹಲವು ವರ್ಷಗಳೇ ಕಳೆದರೂ ಶೌಚಾಲಯ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುತ್ತಿಲ್ಲವೇಕೆ? ದಯವಿಟ್ಟು ಮೈಸೂರು ಮಹಾನಗರ ಪಾಲಿಕೆ, ಸದಸ್ಯರು ಮತ್ತು ಶಾಸಕರು ಈ ಬಗ್ಗೆ ಗಮನಹರಿಸಿ, ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮುಕ್ತಗೊಳಿಸಬೇಕಾಗಿ ವಿನಂತಿ. ಇದರಿಂದ ಉದ್ಯಾನವನಕ್ಕೆ ಬರುವ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲು ಕೆಲಸಕಾರ್ಯಗಳಿಗೆ ಬರುವ ವ್ಯಕ್ತಿಗಳಿಗೆ ಬಹಳ ಉಪಯೋಗವಾಗುತ್ತದೆ. ಎಲ್ಲದಕ್ಕೂ ಮೇಲು ಸುತ್ತಮುತ್ತಲಿನ ಪ್ರದೇಶ ನಿರ್ಮಲವಾಗಿರುತ್ತದೆ. ನಗರಗಳಲ್ಲಿ ಶೌಚಾಲಯವು ನೈರ್ಮಲ್ಯ ಕಾಪಾಡಲು ಪ್ರಮುಖ ಪಾತ್ರ ವಹಿಸುತ್ತದೆ. ಇದು ಸಾಂಕ್ರಾಮಿಕ ರೋಗ ತಡೆಗಟ್ಟಲು, ಆರೋಗ್ಯ ಕಾಪಾಡಲು ಸಹಕಾರಿಯಾಗಿದೆ. ಇದು ಕೇವಲ ಅನುಕೂಲದ ವಿಷಯವಲ್ಲ, ಆರೋಗ್ಯ ಮತ್ತು ಯೋಗಕ್ಷೇಮದ ವಿಷಯವಾಗಿದೆ.

–ರಾಜು. ಜೆ., ರಾಘವೇಂದ್ರ ನಗರ, ಮೈಸೂರು.

ನೂತನ ಆಸ್ತಿ ನೋಂದಣಿ ಸ್ವಾಗತಾರ್ಹ

ಮಾನ್ಯರೆ,

ಇನ್ನು ಮೂರು ತಿಂಗಳಲ್ಲಿ ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕಾವೇರಿ ತಂತ್ರಾಂಶ 2.0 ಜಾರಿಗೊಳ್ಳಲಿದ್ದು, ಆಸ್ತಿಯನ್ನು ಕೇವಲ 7 ರಿಂದ 10 ನಿಮಿಷದಲ್ಲಿ ನೋಂದಣಿ ಮುಗಿಯುತ್ತದೆ ಎಂದು ಕಂದಾಯ ಸಚಿವರಾದ ಆರ್. ಅಶೋಕ್ ಘೋಷಿಸಿರುವುದು ಸ್ವಾಗತಾರ್ಹ.

ಈ ತಂತ್ರಾಂಶ ಬಳಕೆ ಮೂಲಕ ನೋಂದಣಿ ಕಾರ್ಯ ತ್ವರಿತಗತಿಯಲ್ಲಿ ಆಗಲಿರುವುದು ಹೆಮ್ಮೆ ಕೂಡ. ಇದರಿಂದ ನೋಂದಣಿ ಕಚೇರಿಯಲ್ಲಿ ಕಾಯುವುದು ಪಾಳಿಯಲ್ಲಿ ನಿಲ್ಲುವ ಸಮಸ್ಯೆಗಳು ತಪ್ಪಬಹುದೆನಿಸುತ್ತದೆ! ನೋಂದಣಿ ಪ್ರಕ್ರಿಯೆಯು ಸಂಪೂರ್ಣವಾಗಿ ಆನ್‌ಲೈನ್ ಮತ್ತು ಸಂಪರ್ಕರಹಿತವಾಗಿ ನಾಗರಿಕ ನೋಂದಣಿ ಕಚೇರಿಗೆ ಹಾಜರಾಗುವ ಮೊದಲೇ ಎಲ್ಲಾ ಡೇಟಾ ಮತ್ತು ದಾಖಲಾತಿಗಳನ್ನು ಆನ್‌ಲೈನ್ ಅಪ್‌ಲೋಡ್ ಮಾಡಿ ಉಪ ನೋಂದಣಿ ಅಧಿಕಾರಿಗಳ ಪರಿಶೀಲನೆಗೆ ಸಲ್ಲಿಸಿ, ಪರಿಶೀಲಿಸಿದ ದಾಖಲೆಗಳನ್ನು ನಾಗರಿಕರಿಗೆ ನಿಗದಿತ ಶುಲ್ಕ ಪಾವತಿಸಲು ವ್ಯವಸ್ಥೆ ಮಾಡಿರುವುದು ಶ್ಲಾಘನೀಯ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ

ಬಹುಮುಖಿ

ನಾಡಿನ ಹಿಂದೂಸ್ತಾನಿ ಸಂಗೀತ ಶಿಖರ ಡಾ.ಗಂಗೂಬಾಯಿ ಹಾನಗಲ್

ಮಾ.5 ರಂದು ಖ್ಯಾತ ಹಿಂದೂಸ್ತಾನಿ ಗಾಯಕಿ ಪದ್ಮಭೂಷಣ ಡಾ.ಗಂಗೂಬಾಯಿ ಹಾನಗಲ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಹಿಂದೂಸ್ತಾನಿ ಸಂಗೀತ ದಿಗ್ಗಜ ಡಾ. ಗಂಗೂಬಾಯಿ ಹಾನಗಲ್ ಎಂದರೆ ಸಾಕ್ಷಾತ್ ಸಂಗೀತ ಶಾರದೆಯ ಬಾಯಿ. ಗಾಯನ ಲೋಕದ ಸ್ವರಗಳ ತಾಯಿ. ಹಿಂದೂಸ್ತಾನಿ ಹಾಡುಗಾರಿಕೆಯ ಮಾಯಿ.ಸುಶ್ರಾವ್ಯ ಜೇನ್ದನಿಯ ಆಯಿ. ರಾಗಾನು ರಾಗಗಳ ಅನು ರಾಗಮಯಿ. ಸರಸತಿಯ ಸಂಜಾತೆ ಸಿಹಿಗಾನಮಯಿ. ಸುಮಧುರ ತಾನನದ ಸುನಾದಮಯಿ. ಒಟ್ಟಾರೆ ಸಂಗೀತಾಮೃತದಲ್ಲಿ ಅದ್ದಿ ತೆಗೆದಂಥ ವ್ಯಕ್ತಿತ್ವದ ಅಮೃತಮಯಿ. ಎಂದೆಂದೂ ನಾಡು ಮರೆಯದ ನಾದ ದೇವತೆ ಇವರು. 'ಗಂಗೂಬಾಯಿ ಅವರ ಹಾಡುಗಾರಿಕೆಯನ್ನು ಕೇಳುವುದೆಂದರೆ ಪವಿತ್ರವಾದ ನದಿಯೊಂದರಲ್ಲಿ ಪುಣ್ಯಸ್ನಾನ ಮಾಡಿದಂತೆ...' ಹೌದು, ಸುವಿಖ್ಯಾತ ಹಿಂದೂಸ್ತಾನಿ ಸಂಗೀತ ದಿಗ್ಗಜ ಗಂಗೂಬಾಯಿ ಹಾನಗಲ್ ಕುರಿತಂತೆ ಮತ್ತೊಬ್ಬ ಸುವಿಖ್ಯಾತ ಸಂಗೀತಗಾರ ಡಾ.ರಾಜೀವ್ ತಾರಾನಾಥ್ ಹೇಳಿರುವ ಈ ಮಾತುಗಳು ಅಕ್ಷರಕ್ಷರವೂ ಸತ್ಯ! ಸಂಗೀತ ಲೋಕದ ಇಂಥ ಅದೆಷ್ಟು ವಿದ್ವಜ್ಜನರ ಹಾಗೂ ನಾಡು ಮಾತ್ರವಲ್ಲದೆ ದೇಶ–ವಿದೇಶಗಳ ವಿವಿಧ ಕ್ಷೇತ್ರಗಳ ಗಣ್ಯಾತಿಗಣ್ಯ ಮಹನೀಯರ ಹೊಗಳಿಕೆಯ ಹೂಮಳೆಯಲ್ಲಿ ಇವರು ನೆನೆದು ಅದೆಷ್ಟುತೊಯ್ದು ಹೋಗಿದ್ದರೋ ಊಹಿಸಲಸದಳ! ನಮ್ಮ ನಡುವಿನ ಜೀವಂತ ದಂತಕಥೆಯಂತಿದ್ದ ಇಂಥ ಸಂಗೀತ ಮೇರು ಹಿಂದೂಸ್ತಾನಿ ಗಾಯಕಿ, ಗಾಯನಗಂಗೆ ಗಂಗೂಬಾಯಿ ಹಾನಗಲ್ ಅವರು ತಮ್ಮ ಹೆಸರಿನಲ್ಲಿ ಗಂಗೆಯನ್ನು ಕಟ್ಟಿಕೊಂಡಿರುವಂತೆಯೇ ಅದಕ್ಕೆ ಅನ್ವರ್ಥವಾಗಿ ತಮ್ಮ ಬದುಕಿನುದ್ದಕ್ಕೂ ಸಂಗೀತ ಗಂಗೆಯನ್ನು ರಾಜ್ಯಾದ್ಯಂತ ಮಾತ್ರವಲ್ಲದೆ ರಾಷ್ಟ್ರಾದ್ಯಂತ, ವಿಶ್ವಾದ್ಯಂತ ಎಂದೂ ನಿಲ್ಲದ ನದಿಯಾಗಿ ಹರಿಸಿದವರು.ಇಲ್ಲಿ ಮಿಂದೆದ್ದು ಪಾವನವಾದವರೆಷ್ಟೋ! ಹಾಗೆಯೇ ಈ ಹಾದಿಯಲ್ಲಿ ಗೌರೀಶಿಖರವಾಗಿ ಬೆಳೆದು ಮಹಾಗಾಯಕಿಯಾಗಿದ್ದ ಇವರು ಸಂಗೀತ ಲೋಕದ ವಿಸ್ಮಯವಾಗಿ ಹಿಂದೂಸ್ತಾನಿ ಸಂಗೀತವನ್ನು ಅದರ ಎಲ್ಲ ಸೊಗಸು–ಸೌಂದರ್ಯದ ಚೆಲುವಿನ ಚೆಂದದೊಡನೆ ಜಗದ್ವಿಖ್ಯಾತವಾಗಿ ಜನಪ್ರಿಯಗೊಳಿಸುವ ಕೆಲಸವನ್ನೂ ಮಾಡಿದ್ದರು, ಮಾತ್ರವಲ್ಲ ಹಿಂದೂಸ್ತಾನಿ ಸಂಗೀತ ಎಂದರೆ ಏನು? ಎತ್ತ? ಅದು ಹೇಗಿರಬೇಕು? ಎನ್ನುವುದನ್ನೂ ತಮ್ಮ ಅಪ್ರತಿಮ ಸಾಧನೆಯ ಮೂಲಕವೇ ತೋರಿಸಿಕೊಟ್ಟು ಹಿಂದೂಸ್ತಾನಿ ಸಂಗೀತಕ್ಕೊಂದು ಘನತೆ ತಂದುಕೊಟ್ಟಿದ್ದರು.



ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಪ್ರಪಂಚದಲ್ಲಿ ಭಾರತ ಕಂಡ ಅಸಾಧಾರಣ ಪ್ರತಿಭಾಸಿರಿ, ಸ್ವರಸಾಮ್ರಾಜ್ಞಿ, ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರು ಕರ್ನಾಟಕದ ಸಂಗೀತನಿಧಿಯಾಗಿ 1913ರ ಮಾರ್ಚ್ 5 ರಂದು ಧಾರವಾಡದಲ್ಲಿ ಜನಿಸಿದರು. ಬಾಲ್ಯದಿಂದಲೂ ಸಂಗೀತಾಸಕ್ತರಾದ ಇವರು ಸ್ವರಗಳೊಡನೆ ಆಟವಾಡುತ್ತಾ ರಾಗಗಳೊಡನೆ ಬೆಳೆದರು. ತಾಯಿ ಅಂಬಾಬಾಯಿ ಅವರಿಂದ ಸಂಗೀತ ಸಾಮ್ರಾಜ್ಯಕ್ಕೆ ಹೆಜ್ಜೆಯಿರಿಸಿ, ಪ್ರಾರಂಭದಲ್ಲಿ ಗುರುಗಳಾದ ಕೃಷ್ಣಮಾಚಾರಿ ಹುಲ್ಲೂರು ಮತ್ತು ಸವಾಯಿಗಂಧರ್ವ ಅವರುಗಳ ಮಾರ್ಗದರ್ಶನದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಅಭ್ಯಾಸ ಮಾಡಿ ನಂತರ ಉಸ್ತಾದ್ ಅಬ್ದುಲ್ ಕರೀಂಖಾನ್ ಅವರ ಪಟ್ಟಶಿಷ್ಯೆಯಾಗಿ ಕಿರಾನಾ ಘರಾನಾ ಶೈಲಿಯಲ್ಲಿ ಅತ್ಯದ್ಭುತ ಸಾಧನೆಯನ್ನು ಮಾಡಿ, ಸಂಗೀತ ಸಾಮ್ರಾಜ್ಞಿಯಾಗಿ ರೂಪುಗೊಂಡವರು. ಇವರ ತಂದೆ ಚಿಕ್ಕೂರಾವ್ ನಾಡಗೀರರು.

1924ರಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರ ಸಮ್ಮುಖದಲ್ಲಿ ಸ್ವಾಗತಗೀತೆ ಹಾಡಿ ಬಾಪು ಅವರಿಂದಲೇ ಭೇಷ್ ಎನಿಸಿಕೊಂಡಿದ್ದ ಹಿರಿಮೆ ಗಂಗೂಬಾಯಿ ಅವರದ್ದು. ಸುಮಾರು ಏಳೂವರೆ ದಶಕಗಳ ಸುದೀರ್ಘ ಕಾಲ ಜಗದ ಉದ್ದಗಲಕ್ಕೂ ತಮ್ಮ ಸ್ವರ ಮಾಧುರ್ಯವನ್ನು ಹರಡಿ ಹಾಡುತ್ತಾ ಕೋಟಿ ಕೋಟಿ ಸಂಗೀತ ಪ್ರೇಮಿಗಳ ಹೃನ್ಮನವನ್ನು ಸೂರೆಗೊಂಡವರು. ಇವರು 1932ರಲ್ಲಿ ಪ್ರತಿಷ್ಠಿತ ಹೆಚ್.ಎಂ.ವಿ. ಧ್ವನಿಸುರುಳಿಗಾಗಿ ಹಾಡಿ, 1933ರಲ್ಲಿ ಮುಂಬೈನ ಆಕಾಶವಾಣಿಯಲ್ಲಿ ಹಾಡಿ ವಿಶೇಷವಾಗಿ ಹೆಸರು ಮಾಡಿದವರು. 1952ರಲ್ಲಿ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಎದುರು ಜಯಪುರದ ಅರಮನೆಯಲ್ಲಿ ಹಾಡಿದ ಇವರು ಅಪಾರ ಜನ ಮೆಚ್ಚುಗೆಗೆ ಪಾತ್ರರಾಗಿದ್ದರು. ಹಾಗೆಯೇ ತಮ್ಮ 95ನೇ ವಯಸ್ಸಿನಲ್ಲೂ 20ರ ಹರೆಯದವರೂ ನಾಚುವಂತೆ 2006ರಲ್ಲಿ ಸತತ 45 ನಿಮಿಷಗಳ ಕಾಲ ಹಾಡಿ ಕೇಳುಗರನ್ನು ಮೂಕವಿಸ್ಮಿತಗೊಳಿಸಿದ್ದ ಇವರು ಮುಂದಿನ ಪೀಳಿಗೆಯ ಸಂಗೀತಗಾರರಿಗೆ ಊಹಿಸಲಿಕ್ಕೂ ಆಗದ ವಿಸ್ಮಯ ಸಂಗೀತ ಸಾಗರ!

ಸಾಂಸ್ಕೃತಿಕ ರಾಯಭಾರಿ ಆಗಿ ಇಂಗ್ಲೇಂಡ್, ಅಮೇರಿಕ, ಜರ್ಮನಿ, ಕೆನಡ, ಫ್ರಾನ್ಸ್, ಪಾಕಿಸ್ತಾನ ಮುಂತಾದ ಹಲವಾರು ದೇಶಗಳಲ್ಲಿ ಪ್ರವಾಸ ಕೈಗೊಂಡು ತಮ್ಮ ಗಾನಗಂಗೆಯಿಂದ ಸಂಗೀತ ಪ್ರೇಮಿಗಳನ್ನು ಸಂತಸದಿಂದ ತೋಯ್ದುಹೋಗುವಂತೆ ಮಾಡಿದ್ದ ಗಂಗೂಬಾಯಿ ಅವರು ಭಾರತದ ಒಂಭತ್ತು ಪ್ರಧಾನಿಗಳಿಂದ ಮತ್ತು ಐವರು ರಾಷ್ಟ್ರಪತಿಗಳಿಂದ ಗೌರವಿಸಲ್ಪಟ್ಟಿದ್ದರೆಂದರೆ ಇದೇನೂ ಸಾಮಾನ್ಯ ವಿಷಯವಲ್ಲ. ಸುವರ್ಣಾಕ್ಷರಗಳಲ್ಲಿ ಬರೆದು ವಜ್ರದ ಚೌಕಟ್ಟಿನಲ್ಲಿ ದಾಖಲಿಸುವಂತಾದ್ದು! ಎಷ್ಟು ಮಂದಿ ಸಂಗೀತಗಾರರಿಗೆ ಇಂಥ ಭಾಗ್ಯ ಪ್ರಾಪ್ತವಾದೀತು? ಅದೆಷ್ಟು ಮಂದಿಗೆ ಇಂಥ ಸಾಧನೆ ಸಾಧ್ಯವಾದೀತು?

ಗಂಗೂಬಾಯಿ ಅವರ ಸಾಧನೆ ಬಹುದೊಡ್ಡದಾದರೂ ಇದಕ್ಕಾಗಿ ಇವರು ನಡೆದುಬಂದ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಪಟ್ಟಪಾಡುಗಳು, ಉಂಡ ಕಷ್ಟಗಳು, ನೋವಿನ ಸ್ವರಗಳನ್ನು, ದುಃಖದ ಹೊಸರಾಗಗಳನ್ನು ಹರಿಸುವಂತೆ ಮಾಡಿದ್ದವು. ಒಂದು ರೀತಿ ಕಾವ್ಯಲೋಕದಲ್ಲಿ ಬೆಂದು ಬೇಂದ್ರೆಯಾದಂತೆ ಸಂಗೀತಲೋಕದಲ್ಲಿ ನೊಂದು ಗಂಗೆಯಾಗಿದ್ದರಿವರು.

> **ಗಂಗೂಬಾಯಿ ಅವರ ಸಾಧನೆ ಬಹುದೊಡ್ಡದಾದರೂ ಇದಕ್ಕಾಗಿ ಇವರು ನಡೆದುಬಂದ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಪಟ್ಟಪಾಡುಗಳು, ಉಂಡ ಕಷ್ಟಗಳು, ನೋವಿನ ಸ್ವರಗಳನ್ನು, ದುಃಖದ ಹೊಸರಾಗಗಳನ್ನು ಹರಿಸುವಂತೆ ಮಾಡಿದ್ದವು. ಒಂದು ರೀತಿ ಕಾವ್ಯಲೋಕದಲ್ಲಿ ಬೆಂದು ಬೇಂದ್ರೆಯಾದಂತೆ ಸಂಗೀತಲೋಕದಲ್ಲಿ ನೊಂದು ಗಂಗೆಯಾಗಿದ್ದರಿವರು.**

ಬಡ ಕುಟುಂಬವಾದ್ದರಿಂದ ಇವರ ಬಾಲ್ಯವೂ ಸುಖಕರವಾಗಿರಲಿಲ್ಲ. ಹಾಗೆಯೇ ಯೌವನಾವಸ್ಥೆಗೆ ಕಾಲಿಟ್ಟಾಗಲೂ ಸುಖವೆಂಬುದು ಇವರನ್ನು ಹುಡುಕಿಕೊಂಡು ಬರಲಿಲ್ಲ. ಜೊತೆಯಾಗಿ ಬದುಕಿದ ವಕೀಲ ಗುರುನಾಥ್ ಕೌಲಗಿ ಕೂಡ ಹೆಚ್ಚುಕಾಲ ಇವರೊಡನೆ ಜೀವಂತವಾಗಿ ಉಳಿಯದೆ ಇವರನ್ನು ಒಂಟಿಯಾಗಿ ಬಿಟ್ಟು ಮತ್ತೆ ಬಾರದ ಲೋಕದತ್ತ ನಡೆದುಬಿಟ್ಟಿದ್ದರು. ಆಗ ಏಕಾಂಗಿಯಾಗಿ ಜೀವನದ ನೊಗ ಹೊತ್ತ ಇವರಿಗೆ ಜೊತೆಯಾಗಿದ್ದದ್ದು ಸಂಗೀತ ಮಾತ್ರವೇ ಆದರೂ ಮಗಳು ಕೃಷ್ಣಾ ಹಾನಗಲ್ ಇವರ ಸಂಗೀತ ನಡೆಗೆ, ಹಾಡಿಗೆ ಆಧಾರವಾಗಿದ್ದರು. ಆದರೆ ನೋವಿನ ಮೇಲೆ ಮತ್ತೊಂದು ನೋವಿನ ಬರೆ ಎಂಬಂತೆ ಇವರು ಹೆಚ್ಚು ಪ್ರೀತಿಸುತ್ತಿದ್ದ ಪ್ರೇಮದ ಪುತ್ರಿ ಕೃಷ್ಣಾ ಹಾನಗಲ್ ಸಹ ತಾಯಿಯನ್ನು ತೊರೆದು ಪರಮಾತ್ಮನ ಪಾದ ಸೇರಿಕೊಂಡಾಗ ದುಃಖದ ಪ್ರಪಾತವನ್ನು ಇವರು ಕಂಡಿದ್ದರು. ಏಕೆಂದರೆ ಮಗಳು ಕೃಷ್ಣಾ ಹಾನಗಲ್ ಬರೀ ಮಗಳಾಗಿರಲಿಲ್ಲ. ಬದಲಿಗೆ ಇವರ ಸಾಧನೆಯ ಹಾದಿಯಲ್ಲಿ ಜೊತೆಗಾತಿಯಾಗಿದ್ದಳು. ವಿಧಿ ತಂದೊಡ್ಡಿದ ಈ ಎಲ್ಲಾ ನೋವುಗಳ ದಾರಿಯಲ್ಲಿ ನಡೆದು ದುಃಖವನ್ನೆಲ್ಲಾ ಒತ್ತಟ್ಟಿಗೆ ಒತ್ತರಿಸಿ ಸಂಗೀತದ ಹೆದ್ದಾರಿಯನ್ನು ತೆರೆದು ಕೊಂಡ ಮಹಾಸಾಧಕಿ ಗಂಗೂಬಾಯಿ ಅವರಿಗೆ ಯಾರು ತಾನೆ ಸಾಟಿಯಾಗಬಲ್ಲರು? ಸೂರ್ಯನ ಕಾಂತಿಗೆ ಸೂರ್ಯನೆ ಸಾಟಿ ಎಂಬಂತೆ ಗಂಗೂಬಾಯಿ ಅವರ ಸಂಗೀತ ದೈಸಿರಿಗೆ, ಹಾಡಿನ ಹೊನ್ನಕಂಠಕ್ಕೆ ಅವರು ಮಾತ್ರವೇ ಸಾಟಿ ಯಾಗಿದ್ದರು ಎನ್ನಬಹುದು!

ಮಹಿಳೆಯರು ಏನಿದ್ದರೂ ತುಮರಿಯಂತಹ ಹಗುರವಾದ ರಾಗಗಳುಳ್ಳ ಸಾಮಾನ್ಯ ಸಂಗೀತಕ್ಕಷ್ಟೇ ಸರಿ ಎಂಬ ಮಾತನ್ನು ಸುಳ್ಳು ಮಾಡಿ ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಯದಲ್ಲಿ ತಮ್ಮ ಅನನ್ಯ ಪ್ರತಿಭೆಯಿಂದ ನೂತನ ಅಧಿಪತ್ಯ ಸ್ಥಾಪಿಸಿದ ಅಪೂರ್ವ ಸಾಧಕಿ ಗಂಗೂಬಾಯಿ ಅವರೆಂದರೆ ಖಂಡಿತ ಅತಿಶಯೋಕ್ತಿಯಾಗಲಾರದು. ಸಂಗೀತವನ್ನು ಜೀವ, ಜೀವನ, ಜೀವದುಸಿರು, ಜೀವದಸಿರು ಮಾಡಿಕೊಂಡಿದ್ದ 'ಭಾರತೀಯ ಶಾಸ್ತ್ರೀಯ ಸಂಗೀತ, ಕಲೆ ಉಳಿಸಿ ಬೆಳೆಸುವುದೇ ನನ್ನ ಜೀವನದ ಗುರಿ' ಎಂದು ಹೇಳುತ್ತಿದ್ದ ಇಂಥ ಸಂಗೀತರತ್ನವನ್ನು ಪಡೆದ ಕನ್ನಡಮ್ಮ ಮಹಾಭಾಗ್ಯಶಾಲಿಯೇ ಸರಿ.

ಇಂಥ ಗಾನಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್ ಅವರಿಗೆ 1962ರ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, 1971ರಲ್ಲಿ ಪದ್ಮಭೂಷಣ ಪ್ರಶಸ್ತಿ, 1973ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1984ರಲ್ಲಿ ತಾನ್‌ಸೇನ್ ಪ್ರಶಸ್ತಿ, 1990ರಲ್ಲಿ ಅಫೀಜ್ ಅಲಿಖಾನ್ ಮೆಮೋರಿಯಲ್ ಪ್ರಶಸ್ತಿ, 1992ರಲ್ಲಿ ಐ.ಟಿ.ಸಿ. ಸಂಗೀತ ಪ್ರಶಸ್ತಿ, ಅದೇ ವರ್ಷ ಕನಕಪುರಂದರ ಪ್ರಶಸ್ತಿ, 1995ರಲ್ಲಿ ಟಿ.ಚೌಡಯ್ಯ ಮೆಮೋರಿಯಲ್ ಪ್ರಶಸ್ತಿ, 1996ರಲ್ಲಿ ಕೇಂದ್ರ ಸರ್ಕಾರದ ಫೆಲೋಷಿಪ್, 1997ರಲ್ಲಿ ಗಾನಯೋಗಿ ಪಂಚಾಕ್ಷರಿ ಪ್ರಶಸ್ತಿ, 1998ರಲ್ಲಿ ದೀನಾನಾಥ್ ಮಂಗೇಶ್ಕರ್ ಪ್ರಶಸ್ತಿ, 2002ರಲ್ಲಿ ಪದ್ಮವಿಭೂಷಣ ಪ್ರಶಸ್ತಿ, 2004ರಲ್ಲಿ ಉಸ್ತಾದ್ ಇನಾಯತ್ ಖಾನ್ ಮೆಮೋರಿಯಲ್ ಪ್ರಶಸ್ತಿ, ಅದೇ ವರ್ಷ ನ್ಯಾಷನಲ್ ಆರ್ಟಿಸ್ಟ್ ಅವಾರ್ಡ್, 2006ರಲ್ಲಿ ಭಾರತೀಯ ಸಂಗೀತ ಪ್ರಶಸ್ತಿ, 2007ರಲ್ಲಿ ಗುರುಗಂಧರ್ವ ಪ್ರಶಸ್ತಿ, 2008ರಲ್ಲಿ ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ, 2007ರ ಈ ಟಿ.ವಿ. ವರ್ಷದ ಕನ್ನಡಿಗ ಪ್ರಶಸ್ತಿ ಸೇರಿದಂತೆ ಹಲವಾರು ರಾಜ್ಯ ಮತ್ತು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿದ್ದವು.

ಕರ್ನಾಟಕ ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪುರಸ್ಕಾರ, ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ, ಮುಂಬೈನಿಂದ ಸಂಗೀತ ಮಹಾಮಹೋಪಾಧ್ಯಾಯ ಎಂಬ ಡಾಕ್ಟರ್ ಆಫ್ ಮ್ಯೂಸಿಕ್ ಪದವಿ, 2008ರ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮತ್ತು 2003ರಲ್ಲಿ ಕರ್ನಾಟಕ ಸರ್ಕಾರದಿಂದ ಇವರ ಸಂಗೀತ ಸಾಧನೆಗೆ ಸಾಕ್ಷ್ಯಚಿತ್ರದ ಗೌರವ. ಇವು ಗಂಗೂಬಾಯಿ ಅವರಿಗೆ ಸಂದಿದ್ದ ಅವರ ಗೌರವದ ಮತ್ತಷ್ಟು ಹೊನ್ನಗರಿಗಳು. ಗುರುವರ್ಯ ಸವಾಯಿ ಗಂಧರ್ವ ವಿಶ್ವಸ್ಥ ಸಂಸ್ಥೆಯು ಕೊಡಮಾಡುವ 2008ನೇ ಸಾಲಿನ ಪ್ರತಿಷ್ಠಿತ ಪ್ರಪ್ರಥಮ ಸವಾಯಿ ಗಂಧರ್ವ ರಾಷ್ಟ್ರೀಯ ಸಂಗೀತ ಪುರಸ್ಕಾರಕ್ಕೂ ಇವರು ಭಾಜನರಾಗಿದ್ದರು. ಸಂಗೀತ ಲೋಕದ ಇಂಥ ಮೇರು ಸಾಧಕಿಯ ಸಂಸ್ಮರಣಾರ್ಥ ಕರ್ನಾಟಕ ಸರ್ಕಾರವು ಇವರ ಹೆಸರಿನಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯವನ್ನು ಮೈಸೂರಿನಲ್ಲಿ ಸ್ಥಾಪಿಸಿ ಬಹುದೊಡ್ಡ ಗೌರವ ನೀಡಿದೆ.

ಇಂಥ ಸಂಗೀತ ಲೋಕದ ಭೀಮಸದೃಶ ಮೇರುಗಿರಿ 2009 ಜುಲೈ 21ರ ಭೀಮನ ಅಮಾವಾಸ್ಯೆಯಂದು ಮುಂಜಾನೆ 7 ಗಂಟೆ 10 ನಿಮಿಷಕ್ಕೆ ಸರಿಯಾಗಿ ಜವರಾಯನೊಡನೆ ಹೊರಟುಬಿಟ್ಟರು. ಆದರೇನಂತೆ ಭೌತಿಕವಾಗಿ ಗಂಗೂಬಾಯಿಯವರು ಇಲ್ಲವಾಗಿರಬಹುದು, ಆದರೆ ತಮ್ಮ ಸಂಗೀತ ಸಾಧನೆಯ ಮೂಲಕ ಇವರು ಎಂದೆಂದೂ ಅಜರಾಮರರು. ಒಂದು ಸಮಾಧಾನಕರ ಸಂಗತಿ ಎಂದರೆ ಸಂಗೀತ ಲೋಕದ ಇಂಥ ಮೇರು ಶಿಖರದ ಉತ್ತರಾಧಿಕಾರಿಯಾಗಿ ಗಂಗೂಬಾಯಿ ಅವರ ಮೊಮ್ಮಗಳು ಪ್ರತಿಭಾನ್ವಿತ ಹಿಂದೂಸ್ತಾನಿ ಗಾಯಕಿ ವೈಷ್ಣವಿ ಹಾನಗಲ್ ತಲಕಾಡು ಅವರು ಅಜ್ಜಿ ನಡೆದ ಹಾದಿಯಲ್ಲೇ ಸಾಗುತ್ತಿದ್ದಾರೆ. ಮುಂದೊಂದು ದಿನ ಗಂಗಜ್ಜಿಯಂತೆಯೇ ಇವರೂ ಸಹ ಹಿಂದೂಸ್ತಾನಿ ಸಂಗೀತದಾಗಸದಲ್ಲಿ ಮಿನುಗುವಂತಹ ಎಲ್ಲಾ ಪ್ರತಿಭಾ ಲಕ್ಷಣಗಳನ್ನೂ ತೋರುತ್ತಿದ್ದಾರೆ. ಇವರು ಖ್ಯಾತ ಚಲನಚಿತ್ರ ಛಾಯಾಗ್ರಾಹಕ ಹಾಗೂ ಚಿತ್ರನಿರ್ಮಾಪಕ ಮಹೇಶ್ ತಲಕಾಡು ಅವರ ಧರ್ಮಪತ್ನಿಯಾಗಿದ್ದು ಅವರ ಒತ್ತಾಸೆ ಕೂಡ ಇವರಿಗಿದ್ದು ತಮ್ಮ ಅಜ್ಜಿಯನ್ನೇ ಮಾದರಿಯಾಗಿಟ್ಟುಕೊಂಡು ಹಿಂದೂಸ್ತಾನಿ ಸಂಗೀತದ ಹಿಮಾಲಯದತ್ತ ಒಂದೊಂದೇ ಮೆಟ್ಟಿಲನ್ನು ಏರುತ್ತಿದ್ದಾರೆ. ಅಜ್ಜಿ ಗಂಗೂಬಾಯಿ ಅವರಂತೆಯೇ ಸಂಗೀತಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ ಇವರು ಇದಕ್ಕಾಗಿಯೇ ವೈಷ್ಣವಿ ಹಾನಗಲ್ ತಲಕಾಡ್ ಮ್ಯೂಸಿಕ್ ಫೌಂಡೇಷನ್ ಎಂಬ ಸಂಸ್ಥೆಯನ್ನೂ ಸಾಂಸ್ಕೃತಿಕನಗರಿ ಮೈಸೂರಿನಲ್ಲಿ ಸ್ಥಾಪಿಸಿದ್ದಾರೆ.

---

40 ಪರ್ಸೆಂಟ್ ಸರ್ಕಾರ ಕಿತ್ತೊಗೆದು 0 ಪರ್ಸೆಂಟ್ ಎಎಪಿ ಸರ್ಕಾರ ತನ್ನಿ

*** ದಾವಣಗೆರೆಯ ಆಮ್ ಆದ್ಮಿ ಸಮಾವೇಶದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮನವಿ * ಪ್ರಧಾನಿ ಮೋದಿ 'ಡಬಲ್ ಇಂಜಿನ್' ಭರವಸೆ ನಂಬಿ ಜನ ಅಧಿಕಾರ ನೀಡಿದರು; ಈಗ ಭ್ರಷ್ಟಾಚಾರವೇ ಡಬಲ್ ಆಗಿದೆ * ಕಂತೆ ಕಂತೆ ಹಣ ಸಿಕ್ಕ ಮಾಡಾಳ್ ವಿರೂಪಾಕ್ಷಪ್ಪರ ಬಂಧಿಸಿಲ್ಲ; ಉತ್ತಮ ಶಿಕ್ಷಣ ವ್ಯವಸ್ಥೆ ಮಾಡಿದ ದೆಹಲಿಯ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಬಂಧಿಸಿದ್ದಾರೆ**

ದಾವಣಗೆರೆ: ಕರ್ನಾಟಕದಲ್ಲಿ 20 ಪರ್ಸೆಂಟ್ ಸರ್ಕಾರ ಇದೆ. ಅದನ್ನು ಕಿತ್ತೊಗೆದು ನಮಗೆ ಅಧಿಕಾರ ಕೊಡಿ. ಭ್ರಷ್ಟಾಚಾರ ಇಲ್ಲದಂತೆ ಮಾಡುತ್ತೇವೆ. ಡಬಲ್ ಎಂಜಿನ್ ಸರ್ಕಾರ ತರುತ್ತೇವೆ ಎಂದು ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದರು. ಜನ ನಂಬಿ ಅಧಿಕಾರವನ್ನೂ ನೀಡಿದರು. ಡಬಲ್ ಎಂಜಿನ್ ಸರ್ಕಾರ ಬಂದು ಇಲ್ಲಿ ಭ್ರಷ್ಟಾಚಾರವೇ ಡಬಲ್ ಆಯಿತು. 20 ಪರ್ಸೆಂಟ್ ಇದ್ದಿದ್ದು 40 ಪರ್ಸೆಂಟ್ ಆಯಿತು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಟೀಕಿಸಿದರು.

ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಶನಿವಾರ ನಡೆದ ಆಮ್ ಆದ್ಮಿ ಪಾರ್ಟಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದೆಹಲಿಯಲ್ಲಿ ಸರ್ಕಾರಿ ಶಾಲೆಗಳನ್ನು ಅತ್ಯುತ್ತಮವಾಗಿ ರೂಪಿಸಿದ್ದೇವೆ. ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಉಚಿತ ಸಮವಸ್ತ್ರ ನೀಡಿದ್ದೇವೆ. ದೆಹಲಿ ಜನರಿಗೆ ಉತ್ತಮ ಆಸ್ಪತ್ರೆ ಸೌಲಭ್ಯ ಉಚಿತವಾಗಿ ಒದಗಿಸಿದ್ದೇವೆ. ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ, 200 ಯುನಿಟ್ ವಿದ್ಯುತ್ ಉಚಿತ ಹೀಗೆ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದೇವೆ ಎಂದು ತಿಳಿಸಿದರು.

ದೆಹಲಿಯಲ್ಲಿ 12 ಲಕ್ಷ ಮಂದಿಗೆ, ಪಂಜಾಬ್‌ನಲ್ಲಿ 77 ಸಾವಿರ ಮಂದಿಗೆ ಉದ್ಯೋಗ ನೀಡಿದ್ದೇವೆ. ಕರ್ನಾಟಕದಲ್ಲಿ ಅಧಿಕಾರ ನೀಡಿದರೆ ದೆಹಲಿಯಲ್ಲಿ ಮಾಡಿರುವ ಎಲ್ಲ ಯೋಜನೆಗಳನ್ನು ಇಲ್ಲೂ ಜಾರಿಗೆ ತಂದು ಮಾದರಿ ರಾಜ್ಯವನ್ನಾಗಿ ಮಾಡುತ್ತೇವೆ. ಅದಕ್ಕಾಗಿ 40 ಪರ್ಸೆಂಟ್ ಸರ್ಕಾರವನ್ನು ಕಿತ್ತೊಗೆದು 0 ಪರ್ಸೆಂಟ್ ಸರ್ಕಾರ ನಡೆಸುವ ಆಮ್ ಆದ್ಮಿಯನ್ನು ಅಧಿಕಾರಕ್ಕೆ ತನ್ನಿ ಎಂದು ಕರೆ ನೀಡಿದರು.

ಲೋಕಾಯುಕ್ತ ದಾಳಿ ಮಾಡಿದಾಗ ಇಲ್ಲಿನ ಶಾಸಕ ವಿರೂಪಾಕ್ಷಪ್ಪ ಮನೆಯಲ್ಲಿ 8 ಕೋಟಿ ಹಣದ ಕಂತೆ ಸಿಕ್ಕಿದೆ. ಅವರನ್ನು ಬಂಧಿಸಿಲ್ಲ. ಆದರೆ ಉತ್ತಮ ಶಿಕ್ಷಣದ ವ್ಯವಸ್ಥೆ ಮಾಡಿರುವ ದೆಹಲಿಯ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಬಂಧಿಸಿದ್ದಾರೆ. ಅವರ ಮನೆಗೆ ದಾಳಿ ಮಾಡಿದ್ದಾರೆ. ಅಲ್ಲಿ ಕೇವಲ ರೂ. 10 ಸಾವಿರ ಸಿಕ್ಕಿದೆ. ಭ್ರಷ್ಟರನ್ನು ಜೈಲಿಗೆ ಕಳುಹಿಸುವ ಬದಲು ಈ ಕೇಂದ್ರ ಸರ್ಕಾರ ಪ್ರಾಮಾಣಿಕರನ್ನು ಜೈಲಿಗೆ ಕಳುಹಿಸುತ್ತದೆ ಎಂದು ಟೀಕಿಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮಾತನಾಡಿ, ಜನರ ಆಕ್ರೋಶವು ಬಿರುಗಾಳಿಯಾದರೆ ಈ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಅನ್ನು ಉರುಳಿಸಿ ಆಮ್ ಆದ್ಮಿ ಪಾರ್ಟಿಯನ್ನು ಅಧಿಕಾರಕ್ಕೆ ತರಲು ಸಾಧ್ಯ ಎಂದು ಹೇಳಿದರು. ಕೇಂದ್ರ ಮತ್ತು ಕರ್ನಾಟಕದ ಸರ್ಕಾರಗಳು ಜನರನ್ನು ಲೂಟಿ ಹೊಡೆಯುತ್ತಿವೆ. ಹಣ ಎಲ್ಲಿಂದ ಬರುತ್ತದೆ ಎಲ್ಲಿಗೆ ಹೋಗುತ್ತದೆ ಎಂಬ ಲೆಕ್ಕವೇ ಇಲ್ಲ. ಅರವಿಂದ್ ಕೇಜ್ರೀವಾಲ್ ಒಬ್ಬ ಆದಾಯ ತೆರಿಗೆ ಅಧಿಕಾರಿ. ಅವರಿಗೆ ಪೈಸೆ ಪೈಸೆ ಲೆಕ್ಕ ಗೊತ್ತು. ಅವರು ಪ್ರಧಾನಿಯಾದರೆ ಇವರು ನುಂಗಿ ಹಾಕಿರುವ ಎಲ್ಲ ಪೈಸೆಗಳ ಲೆಕ್ಕವನ್ನು ಪತ್ತೆ ಹಚ್ಚಿ ನೀಡಲಿದ್ದಾರೆ ಎಂದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಂಜನಗೂಡು ಪಟ್ಟಣದ ಶ್ರೀಕಂಠಪುರಿ ಬಡಾವಣೆಯಲ್ಲಿರುವ ನಂ.477, ಪುರಸಭೆ ಅಸೆಸ್‌ಮೆಂಟ್ ಸಂಖ್ಯೆ 3434/3249 ರ ಸ್ವತ್ತು ಮೂಲತಃವಾಗಿ ಎನ್.ಎಸ್.ರಾಜಾ ಅಯ್ಯಂಗಾರ್ ರವರ ಸ್ವಯಾರ್ಜಿತವಾದ ಸ್ವತ್ತು ಆಗಿರುತ್ತದೆ.

1) ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಎನ್.ಎಸ್.ರಾಜಾ ಅಯ್ಯಂಗಾರ್ ರವರ ಗಮನಕ್ಕೆ ಬಾರದಂತೆ ಅವರ ಮಕ್ಕಳಾದ ಶ್ರೀಮತಿ ಎನ್.ಆರ್.ಸುಧಾಮಣಿ ಮತ್ತು ಶ್ರೀಮತಿ ಸುಮ ಕಡಂಬಿರವರುಗಳು ದಾನಪತ್ರ ಮಾಡಿಸಿಕೊಂಡಿರುತ್ತಾರೆ. ಸದರಿ ದಾನಪತ್ರ ಬರೆಸಿಕೊಂಡಿದ್ದು, ಊರ್ಜಿತವಲ್ಲವೆಂದು ಶ್ರೀ ಎನ್.ಎಸ್.ರಾಜಾ ಅಯ್ಯಂಗಾರ್ ರವರು ನಂಜನಗೂಡಿನ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 31/2013 ರಂತೆ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ ನ್ಯಾಯಾಲಯದಲ್ಲಿ ವಿಲೇ ಇರುತ್ತದೆ.

2) ಶ್ರೀ ಎನ್.ಎಸ್.ರಾಜಾ ಅಯ್ಯಂಗಾರ್ ರವರು ಅವರ ಇಚ್ಛೆಯಂತೆ ಮೇಲ್ಕಂಡ ಸ್ವತ್ತಿನ ಒಂದು ಭಾಗದಲ್ಲಿ ಭಕ್ತ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಸ್ಥಾಪಿಸಿದ್ದು, ಇದುವರೆವಿಗೂ ಪ್ರತಿದಿನ ಪೂಜಾ ಕಾರ್ಯಗಳು ನಡೆದುಕೊಂಡು ಬಂದಿರುತ್ತದೆ.

3) ಎನ್.ಎಸ್.ರಾಜಾ ಅಯ್ಯಂಗಾರ್ ರವರು ಅವರ ಮಕ್ಕಳಾದ ಶ್ರೀಮತಿ ಎನ್.ಆರ್.ಸುಧಾಮಣಿ ಮತ್ತು ಶ್ರೀಮತಿ ಸುಮ ಕಡಂಬಿ ರವರು ಮಾಡಿರುವ ವಿಷಯದ ಬಗ್ಗೆ ಟಿ.ವಿ.9 ಮಾಧ್ಯಮಕ್ಕೆ ಸಂದರ್ಶನ ನೀಡಿರುತ್ತಾರೆ.

4) ಹಾಲಿ ಎನ್.ಎಸ್.ರಾಜಾ ಅಯ್ಯಂಗಾರ್ ರವರು ಮೃತರಾಗಿದ್ದು, ಅವರ ವಾರಸುದಾರರಾದ ಮಗ ಶ್ರೀ ಎಸ್.ಆರ್.ಚಾರ್ ರವರು ಭಕ್ತ ಆಂಜನೇಯ ಸ್ವಾಮಿ ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಂಡು ಬರುತ್ತಿರುತ್ತಾರೆ ಮತ್ತು ಅಸಲು ದಾವಾ ಸಂಖ್ಯೆ 31/2013 ರ ದಾವೆಯುಲ್ಲಿ ವಾರಸುದಾರರಾಗಿ ದಾವೆಯನ್ನು ನಡೆಸುತ್ತಾ ಬಂದಿರುತ್ತಾರೆ. ವಿಷಯ ಹೀಗಿರುವಲ್ಲಿ ಸುಮ ಕಡಂಬಿರವರು ಸಾರ್ವಜನಿಕರಿಂದ ನಗದು ಮತ್ತು ವಸ್ತುವಿನ ರೂಪದಲ್ಲಿ ದೇಣಿಗೆ ಪಡೆಯುತ್ತಿರುತ್ತಾರೆ ಎಂದು ಸತ್ಯಕ್ಕೆ ದೂರವಾದ ಪ್ರಕಟಣೆಯನ್ನು ಕೊಟ್ಟಿರುತ್ತಾರೆ ನಮ್ಮ ಕಕ್ಷಿದಾರರು ಸಾರ್ವಜನಿಕರಿಂದ ಯಾವುದೇ ರೀತಿಯ ನಗದು ರೂಪದಲ್ಲಾಗಲಿ ಅಥವಾ ವಸ್ತುವಿನ ರೂಪದಲ್ಲಾಗಲೀ ದೇಣಿಗೆಯನ್ನು ಪಡೆದಿರುವುದಿಲ್ಲ ಇದೂ ವೃಥಾ ಮಾನ ಹಾನಿಕರ ಹೇಳಿಕೆಯಾಗಿದ್ದು ನಮ್ಮ ಕಕ್ಷಿದಾರರು ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವವರಿರುತ್ತಾರೆ. ಅಂತೆಯೇ ಸುಮಾರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಭಕ್ತ ಆಂಜನೇಯ ಸ್ವಾಮಿ ದೇವಸ್ಥಾನದ ಪೂಜಾ ಕಾರ್ಯಗಳಿಗೆ ಮೇಲ್ಕಂಡ ಶ್ರೀಮತಿ ಸುಮ ಕಡಂಬಿರವರು ಕಿರುಕುಳ ತೊಂದರೆ ನೀಡಿರುತ್ತಾರೆ.

5) ಆದ್ದರಿಂದ ಶ್ರೀಮತಿ ಸುಮ ಕಡಂಬಿರವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದು ನಮ್ಮ ಕಕ್ಷಿದಾರರು ತಿಳಿಯಪಡಿಸಿರುತ್ತಾರೆ. ಈ ಸೂಚನೆಯ ಹೊರತಾಗಿಯೂ ಕಾನೂನುಬಾಹಿರ ಕ್ರಮದಲ್ಲಿ ತೊಡಗಿದ ಪಕ್ಷದಲ್ಲಿ ಮತ್ತು ಸಾರ್ವಜನಿಕರ ಹಾಗೂ ಭಕ್ತರ ದಿಕ್ಕು ತಪ್ಪಿಸಲು ಯತ್ನಿಸಿದಲ್ಲಿ ನಮ್ಮ ಕಕ್ಷಿದಾರರು ಸದರಿಯವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವವರಿರುತ್ತಾರೆಂದು ತಿಳಿಯಪಡಿಸಲಾಗಿದೆ.

ಕಕ್ಷಿದಾರರು
(ಸಹಿ/– ಎಸ್.ಆರ್.ಚಾರ್)

ಸಹಿ/– 1)ಕೆ.ಎಸ್.ಮೃತ್ಯುಂಜಯ
2) ಶ್ರೀಮತಿ ಅನುರಾಧ.ಬಿ.ಆರ್
ವಕೀಲರು, ಎನ್.ವಿ.ಎಸ್. ಆರ್ಕೇಡ್,
19ನೇ ಕ್ರಾಸ್, ಎಂ.ಜಿ.ಎಸ್. ರಸ್ತೆ,
ನಂಜನಗೂಡು–571301, ಮೊ.: 9448390627

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ – 571313
ಇ-ಮೇಲ್: ceochanagar@gmail.com ದೂರವಾಣಿ ಸಂಖ್ಯೆ: 08226-224013 ಫ್ಯಾಕ್ಸ್ ಸಂಖ್ಯೆ: 08226-224014

ಸಂಖ್ಯೆ:ಜಿ.ಪಂ.ಚಾ/ಅದಾ/ಇ–ಟೆಂಡರ್ / 03/2022–23 ದಿನಾಂಕ: 02–03–2023

Providing Services of Data Entry Operators E-Procurement ಮೂಲಕ ಪಡೆಯುವ ಬಗ್ಗೆ

E-Procurement Tender Notification
(Website : www.eproc.karnataka.gov.in)

2022–23ನೇ ಸಾಲಿಗೆ ಅಕ್ಷರ ದಾಸೋಹ ಕಾರ್ಯಕ್ರಮ ಜಿಲ್ಲಾ ಪಂಚಾಯತ್ ಚಾಮರಾಜನಗರ ಜಿಲ್ಲೆಗೆ ಒಬ್ಬರು ಕಂಪ್ಯೂಟರ್ ಆಪರೇಟರ್ ಹಾಗೂ ತಾಲ್ಲೂಕುಗಳಿಗೆ ಅಗತ್ಯವಿರುವ ನಾಲ್ಕು ಕಂಪ್ಯೂಟರ್ ಆಪರೇಟರ್‌ಗಳ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999. ನಿಯಮಗಳು ಪ್ರಕಾರ ನೊಂದಾಯಿತ ಮತ್ತು ಪರವಾನಗಿಯುಳ್ಳ ಅರ್ಹ ಏಜೆನ್ಸಿದಾರರು / ಸಂಸ್ಥೆಗಳಿಂದ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ನಿರ್ಧರಿಸಲಾಗಿದೆ.

ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ : ಜಿಪಂಚಾ / ಅದಾ / 04 / 2022–23 ದಿನಾಂಕ: 02/03/2023
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ: 02/03/2023
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 09/03/2023 ಸಂಜೆ 4.00 ಗಂಟೆಗೆ
ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಕೊಠಡಿ ಸಂಖ್ಯೆ : 3, ಜಿಲ್ಲಾ ಪಂಚಾಯತ್, ಚಾಮರಾಜನಗರ ದಿನಾಂಕ: 10/03/2023 ಸಂಜೆ 4.30 ಗಂಟೆಗೆ.
ಹಣಕಾಸಿನ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಕೊಠಡಿ ಸಂಖ್ಯೆ : 3, ಜಿಲ್ಲಾ ಪಂಚಾಯತ್, ಚಾಮರಾಜನಗರ ದಿನಾಂಕ: 13/03/2023 ಬೆಳಗ್ಗೆ 11.00 ಗಂಟೆಗೆ
ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ.50,000/–
ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ್, ಚಾಮರಾಜನಗರ, ಮೊಬೈಲ್ ನಂಬರ್ – 9739383162

ವಾ.ಸಾ.ಸಂ.ಇ/ಚಾ.ನಗರ/620/2022–23

ತೆಂಗಿನ ನಾರು ಘಟಕಕ್ಕೆ ಬೆಂಕಿ

ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಬೆಂಕಿಗಾಹುತಿ



ಮದ್ದೂರು, ಮಾ.4– ತಾಲೂಕಿನ ಗೆಜ್ಜಲಗೆರೆ ಕೈಗಾರಿಕಾ ವಲಯದ ತೆಂಗಿನ ನಾರು ಘಟಕಕ್ಕೆ ಆಕಸ್ಮಿಕ ಬೆಂಕಿ ತಗುಲಿ ಸುಮಾರು 90 ಲಕ್ಷಕ್ಕೂ ಅಧಿಕ ಮೌಲ್ಯದ ಯಂತ್ರೋಪಕರಣ, ಕಚ್ಚಾ ವಸ್ತುಗಳು ಬೆಂಕಿಗೆ ಆಹುತಿಯಾಗಿದೆ.

ತಮಿಳುನಾಡು ಮೂಲದ ಪಿರುನಾವು ಅರಸ್ ಎಂಬುವರಿಗೆ ಸೇರಿದ ಮೂಗಾಂಬಿಗೈ ಫೈಬರ್ ಮಿಲ್‌ನಲ್ಲಿ ಶನಿವಾರ ಮಧ್ಯಾಹ್ನ ದುರ್ಘಟನೆ ಸಂಭವಿಸಿದ್ದು, ಅಕ್ಕಪಕ್ಕದ ಕಾರ್ಖಾನೆಗಳ ವ್ಯಾಪ್ತಿಯ ಜನರು ಬೆಂಕಿ ಬಿದ್ದಿರುವುದನ್ನು ಗಮನಿಸಿ ಅಗ್ನಿಶಾಮಕ ಸಿಬ್ಬಂದಿಗೆ ದೂರವಾಣಿ ಮೂಲಕ ಸುದ್ದಿ ಮುಟ್ಟಿಸಿದ್ದಾರೆ. ಕಾರ್ಖಾನೆಯಲ್ಲಿದ್ದ ತೆಂಗಿನ ನಾರಿಗೆ ಬೆಂಕಿ ತಗುಲಿ ಯಂತ್ರೋಪಕರಣ ಮತ್ತು ಕಾರ್ಖಾನೆ ಆವರಣದಲ್ಲಿನ 2 ಮನೆಗಳು ಸುಟ್ಟು ಕರಕಲಾಗಿವೆ. ಈ ವೇಳೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸುವಲ್ಲಿ ಯಶಸ್ವಿಯಾದರು. ಘಟನೆ ವೇಳೆ ಕಾರ್ಮಿಕರು ರಜೆಯಲ್ಲಿದ್ದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಈ ಸಂಬಂಧ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿತೀಯ ಪಿಯು ಪರೀಕ್ಷೆ ವ್ಯವಸ್ಥಿತವಾಗಿ ನಡೆಸಿ

ಮಂಡ್ಯ, ಮಾ.4– ಜಿಲ್ಲೆಯಲ್ಲಿ ಮಾ.9ರಿಂದ 29ರವರೆಗೆ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ಸುವ್ಯವಸ್ಥಿತವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ತಿಳಿಸಿದರು.



ಜಿಲ್ಲಾಧಿಕಾರಿ ಕಚೇರಿಯಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಸಂಬಂಧ ಶುಕ್ರವಾರ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 12,843 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಮಂಡ್ಯ 8, ಮದ್ದೂರು 5, ಮಳವಳ್ಳಿ 3, ಕೆ.ಆರ್.ಪೇಟೆ 3, ನಾಗಮಂಗಲ 3, ಶ್ರೀರಂಗಪಟ್ಟಣ 2, ಪಾಂಡವಪುರ 3 ಸೇರಿದಂತೆ ಒಟ್ಟು 27 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಗೋಡೆ ಗಡಿಯಾರ, ಡೆಸ್ಕ್ ಬೆಂಚ್‌ಗಳು ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿ ಎಂದರು. ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ ಸುತ್ತಳತೆಯಲ್ಲಿ 144 ಸೆಕ್ಷನ್ ಜಾರಿಗೊಳಿಸಿ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಕಂಪ್ಯೂಟರ್ ಹಾಗೂ ಸೈಬರ್ ಅಂಗಡಿಗಳನ್ನು ಮುಚ್ಚಿಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳ ವಿರುದ್ಧ ದಂಡ ಪ್ರಕ್ರಿಯೆ ಸಂಹಿತೆ 1973ರ ಸೆಕ್ಷನ್ 107 ಮತ್ತು 110 ಅಡಿಯಲ್ಲಿ ಕ್ರಮವಹಿಸಲಾಗುವುದು ಎಂದರು.

ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಒಬ್ಬರಂತೆ 27 ಮುಖ್ಯಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರಶ್ನೆ ಪತ್ರಿಕೆಗಳ ವಿತರಣೆಗೆ 9 ಮಾರ್ಗಾಧಿಕಾರಿಗಳ ತಂಡ ರಚಿಸಲಾಗಿದೆ. ಪ್ರಶ್ನೆಪತ್ರಿಕೆ ವಿತರಣೆಗೆ ಬಳಸಲಾಗುವ ವಾಹನಗಳಿಗೆ ಕಡ್ಡಾಯವಾಗಿ ಜಿಪಿಎಸ್ ಅಳವಡಿಸಬೇಕು. ಪ್ರಶ್ನೆಪತ್ರಿಕೆ ವಿತರಣೆ ಕಾರ್ಯದಲ್ಲಿ ಭಾಗವಹಿಸುವ ಎಲ್ಲಾ ಅಧಿಕಾರಿಗಳು ಜಿಲ್ಲಾ ಖಜಾನೆಯಲ್ಲಿ ಬಯೋಮೆಟ್ರಿಕ್ ನೋಂದಣಿ ಮಾಡಿಸಿಕೊಳ್ಳಲು ಸೂಚಿಸಿದರು.

ಪರೀಕ್ಷೆಗಳನ್ನು ಪಾರದರ್ಶಕತೆಯಿಂದ ನಡೆಸಲು ಪ್ರತಿಯೊಂದು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ಎ ಅಥವಾ ಬಿ ಗುಂಪಿನ ಅಧಿಕಾರಿಗಳ ವಿಚಕ್ಷಣಾ ಜಾಗೃತದಳಗಳನ್ನು ರಚಿಸಲು ಕ್ರಮವಹಿಸಲಾಗುವುದು ಎಂದರು. ಕೊಠಡಿ ಮೇಲ್ವಿಚಾರಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಸಾಧನಗಳನ್ನು ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದರು. ಸಭೆಯಲ್ಲಿ ಜಿಲ್ಲಾ ಖಜಾನಾಧಿಕಾರಿ ಸಿದ್ದಲಿಂಗಸ್ವಾಮಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಉಮೇಶ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಜವರೇಗೌಡ ಇನ್ನಿತರರಿದ್ದರು.

ವಿರೋಧಿಗಳ ಚಕ್ರವ್ಯೂಹ ಭೇದಿಸುವ ಶಕ್ತಿ ಇದೆ: ಸಿಎಸ್‌ಪಿ



ಪಾಂಡವಪುರ, ಮಾ.4– ಪುಟ್ಟರಾಜು ಸೋಲಿಸಲು ವಿರೋಧಿಗಳು ಯಾವುದೇ ಚಕ್ರವ್ಯೂಹ ರಚಿಸಿದರೂ, ಕ್ಷೇತ್ರದ ಜನತೆಯ ಆಶೀರ್ವಾದದಿಂದ ಅದನ್ನು ಭೇದಿಸಿಕೊಂಡು ಹೊರಬರುವ ಶಕ್ತಿ ನನಗಿದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ 1.44 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪ್ರತಿ ಚುನಾವಣೆಯಲ್ಲೂ ನನ್ನನ್ನು ಸೋಲಿಸಲು ವಿರೋಧಿಗಳು ಹಲವು ಷಡ್ಯಂತ್ರ ರೂಪಿಸುತ್ತಿದ್ದಾರೆ. ಆದರೆ ಅವುಗಳನ್ನು ಭೇದಿಸುವ ಶಕ್ತಿಯನ್ನು ಕ್ಷೇತ್ರದ ಮಹಾಜನತೆ ನನಗೆ ನೀಡಿದ್ದಾರೆ. ಚಕ್ರವ್ಯೂಹ ಭೇದಿಸಿ ಬಹಳ ದಿನವಾಗಿದೆ ಇನ್ನೇನಿದ್ದರೂ ಬಾಹುಬಲಿಯಂತೆ ಕ್ಷೇತ್ರಕ್ಕಿಳಿದು ಹೋರಾಡುವುದಷ್ಟೇ ಬಾಕಿ. ಪ್ರತಿ ಚುನಾವಣೆಯಲ್ಲೂ ನನ್ನನ್ನು ಸೋಲಿಸಲು ಎಲ್ಲರೂ ಒಗ್ಗೂಡಿ ಪ್ರಯತ್ನಿಸುತ್ತಾರೆ. ಅದೇ ರೀತಿ ಕಳೆದ ಬಾರಿ ಮಾಡಿದರೂ ಜನತೆ ನನ್ನ ಕೈ ಬಿಡಲಿಲ್ಲ. ಈ ಬಾರಿಯೂ ಅದೇ ತಂತ್ರಗಾರಿಕೆ ಮಾಡಲು ಹೊರಟಿದ್ದಾರೆ. ಅದಕ್ಕೆಲ್ಲ ಜನತೆಯೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಗುಡುಗಿದರು.

ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷ, ಬಿಜೆಪಿ ದುರಾಡಳಿತದ ವಿರುದ್ಧ ದೇಶದಲ್ಲಿ ಹೋರಾಡಲು ಸಜ್ಜಾಗಬೇಕಿದೆ. ಆ ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರು ಮೇಲುಕೋಟೆಯಿಂದಲೇ ಆರಂಭಿಸಲಿ. ಬೇಕಾದರೆ ಅವರ ಪಕ್ಷದಿಂದ ಅಭ್ಯರ್ಥಿ ಕಣಕ್ಕಿಳಿಸಲಿ ನೋಡೋಣ ಎಂದರು.

ತಾಲೂಕಿನ ಮೇಲುಕೋಟೆಯಲ್ಲಿ 18.84 ಲಕ್ಷ ವೆಚ್ಚದ ನಾಡಕಚೇರಿ, ದಳವಾಯಿಕೆರೆ ಬಳಿ 15 ಲಕ್ಷ ವೆಚ್ಚದ ಕೆರೆ ಕೋಡಿ, ಕಣ್ಣಕೊಪ್ಪಲು ಗ್ರಾಮದಲ್ಲಿ 15 ಲಕ್ಷದಲ್ಲಿ ಕೋಡಿ ನಿರ್ಮಾಣ ಹಾಗೂ ಕೆಆರ್‌ಐಡಿಎಲ್ ಯೋಜನೆಯಿಂದ 50 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ, ಕೆ. ಹೊಸೂರು ಗ್ರಾಮದಲ್ಲಿ 25 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಶಂಕಹಳ್ಳಿ ಗ್ರಾಮದಲ್ಲಿ 20 ಲಕ್ಷ ವೆಚ್ಚದಲ್ಲಿ ದೇವಸ್ಥಾನ ಹಾಗೂ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ಸಲ್ಲಿಸಿದರು. ಈ ವೇಳೆ ತಹಸೀಲ್ದಾರ್ ಸೌಮ್ಯ, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಇಂಜಿನಿಯರ್ ನವೀನ್, ವನಜಾಕ್ಷಿ, ಪವಿತ್ರ, ಹಾಗೂ ಸದಸ್ಯರು ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಕ್ಷೇತ್ರದ ಜನತೆ ನಿಮ್ಮ ಮನೆ ಮಗನನ್ನು ಬೆಂಬಲಿಸಿ

ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಮನವಿ



ಶ್ರೀರಂಗಪಟ್ಟಣ, ಮಾ.4– ಕ್ಷೇತ್ರದ ಜನತೆ ಹೊಸ ಮುಖ ಬಯಸುತ್ತಿದ್ದು, ಕುಟುಂಬ ರಾಜಕಾರಣ ಕಿತ್ತೊಗೆಯಲು ತೀರ್ಮಾನಿಸಿದ್ದಾರೆ ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ತಿಳಿಸಿದರು.

ತಾಲೂಕಿನ ಕೊಡಿಯಾಲದಲ್ಲಿ ನಡೆದ ಆರಕೆರೆ ಮಹಾಶಕ್ತಿ ಕೇಂದ್ರದ ಕಾರ್ಯಕರ್ತರು ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಅಜ್ಜ, ನನ್ನ ತಾಯಿ ಹಾಗೂ ನನ್ನ ಪತ್ನಿ ಕ್ಷೇತ್ರದವರಾಗಿದ್ದು, ನಾನು ನಿಮ್ಮ ಮನೆ ಮಗ. ನಾನು ರಾಜಕಾರಣಕ್ಕೆ ಮೂರ್ನಾಲ್ಕು ತಿಂಗಳಿಂದ ಬಂದವನಲ್ಲ. ನಾನು ಕುಟುಂಬ ರಾಜಕಾರಣ ಮಾಡುವುದಿಲ್ಲ. ನಾನೇ ಮೊದಲು, ನಾನೇ ಕೊನೆ. ನಿಮ್ಮ ಮನೆ ಮಗನನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ಜನತೆ ಬದಲಾವಣೆ ಬಯಸಿದ್ದಾರೆ. ಒಂದೇ ಗ್ರಾಮದ 2 ಕುಟುಂಬದವರು 55 ವರ್ಷಗಳಿಂದ ಅಧಿಕಾರ ಅನುಭವಿಸಿಕೊಂಡು ಬಂದಿದ್ದು, ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗುವಂತೆ ಮಾಡಿದ್ದಾರೆ. ಅವರಿಗೆ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದರು.

ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್.ನಂಜುಂಡೇಗೌಡ ಮಾತನಾಡಿದರು. ಇದೇ ವೇಳೆ ನೂರಾರು ಯುವಕರು ಹಾಗೂ ಮಹಿಳೆಯರು ಬಿಜೆಪಿಗೆ ಸೇರ್ಪಡೆಗೊಂಡರು. ಇದಕ್ಕೂ ಮುನ್ನಾ ಇಂಡುವಾಳು ಸಚ್ಚಿದಾನಂದ ಹಾಗೂ ಮುಖಂಡರಿಗೆ ಕಾರ್ಯಕರ್ತರು ಬೃಹತ್ ಸೇಬಿನ ಹಾರ ಹಾಕಿ, ಪೂರ್ಣಕುಂಭದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತಂದರು.

ಈ ವೇಳೆ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಡಾ.ಸಿದ್ದರಾಮಯ್ಯ, ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ತಾಲೂಕು ಅಧ್ಯಕ್ಷ ರಮೇಶ್, ಟಿ.ಕೆ.ಧನಂಜಯ, ಟಿ.ಕೆ.ಬಾಬು ಸೇರಿದಂತೆ ಇತರರಿದ್ದರು.

ಮಂಡ್ಯದಲ್ಲಿ ಜೆಡಿಎಸ್ ಗೆಲುವೇ ನನ್ನ ಧ್ಯೇಯ



ಮಂಡ್ಯ, ಮಾ.4– ಮಂಡ್ಯ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡುತ್ತಾ ಪಂಚರತ್ನ ಯೋಜನೆ ಕುರಿತ ಕಾರ್ಯಕ್ರಮಗಳ ಅರಿವು ಮೂಡಿಸುತ್ತಿದ್ದೇನೆ. ಜೆಡಿಎಸ್ ಗೆಲುವೇ ನನ್ನ ಧ್ಯೇಯ ಎಂದು ಜೆಡಿಎಸ್ ಮುಖಂಡ, ಮನ್‌ಮುಲ್ ಅಧ್ಯಕ್ಷ ರಾಮಚಂದ್ರ ತಿಳಿಸಿದರು.

ತಾಲೂಕಿನ ದೊಡ್ಡಗರುಡನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಜೆಡಿಎಸ್‌ನ ಪಂಚರತ್ನ ಯೋಜನೆ ಕರಪತ್ರ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಗಳ ಜಾರಿಗೆ ಜೆಡಿಎಸ್ ಗೆಲುವು ಅವಶ್ಯ. ರಾಜ್ಯದ ಅಭಿವೃದ್ಧಿ ಮತ್ತು ರೈತರ ಹಿತಕಾಯಲು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವ ಉದ್ದೇಶದಿಂದ ಕ್ಷೇತ್ರಾದ್ಯಂತ ಪಕ್ಷ ಸಂಘಟನೆ ಮಾಡುತ್ತಿದ್ದೇವೆ ಎಂದರು. ಮನೆ ಮನೆಗೆ ಪಂಚರತ್ನ ಯೋಜನೆಗಳ ಕರಪತ್ರ ನೀಡಿ, ಜೆಡಿಎಸ್ ಗೆಲುವಿಗೆ ಸಹಕರಿಸಿ ಎಂದು ಮನವಿ ಮಾಡುತ್ತಿದ್ದೇವೆ. ಮತ್ತೊಮ್ಮೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಬೇಕು. ಶ್ರೀಸಾಮಾನ್ಯರು, ರೈತ ಸಮುದಾಯಕ್ಕೆ ಅನುಕೂಲವಾಗಬೇಕು. ಐದು ಪಂಚರತ್ನ ಯೋಜನೆಗಳ ಜಾರಿಗೆ ಅನುವು ಮಾಡಿಕೊಡಿ ಎಂಬುದಾಗಿ ಕೋರುತ್ತಿದ್ದೇವೆ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಸಿಎಂ ಮಾಡಲು ನಮ್ಮ ಹಿತೈಷಿಗಳು, ಅಭಿಮಾನಿ ದೇವರು, ನಾವು, ನಮ್ಮ ಧರ್ಮಪತ್ನಿ, ಸಹೋದರ, ಬೆಂಬಲಿಗರು ಹಗಲು– ರಾತ್ರಿ ದುಡಿಯುತ್ತಿದ್ದೇವೆ. ಕ್ಷೇತ್ರದಲ್ಲಿ ಶಾಸಕರು ಪಂಚರತ್ನ ಯೋಜನೆಗಳ ಪ್ರಚಾರ ಶುರು ಮಾಡಿದ್ದಾರೆ. ನಾನು ಸಾಮಾನ್ಯ ಕಾರ್ಯಕರ್ತ, ಕುಮಾರಸ್ವಾಮಿ ಅವರ ಅಭಿಮಾನಿ, ಅವರು ನಮಗೆ ಅಧಿಕಾರ ಕೊಟ್ಟಿದ್ದಾರೆ. ಪಕ್ಷದ ಋಣ ತೀರಿಸಲು ಸೇವೆ ಮಾಡುತ್ತಿದ್ದೇವೆ ಎಂದರು.

ಕ್ಷೇತ್ರದಲ್ಲಿ ಬೇರೆ ಏನೂ ಮಾಡುತ್ತಿಲ್ಲ. ಜೆಡಿಎಸ್ ಪಕ್ಷ ಸಂಘಟನೆ ಮಾಡುತ್ತಿದ್ದೇನೆ. ಶಾಸಕರಾದ ಶ್ರೀನಿವಾಸ್ ಅವರಿಗೆ ಟಿಕೆಟ್ ಘೋಷಣೆಯಾಗಿದ್ದು, ಅವರಿಗೆ ತನು, ಮನ, ಧನದೊಂದಿಗೆ ಸಹಾಯ ಮಾಡುತ್ತೇನೆ. ಮಂಡ್ಯ ಕ್ಷೇತ್ರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಅಭ್ಯರ್ಥಿಯಾಗಿ ಬಂದರೆ ಮಂಡ್ಯ ಜಿಲ್ಲೆ ಅಭಿವೃದ್ಧಿಯಾಗುತ್ತದೆ. ಮನೆ ಮನೆಗೆ ಯೋಜನೆಗಳು ತಲುಪುತ್ತವೆ. ವರಿಷ್ಠರು ಬಂದರೆ ಸದಾ ಸ್ವಾಗತ, ಹಗಲು ರಾತ್ರಿ ದುಡಿದು, ಹೆಚ್ಚು ಮತಗಳಿಂದ ಗೆಲ್ಲಿಸುತ್ತೇವೆ ಎಂದರು.

ಮಾ.7, ವಿದ್ಯುತ್ ವ್ಯತ್ಯಯ



ಮಂಡ್ಯ, ಮಾ.4– ಕೋಲಕಾರನದೊಡ್ಡಿ, ಕೆಐಎಡಿಬಿ ಮತ್ತು ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಮಾ.7ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲ, ಚನ್ನಯ್ಯ ಬಡಾವಣೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು ಮುಖ್ಯ ರಸ್ತೆಯ ಹೆಬ್ಬಾಳ, ಶ್ರೀನಿವಾಸಪುರ ಗೇಟ್, ಕೀಲಾರ ಐಪಿ ವ್ಯಾಪ್ತಿ, ಹನಕೆರೆ ಐಪಿ ವ್ಯಾಪ್ತಿ, ಬಸವನಪುರ ಐಪಿ ವ್ಯಾಪ್ತಿ, ಬೂದನೂರು, ಭೂತನ ಹೊಸೂರು, ಚನ್ನಪ್ಪನದೊಡ್ಡಿ, ಹಂಬರಹಳ್ಳಿ, ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗನಹಳ್ಳಿ, ಪುರ, ಲೋಕಸರ, ಹಲುವಾಡಿ, ಕವನ್ನಾಯಕನಹಳ್ಳಿ, ಟಿ.ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನಹೊಸೂರು, ಬಿ.ಹಸೂರು. ಹೊಡಾಘಟ್ಟ, ಕೀಲಾರ, ಹನಕೆರೆ, ಹಳೆ ಬೂದನೂರು, ಹೊಸಬೂದನೂರು, ಈಚಗೆರೆ, ಹಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಶ್ರೀನಿವಾಸಪುರ ಗೇಟ್, ಹೊನಗಾನಹಳ್ಳಿ ಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಯತ್ನ

ಬೊಮ್ಮಾಯಿ ಅವರೇ, ಕಟೀಲ್ ಅವರೇ, ನಡ್ಡಾ ಅವರೇ, ಅಮಿತ್ ಶಾ ಅವರೇ, ನಿಮ್ಮ ಧನದಾಹ ಯಾವಾಗ ನೀಗಲಿದೆ. ಬೆಂಗಳೂರಿನ ಜನರೆಲ್ಲಾ ಸೇರಿ ಆ ಹಣವನ್ನು ಸೇರಿಸಿ ನೀಡುತ್ತೇವೆ. ನೀವು ಸಂತೋಷ್ ಪಾಟೀಲ್, ಪ್ರಶಾಂತ್, ರಾಜೇಂದ್ರ ಅವರನ್ನು, ಅವರ ಕುಟುಂಬದವರಿಗೆ ವಾಪಸ್ ನೀಡಿ. 40% ಕಮಿಷನ್ ಬಗ್ಗೆ ತಿಳಿಯಬೇಕಾದರೆ ಶಾಲಾ ಒಕ್ಕೂಟ ರೂಪ್ಸಾ ಸಂಸ್ಥೆಯನ್ನು ಕೇಳಿ ಎಂದು ವಾಗ್ದಾಳಿ ನಡೆಸಿದರು. ಪ್ರಧಾನ ಮಂತ್ರಿಗಳು ರಾಜ್ಯಕ್ಕೆ 8 ಬಾರಿ ಆಗಮಿಸಿದ್ದರೂ ಇದುವರೆಗೂ ಕೆಂಪಣ್ಣ ಅವರ ಪತ್ರಕ್ಕೆ ಉತ್ತರ ನೀಡಿಲ್ಲ. ಅಮಿತ್ ಶಾ ಹಾಗೂ ಬೊಮ್ಮಾಯಿ ಅವರು ಭ್ರಷ್ಟಾಚಾರದ ಆರೋಪದ ಬಗ್ಗೆ ಸಾಕ್ಷಿ ಕೇಳುತ್ತಿದ್ದೀರಿ. ನಿಮ್ಮ ಸರ್ಕಾರ ಮೈಸೂರು ಸ್ಯಾಂಡಲ್ ಸೋಪಿನ ಚಂದನದ ಸುವಾಸನೆಯಲ್ಲೂ ನೀವು ಭ್ರಷ್ಟಾಚಾರದ ದುರ್ಗಂಧವನ್ನು ಹರಡಿದ್ದೀರಿ. ನಿಮಗೆ ನಾಚಿಕೆಯಾಗಬೇಕು. ಶಾಸಕರ ಪುತ್ರ 40 ಲಕ್ಷ ಹಣದೊಂದಿಗೆ ಸಿಕ್ಕಿಬಿದ್ದಿದ್ದರೆ, ಬಿಜೆಪಿ ನಾಯಕರು ಮಕ್ಕಳಿಂದ ತಪ್ಪಾಗಿದೆ ಎಂದು ಹೇಳುತ್ತಿದ್ದಾರೆ.

ಅವರ ಕಚೇರಿಯಿಂದ 1.20 ಕೋಟಿ, ಮನೆಯಲ್ಲಿ 6 ಕೋಟಿ ಹಣದ ಕಂತೆಗಳು ಸಿಕ್ಕರೂ ಸಣ್ಣ ತಪ್ಪಾಗಿದೆ ಎಂದಿದ್ದಾರೆ. ಅವರ ಮನೆಯಲ್ಲಿ ಸಿಕ್ಕಿರುವ ಹಣ ಅವರದಲ್ಲ, ಬಿಜೆಪಿ ಹಾಗೂ ಅದರ ನಾಯಕರು ರಾಜ್ಯದ ಜನರಿಂದ ಲೂಟಿ ಮಾಡುತ್ತಿರುವ ಹಣವಾಗಿದೆ ಎಂದು ಆರೋಪಿಸಿದರು. ಬಿಜೆಪಿಯ ಭ್ರಷ್ಟಾಚಾರದಿಂದ ರಾಜ್ಯವನ್ನು ಮುಕ್ತಿ ಮಾಡುವ ಸಮಯ ಬಂದಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲ ಅಕ್ರಮಗಳ ಬಗ್ಗೆ ತನಿಖೆ ಮಾಡಿಸಿ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸುವ ಸಂಕಲ್ಪ ಮಾಡಬೇಕು.

ಈ ಅಕ್ರಮದಲ್ಲಿ ಯಾರೇ ತಪ್ಪಿತಸ್ಥರಾದರೂ ಅವರ ವಿರುದ್ಧ ತನಿಖೆ ಮಾಡಿ ಅವರಿಗೆ ಶಿಕ್ಷೆಯಾಗುವಂತೆ ಮಾಡಲಾಗುವುದು. ರಾಜ್ಯದ ಯುವಕರ ಭವಿಷ್ಯ ನಾಶವಾಗಲು ಬಿಡಬಾರದು. ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಅವರ ಸರ್ಕಾರ ತೊಲಗುವವರೆಗೂ ನಮ್ಮ ಹೋರಾಟ ಮುಂದುವರಿಯಲಿದೆ ಎಂದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ನಮ್ಮ ಮೇಲಿನ ಎಲ್ಲಾ ಆರೋಪಗಳು ಸುಳ್ಳು ಎಂದು ಸಾಬೀತಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮಾನ ಮರ್ಯಾದೆ ಇದೆಯಾ. ಅಧಿಕಾರಕ್ಕೆ ಅಂಟಿಕೊಂಡು ಕೂತಿದ್ದಾರೆ. ಒಂದು ಪ್ರಕರಣನ್ನಾದರೂ ಸಿಬಿಐ ತನಿಖೆ ವಹಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೇರಿಕೊಂಡು ಮಂತ್ರಿಗಳು, ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಇಂತಿಷ್ಟು ಲಂಚ ಕಲೆಕ್ಷನ್ ಮಾಡಿಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಅವರಿಗೆ ಈ ಬಾರಿ ಜಾತಿ, ಧರ್ಮಗಳ ಆಧಾರದಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂಬುದು ಅರಿವಾಗಿದೆ. ಮುಂದಿನ ಚುನಾವಣೆಯಲ್ಲಿ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲಲು ಕನಿಷ್ಠ 100 ಕೋಟಿ ರೂ. ಖರ್ಚು ಮಾಡಿದರೂ ಆಶ್ಚರ್ಯ ಇಲ್ಲ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಈ ಕೂಡಲೇ ಬಂಧಿಸಬೇಕು ಮತ್ತು ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ನಿಮ್ಮ ಭ್ರಷ್ಟಾಚಾರಕ್ಕೆ ಇದಕ್ಕಿಂತ ದಾಖಲೆ ಬೇರೆ ಬೇಕಾ ಎಂದು ಕೇಳಿದರು.

8 ಕೋಟಿ ರೂ.ಗೂ ಅಧಿಕ ಮೊತ್ತದ ಹಣ, ಆಭರಣಗಳನ್ನು ಲೋಕಾಯುಕ್ತದವರು ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆಯಿಂದ ಸೀಜ್ ಮಾಡಿದ್ದಾರೆ. ನನ್ನ ಪ್ರಕಾರ ಬೊಮ್ಮಾಯಿ ಈಗಾಗಲೇ ರಾಜೀನಾಮೆ ಕೊಟ್ಟುಬಿಡಬೇಕಿತ್ತು. ಸಿದ್ದರಾಮಯ್ಯ ಅವರ ಸರ್ಕಾರ ಎಐಸಿಸಿಗೆ ಎಟಿಎಂ ಆಗಿತ್ತು ಎಂದು ಅಮಿತ್ ಶಾ ಅವರು ನಿನ್ನೆ ಆರೋಪ ಮಾಡಿದ್ದಾರೆ, ಇದಕ್ಕೇನು ಹೇಳ್ತೀರಿ ಶಾ. ಗಡಿಪಾರಾಗಿದ್ದ, ಜೈಲಿಗೆ ಹೋಗಿದ್ದ ಶಾ ಅವರಿಂದ ಪಾಠ ಕಲಿಯಬೇಕಾ ನಾವು ಎಂದು ವಾಗ್ದಾಳಿ ನಡೆಸಿದರು. "ಸಾಕಪ್ಪ ಸಾಕು 40% ಸರ್ಕಾರ" ಎಂದು ಇಂದು ಜನ ಹೇಳುತ್ತಿದ್ದಾರೆ. ಸಾರ್ವಜನಿಕ ಸಭೆಗಳಲ್ಲಿ 40% ಕಮಿಷನ್ ಹಗರಣದ ಬಗ್ಗೆ ಮಾತನಾಡಿ ಸರ್ ಎಂದು ಜನರೇ ಕೇಳುತ್ತಿದ್ದಾರೆ. ಇಷ್ಟೊಂದು ಲಜ್ಜೆಗೆಟ್ಟ ಲಂಚ ತಿನ್ನುವ ಸರ್ಕಾರವನ್ನು ನಾನು ನೋಡಿಯೇ ಇರಲಿಲ್ಲ.

ನಾವು ಅಧಿಕಾರಕ್ಕೆ ಬಂದ ತಕ್ಷಣ ಕೊನೆಯ 6 ತಿಂಗಳಿಂದ ಟೆಂಡರ್ ನೀಡಿರುವ ಕಾಮಗಾರಿಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸುತ್ತೇವೆ. ಯಾವುದೇ ಗುತ್ತಿಗೆದಾರರು ಈಗ ಲಂಚ ನೀಡಿ ಗುತ್ತಿಗೆ ಕೆಲಸ ಹಿಡಿಯಬೇಡಿ. ಕಾರಣ ನಾವು ಬಂದ ಮೇಲೆ ಆ ಎಲ್ಲಾ ಕಾಮಗಾರಿಗಳನ್ನು ರದ್ದು ಮಾಡುತ್ತೇವೆ ಎಂದು ಹೇಳಿದರು.

ಕಾಡಾನೆ ದಾಳಿ: ಅರಣ್ಯ ಸಿಬ್ಬಂದಿ ಬಲಿ

ಮೇಲಾಧಿಕಾರಿಗಳಿಗೆ ಫೋನ್ ಮಾಡಿ ವಿಷಯ ಮುಟ್ಟಿಸಿದ್ದಾನೆ. ಬಳಿಕ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಬೊಮ್ಮನನ್ನು ಸರಗೂರು ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ಯುತ್ತಿದ್ದ ಮಾರ್ಗಮಧ್ಯೆ ಆತ ಸಾವನ್ನಪ್ಪಿದ್ದಾನೆ. ಬಳಿಕ ಪಟ್ಟಣದ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ದೇಹ ಒಪ್ಪಿಸಲಾಯಿತು. ವಿಷಯ ತಿಳಿದು ಪಟ್ಟಣದ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಅನಿಲ್ ಚಿಕ್ಕಮಾದು ಮೃತರ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ ಮಾಡಿದರು. ಅಲ್ಲದೇ ಬೊಮ್ಮನ ಕುಟುಂಬಕ್ಕೆ ಇಲಾಖೆಯಿಂದ 30ಲಕ್ಷ ರೂ. ಪರಿಹಾರ ಧನ, ಕುಟುಂಬದವರಿಗೆ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಕೊಡಿಸುವ ಭರವಸೆ ನೀಡಿದರು. ರಾಜ್ಯ ರೈತ ಸಂಘ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಮಾತನಾಡಿ, ಈ ಘಟನೆ ಆಕಸ್ಮಿಕವಾಗಿ ನಡೆದಿದ್ದು, ಇಂತಹ ಘಟನೆ ಮತ್ತೆ ಮರುಕಳಿಸದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು ಎಂದರು.

ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆಗೆ ಮಾ.10ರ ಗಡುವು

ಅಷ್ಟರಲ್ಲಿ ಆದೇಶ ಹೊರಬೀಳದಿದ್ದರೆ ಪ್ರತಿಭಟನೆಗೆ ನಿರ್ಧಾರ

ಮೈಸೂರು, ಮಾ.4(ಎಸ್‌ಪಿಎನ್)–ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರಿಗೆ ಕಳೆದ ಮೂರು ವರ್ಷಗಳಿಂದ ವೇತನ ಪರಿಷ್ಕರಣೆ ಆಗದಿರುವುದು ಸಹಜವಾಗಿಯೇ ನೌಕರರಲ್ಲಿ ಈ ಸರ್ಕಾರದ ವಿರುದ್ಧ ಸಾಕಷ್ಟು ಆಕ್ರೋಶವಿದೆ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೊಟ್ಟ ಭರವಸೆ ಈಡೇರಿಲ್ಲ: ವೇತನ ಪರಿಷ್ಕರಣೆ ಸಂಬಂಧ ಹಲವು ಬಾರಿ ಸಾರಿಗೆ ನೌಕರರು ಹೋರಾಟ ಮಾಡಿದರೂ ರಾಜ್ಯ ಸರ್ಕಾರ ವೇತನ ಪರಿಷ್ಕರಣೆಗೆ ಮುಂದಾಗುತ್ತಿಲ್ಲ. 2020ರ ಡಿಸೆಂಬರ್‌ನಲ್ಲಿ ಮೂರು ದಿವಸ ಹೋರಾಟ ಮಾಡಲಾಗಿತ್ತು. ತದನಂತರ 2021ರ ಏಪ್ರಿಲ್‌ನಲ್ಲಿ ಎಲ್ಲಾ ನೌಕರರು ಒಗ್ಗಟ್ಟಾಗಿ 15 ದಿನ ಪ್ರತಿಭಟನೆ ಮಾಡಿದ್ದರು. ಆ ವೇಳೆ ಸಾರಿಗೆ ಸಚಿವರೇ ನೌಕರರ ವೇತನ ಪರಿಷ್ಕರಣೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಈ ಭರವಸೆ ಇಲ್ಲಿಯವರೆವಿಗೂ ಈಡೇರಿಲ್ಲ ಎಂದು ಬೇಸರ ಹೊರಹಾಕಿದರು.

ಸಂಸ್ಥೆಗೆ ಲಾಭ ಎಲ್ಲಿಂದ ಬರುತ್ತದೆ: ಸಾರಿಗೆ ಸಂಸ್ಥೆಯಲ್ಲಿ ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ, ಪತ್ರಕರ್ತರಿಗೆ, ಅಂಗವಿಕಲರು ಸೇರಿದಂತೆ 15ಕ್ಕೂ ಹೆಚ್ಚು ಬಗೆ ಬಗೆಯ ರಿಯಾಯ್ತಿ ಪಾಸ್ ವಿತರಿಸಲಾಗಿದೆ. ಆದರೆ, ಈ ಮೊತ್ತವನ್ನು ಇತ್ತ ಸರ್ಕಾರವೂ ಭರಿಸುತ್ತಿಲ್ಲ. ಅತ್ತ ಫಲಾನುಭವಿಗಳು ಭರಿಸುತ್ತಿಲ್ಲ. ಇದರಿಂದ ಸಾರಿಗೆ ಸಂಸ್ಥೆಗೆ ಪ್ರತಿ ವರ್ಷ ಸಾವಿರಾರು ಕೋಟಿ ನಷ್ಟವಾಗುತ್ತಿದೆ. ಹೀಗಾದರೆ, ಸಾರಿಗೆ ನಿಗಮಗಳಿಗೆ ಲಾಭ ಎಲ್ಲಿಂದ ಬರುತ್ತದೆ ಎಂದು ತಮ್ಮ ಆಕ್ರೋಶ ಹೊರಹಾಕಿದರು.



ಅನಂತ ಸುಬ್ಬರಾವ್

ನಿಗಮದ ಖಜಾನೆ ತುಂಬುತ್ತಿಲ್ಲ: ಸಾರಿಗೆ ಬಸ್ ಪೂರ್ಣ ಭರ್ತಿಯಾದರೂ ನಿಗಮಗಳ ಖಜಾನೆ ಮಾತ್ರ ತುಂಬುತ್ತಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ, ರಾಜಕೀಯ ಕಾರಣಕ್ಕೆ ಕಳೆದ 7 ವರ್ಷದಿಂದ ಟಿಕೆಟ್ ದರ ಪರಿಷ್ಕರಣೆ ಮಾಡಿಲ್ಲ. ಇನ್ನು ಬೆಂಗಳೂರು ಮಹಾ ನಗರ ಸಾರಿಗೆ(ಬಿಎಂಟಿಸಿ)ಯಲ್ಲಿ ನಮ್ಮ ಮೆಟ್ರೋ ಸಂಚಾರ ಆರಂಭವಾದ ಮೇಲೆ ನೂರಾರು ಕೋಟಿ ಬಿಎಂಟಿಸಿಗೆ ನಷ್ಟವಾಗುತ್ತಿದೆ. ಇದರ ಲಾಭ–ನಷ್ಟದ ಹೊಣೆಯನ್ನು ಸರ್ಕಾರವೇ ಹೊತ್ತುಕೊಂಡು ಸಾರಿಗೆ ನೌಕರರಿಗೆ ಮಾ.10ರೊಳಗೆ ವೇತನ ಪರಿಷ್ಕರಣೆ ಆದೇಶ ಹೊರಡಿಸಬೇಕು. ಇಲ್ಲದಿದ್ದರೆ ಬೀದಿಗಿಳಿಯುವುದು ಅನಿವಾರ್ಯ ಎಂದರು.

ಚಾಲಕ, ನಿರ್ವಾಹಕ ಹುದ್ದೆಗಳು ಖಾಲಿ ಖಾಲಿ: ಸಾರಿಗೆ ನಿಗಮಗಳ ಸುಧಾರಣೆಗೆ ವಿವಿಧ ತೆರಿಗೆಯಿಂದ ವಿನಾಯ್ತಿ, ಟೋಲ್ ಶುಲ್ಕದಿಂದ ಹೊರಗೆ ತರುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. 4 ನಿಗಮಗಳ ಒಗ್ಗೂಡುವಿಕೆಗೆ ಶಿಫಾರಸ್ಸು ಮಾಡುವಂತೆ ಎಂ.ಆರ್.ಶ್ರೀನಿವಾಸಮೂರ್ತಿ ಸಮಿತಿ ಮುಂದೆಯೂ ಮನವಿ ಸಲ್ಲಿಸಲಾಗಿತ್ತು. ಆದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ಬದಲಾಗಿ, 16 ಸಾವಿರ ಚಾಲಕ, ನಿರ್ವಾಹಕರ ಹುದ್ದೆಗಳ ನೇಮಕಕ್ಕೆ ತಡೆ ನೀಡಿರುವುದು ಅಕ್ಷಮ್ಯ ಅಪರಾಧ. ಈಗಾಗಲೇ ನಿರುದ್ಯೋಗಿ ಯುವಕರಿಗೆ ಉದ್ಯೋಗವಿಲ್ಲದಂತಾಗಿದೆ ಎಂದರು.

5 ಸಾವಿರ ಕೋಟಿ ನಷ್ಟ: ಕೋವಿಡ್–19ನಿಂದ ಸಾರಿಗೆ ಸಂಸ್ಥೆಯ 4 ನಿಗಮಗಳಿಂದ ಸುಮಾರು 5 ಸಾವಿರ ಕೋಟಿ ನಷ್ಟ ಅನುಭವಿಸಿದರು, ಇದರಿಂದ ಲಕ್ಷಾಂತರ ನೌಕರರ ಬದುಕು ಬೀದಿಗೆ ಬಂದಿದೆ. ಕೋವಿಡ್–19 ಸಮಯದಲ್ಲಿ ಸಾರಿಗೆ ನೌಕರರಿಗೆ, ಸರ್ಕಾರದಿಂದಲೇ ವೇತನ ನೀಡಿರುವುದು ಪ್ರಶಂಸನೀಯ. ಆದರೆ, ಕೋವಿಡ್ ನಂತರವೂ ಸಂಸ್ಥೆ ಚೇತರಿಕೆ ಹಲವು ಸುಧಾರಣೆ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಬೇಕಿತ್ತು. ಅಲ್ಲದೆ, 2021ರ ಮುಷ್ಕರ ಸಂದರ್ಭದಲ್ಲಿ ವಜಾ, ಅಮಾನತುಗೊಂಡವರನ್ನು ಬೇಷರತ್ತು ಮರು ನೇಮಕ ಹಾಗೂ ಮುಷ್ಕರ ವೇಳೆ ದಾಖಲಿಸಿರುವ ಹಲವು ಪೊಲೀಸ್ ಕೇಸ್‌ಗಳನ್ನು ಸರ್ಕಾರ ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು.

ಪಿಎಚ್.ಡಿ ಪದವಿ



ಮೈಸೂರು, ಮಾ.4–ಮೈಸೂರಿನ ವಿಜಯ ವಿಠಲ ಪದವಿಪೂರ್ವ ಕಾಲೇಜು ರಸಾಯನಶಾಸ್ತ್ರ ಉಪನ್ಯಾಸಕ ಆರ್.ಎಂ.ನವೀನ್ ಕುಮಾರ್, ಚಾಮರಾಜನಗರ ಇಂಜಿನಿಯರಿಂಗ್ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎನ್.ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ 'ಸಿಂಥಸೀಸ್, ಕ್ಯಾರಕ್ಟರೈಸೇಷನ್ ಅಂಡ್ ಬಯೋಲಾಜಿಕಲ್ ಸ್ಟಡೀಸ್ ಆಫ್ ಸಮ್ ಕಾಂಪ್ಲೆಕ್ಸ್' ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹುಬ್ಬಳ್ಳಿ ಉದ್ಯಮಿ ಮನೆಯಲ್ಲಿ ಮೂರು ಕೋಟಿ ನಗದು ಪತ್ತೆ

ಹುಬ್ಬಳ್ಳಿ, ಮಾ.4– ದಾವಣಗೆರೆ ಜಿಲ್ಲೆ ಚನ್ನಗಿರಿ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣ ರಾಜ್ಯದಲ್ಲಿ ಭಾರೀ ಸದ್ದು ಮಾಡುತ್ತಿರುವ ಬೆನ್ನಲ್ಲೇ ಹುಬ್ಬಳ್ಳಿಯ ಉದ್ಯಮಿಯೊಬ್ಬರ ಮನೆ ಮೇಲೆ ಸಿಸಿಬಿ ದಾಳಿ ನಡೆಸಿದ್ದು, ಬರೋಬ್ಬರಿ ಮೂರು ಕೋಟಿ ರೂಪಾಯಿ ನಗದು ಪತ್ತೆಯಾಗಿದೆ. ಹುಬ್ಬಳ್ಳಿಯ ಅಶೋಕ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಉದ್ಯಮಿ ರಮೇಶ್ ಬೊಣಗೇರಿ ನಿವಾಸದ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದು, ಮೂರು ಕೋಟಿ ರೂಪಾಯಿ ನಗದು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಮೇಶ್ ಬೊಣಗೇರಿ ಕೃಷಿ ಇಲಾಖೆಗೆ ರಾಸಾಯನಿಕ ಸರಬರಾಜು ಮಾಡುತ್ತಿದ್ದ ಉದ್ಯಮಿಯಾಗಿದ್ದಾರೆ.

ಉದ್ಯಮಿ ರಮೇಶ್ ಅವರು ಹಣದ ಮೂಲದ ಬಗ್ಗೆ ಮಾಹಿತಿ ನೀಡಿದರೆ ಪೊಲೀಸರು ಅದನ್ನು ಹಿಂತಿರುಗಿಸುವ ಸಾಧ್ಯತೆ ಇದೆ. ಇಲ್ಲದಿದ್ದರೆ ಆದಾಯ ತೆರಿಗೆ ಇಲಾಖೆ ಈ ಪ್ರಕರಣದ ತನಿಖೆ ನಡೆಸಲಿದೆ.

ಜಾತಿ ಹೆಸರೇಳಿಕೊಂಡು ಬರುವವರಿಗೆ ಮನ್ನಣೆ ನೀಡಬೇಡಿ

ಶಾಸಕ ಎಸ್.ಎ.ರಾಮದಾಸ್ ಯೋಗಕ್ಷೇಮ ಯಾತ್ರೆಯಲ್ಲಿ ಟಾಂಗ್



ಮೈಸೂರು, ಮಾ.4(ಜಿಎ)– ಜಾತಿ ಹೆಸರೇಳಿಕೊಂಡು ಬರುವವರಿಗೆ ನೀವು ಮನ್ನಣೆ ನೀಡಬೇಡಿ ಎಂದು ಶಾಸಕ ಎಸ್.ಎ.ರಾಮದಾಸ್ ತಮ್ಮ ವಿರುದ್ಧ ಮಾತನಾಡುವವರಿಗೆ ಟಾಂಗ್ ಕೊಟ್ಟಿದ್ದಾರೆ.

ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನ.47ರ ನವಿಲು ರಸ್ತೆಯಲ್ಲಿರುವ ರಾಘವೇಂದ್ರ ಮಠದ ಆವರಣದಲ್ಲಿ ಆಯೋಜಿಸಲಾಗಿದ್ದ ಯೋಗಕ್ಷೇಮ ಯಾತ್ರೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾರತದ ಬಗ್ಗೆ ಒಂದು ಕಲ್ಪನೆ ಇಟ್ಟುಕೊಂಡಿದ್ದಾರೆ. ಆ ಕಲ್ಪನೆ ಸಾಕಾರಗೊಳ್ಳಬೇಕಾದರೆ ಅವರ ಮಾರ್ಗದಲ್ಲಿ ನಾವು ಹೆಜ್ಜೆ ಹಾಕೋಣ. ಮಾದರಿ ಭಾರತದ ಕಲ್ಪನೆಯ ಕನಸು ಕಂಡಿರುವ ಮೋದಿಯವರ ಕನಸು ಈಡೇರಿಸುವ ಸಂಕಲ್ಪ ಮಾಡೋಣ. ಅದಕ್ಕಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವ ಇಚ್ಛೆ ಹಾಗೂ ಗುರಿ ನಮ್ಮದಾಗಬೇಕು ಎಂದರು.

ಕಳೆದ 4 ವರ್ಷ 9 ತಿಂಗಳ ಕಾಲ ನನ್ನ ಜಾತಿಯ ಬಗ್ಗೆ ಯಾರೂ ಮಾತನಾಡಿರಲಿಲ್ಲ. ಆದರೆ, ಇತ್ತೀಚೆಗೆ ಕೆಲವರು ಜಾತಿಯ ಮಾತುಗಳನ್ನಾಡಿದ್ದಾರೆ. ಇದು ದುರ್ದೈವದ ಸಂಗತಿ. ಕ್ಷುಲ್ಲಕ ವಿಚಾರವನ್ನು ಇಟ್ಟುಕೊಂಡು ನಿಮ್ಮ ಬಳಿ ಬರುತ್ತಿದ್ದಾರೆ. ಈ ಕ್ಷೇತ್ರದ ಜನರ ಬಗ್ಗೆ ನನಗೆ ಅಪಾರ ನಂಬಿಕೆ ಇದೆ. ಜಾತಿ ಹೆಸರೇಳಿಕೊಂಡು ಬರುವವರಿಗೆ ನೀವು ಮನ್ನಣೆ ನೀಡುವುದಿಲ್ಲ ಎಂದು. ಜಾತಿಗೆ ಎಂದೂ ಬೆಲೆ ಕೊಡಬೇಡಿ ಎಂದು ಮನವಿ ಮಾಡಿದರು.

ಕ್ಷೇತ್ರಕ್ಕೆ ನಾನೇನು ಶಾಶ್ವತವಾದ ಶಾಸಕ ಅಲ್ಲ. ನಾನಾಗಿಯೇ ಒಂದು ದಿನ ಈ ಸ್ಥಾನ ಬಿಡುತ್ತೇನೆ. ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ನನ್ನ ಕಾರ್ಯಕರ್ತರೊಂದಿಗೆ ನಿಮ್ಮ ಮನೆ ಬಾಗಿಲಿಗೆ ಬರುತ್ತೇನೆ. ದೇವರ ಮುಂದಿಟ್ಟ ಹತ್ತು ರೂಪಾಯಿ ನೀಡಿ ಹರಸಿ. ನೀವು ನೀಡಿದ ಹತ್ತು ರೂಪಾಯಿಯಿಂದ ಈ ಕ್ಷೇತ್ರವನ್ನು ಮಾದರಿಯಾಗಿ ರೂಪಿಸುತ್ತೇನೆ ಎಂದರು.

ಪ್ರಧಾನಮಂತ್ರಿಗಳ ಹೆಸರಿನಲ್ಲಿರುವ 202 ಯೋಜನೆಗಳ ಬಗ್ಗೆ ಅಧ್ಯಯನ ಮಾಡುವ ಸಲುವಾಗಿ ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿ 561 ಪುಟಗಳ ಮದಿ ಸಿದ್ಧಪಡಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕೈಗಿಟ್ಟ ವೇಳೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಅವರ ನಿರ್ದೇಶನದನ್ವಯವೇ ಇಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಹತ್ತು ಹಲವು ಯೋಜನೆಗಳನ್ನು ಜಾರಿ ಮಾಡಿ ಯಶಸ್ವಿಯಾಗಿದ್ದೇವೆ ಎಂದು ತಿಳಿಸಿದರು. ಈ ವೇಳೆ ಮೇಯರ್ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಿಯಂತ್ರಣ ತಪ್ಪಿ ಬಿದ್ದು ಬೈಕ್ ಸವಾರ ಗಾಯ

ಮೈಸೂರು, ಮಾ.4– ಬೈಕ್ ಸವಾರನೊಬ್ಬ ಆಯತಪ್ಪಿ ಬಿದ್ದು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆಯ ರಾಯಲ್ ಇನ್ ಜಂಕ್ಷನ್ ಬಳಿ ನಡೆದಿದೆ. ಬೆಲವತ್ತ ಗ್ರಾಮದ ದರ್ಶನ್ ಎಂಬುವರು ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಹಿನಕಲ್ ಕಡೆಯಿಂದ ಕೆಆರ್‌ಎಸ್ ಕಡೆಗೆ ಬರುವಾಗ ರಾಯಲ್ ಇನ್ ಜಂಕ್ಷನ್ ಬಳಿ ನಿಯಂತ್ರಣ ತಪ್ಪಿ ಬಿದ್ದಿದ್ದಾರೆ. ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಿವಿ ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಸರಗಳ್ಳರ ಬಂಧನ: 205 ಗ್ರಾಂ ಚಿನ್ನ, ಮೂರು ದ್ವಿಚಕ್ರ ವಾಹನ ವಶ

ಮೈಸೂರು, ಮಾ.4(ಎಂಕೆ)– ಸರಗಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಎನ್.ಆರ್. ಉಪವಿಭಾಗದ ಎಸಿಪಿ ವಿಶೇಷ ಕಾರ್ಯಾಚರಣೆ ತಂಡ, ಬಂಧಿತರಿಂದ 7.10 ಲಕ್ಷ ರೂ.ಮೌಲ್ಯದ 205 ಗ್ರಾಂ ತೂಕದ 5 ಚಿನ್ನದ ಸರಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಮೂರು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಎನ್.ಆರ್.ಪೊಲೀಸ್ ಠಾಣೆಯಲ್ಲಿ 2021ರ ಅ.30ರಂದು ದಾಖಲಾದ ಸರಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯಾಚರಣೆ ನಡೆಸಿದ ಪೊಲೀಸರ ತಂಡ, ಮಾ.1 ರಂದು ಇಬ್ಬರು ಆರೋಪಿಗಳನ್ನು ಬಂಧಿಸಿದೆ. ಬಳಿಕ ಬಂಧಿತರನ್ನು ವಿಚಾರಣೆಗೆ ಒಳಪಡಿಸಿದಾಗ ಎನ್.ಆರ್.ಪೊಲೀಸ್ ಠಾಣೆ, ನಜರ್‌ಬಾದ್ ಹಾಗೂ ಮೇಟಗಳ್ಳಿ ಠಾಣೆ ವ್ಯಾಪ್ತಿಯಲ್ಲಿ ತಲಾ ಒಂದರಂತೆ 3 ಸರಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ತಿಳಿದುಬಂದಿದೆ.

ಡಾ.ಕೃಷ್ಣ ಎಲ್ಲ ಅವರಿಗೆ 'ಭ್ರಮರ ಟ್ರಸ್ಟಿನ ಜೀವಮಾನ ಸಾಧನೆ' ಪ್ರಶಸ್ತಿ

ಜನರ ಜೀವನ ಸುಧಾರಣೆಗೆ ಕಾರಣವಾದ ವಿಜ್ಞಾನ-ತಂತ್ರಜ್ಞಾನ ಮನುಷ್ಯನಿಗೆ ಆಪತ್ತಾಗುವುದಕ್ಕೆ ಕೊರೊನಾವೇ ಸಾಕ್ಷಿ: ಇಸ್ರೋ ಮಾಜಿ ಮುಖ್ಯಸ್ಥ ಕಿರಣ್‌ಕುಮಾರ್ ವಿವರಣೆ

ಮೈಸೂರು, ಮಾ.4(ಎಂಕೆ)– ಮಾನವೀಯ ಸೇವೆಗಾಗಿ 'ಭ್ರಮರ ಟ್ರಸ್ಟಿನ ಜೀವಮಾನ ಸಾಧನೆ' ಪ್ರಶಸ್ತಿಯನ್ನು ಭಾರತ್ ಬಯೋಟೆಕ್‌ನ ಸಹ–ಸಂಸ್ಥಾಪಕ ಮತ್ತು ಕಾರ್ಯಕಾರಿ ಅಧ್ಯಕ್ಷರೂ ಆದ ಕೋವ್ಯಾಕ್ಸಿನ್ ಸಂಶೋಧನಾ ತಂಡದ ಡಾ.ಕೃಷ್ಣ ಎಲ್ಲ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರಿನ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭ್ರಮರ ಟ್ರಸ್ಟ್‌ನ ಮಾಧುರಿ ತಾತಾಚಾರಿ ಪ್ರಶಸ್ತಿ ನೀಡಿ, ಗೌರವಿಸಿದರು. ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪದ್ಮಶ್ರೀ ಪುರಸ್ಕೃತ ಹಾಗೂ ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್.ಕಿರಣ್ ಕುಮಾರ್ ಮಾತನಾಡಿ, ವೇಗವಾಗಿ ಬೆಳೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಜೀವನಕ್ಕೆ ಬೇಕಾದ ಎಲ್ಲಾ ಬಗೆಯ ಸವಲತ್ತುಗಳನ್ನು ಒದಗಿಸುವುದರೊಂದಿಗೆ ಒಂದು ಹಂತದಲ್ಲಿ ಜನರ ಬದುಕನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂಬುದಕ್ಕೆ ಕೊರೊನಾ ಬಾಧೆ ಪ್ರತ್ಯಕ್ಷ ಸಾಕ್ಷಿ ಎಂದರು.

ಭಾರತ ದೇಶದಲ್ಲಿ ಸಾವಿರಾರು ವರ್ಷಗಳಿಂದ ಅನುಸರಿಸಲಾಗುತ್ತಿರುವ ಪದ್ಧತಿ, ಸಂಪ್ರದಾಯಗಳ ಮಹತ್ವವನ್ನು ಕೊರೊನಾ ಮನದಟ್ಟು ಮಾಡಿಕೊಟ್ಟಿದೆ. ನಮಸ್ಕಾರದ ಮಹತ್ವವನ್ನು ತಿಳಿಸಿದೆ. ನಮ್ಮ ದೇಶ ವಿಜ್ಞಾನವನ್ನು ತಂತ್ರಜ್ಞಾನದಲ್ಲಷ್ಟೇ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಳವಡಿಸಿಕೊಂಡಿತ್ತು. ಆದರೆ ಇತ್ತೀಚಿನ ಶತಮಾನಗಳಲ್ಲಾದ ಬದಲಾವಣೆಗಳಿಂದ ವಿಜ್ಞಾನವೇ ಬೇರೆ ನಮ್ಮ ಜೀವನ ಕ್ರಮವೇ ಬೇರೆ ಎಂಬಂತಾಗಿದೆ. ಕೊರೊನಾ ಎಂಬ ಮಹಾಮಾರಿ, ಕಂಪ್ಯೂಟರ್ ಅನ್ನು ರೀ ಸೆಟ್ ಮಾಡುವಂತೆ ಪ್ರತಿಯೊಬ್ಬರ ಜೀವನವನ್ನು ರೀ ಸೆಟ್ ಮಾಡಿದೆ. ಭಾರತದ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ದೇಶಕ್ಕೆ ಮಾತ್ರವಲ್ಲದೆ ವಿಶ್ವಕ್ಕೆ ಸಹಾಯಕವಾಗುವ ಕೆಲಸವನ್ನು ಮಾಡಿ ತೋರಿಸಿದ್ದಾರೆ ಎಂಬುದಕ್ಕೆ ಈ ಪ್ರಶಸ್ತಿ ಪ್ರದಾನ ಸಮಾರಂಭ ಸಾಕ್ಷಿಯಾಗಿದೆ ಎಂದರು.



ಮಾನವೀಯ ಸೇವೆಗಾಗಿ 'ಭ್ರಮರ ಟ್ರಸ್ಟಿನ ಜೀವಮಾನ ಸಾಧನೆ' ಪ್ರಶಸ್ತಿಯನ್ನು ಭಾರತ್ ಬಯೋಟೆಕ್‌ನ ಸಹ–ಸಂಸ್ಥಾಪಕ ಹಾಗೂ ಕೋವ್ಯಾಕ್ಸಿನ್ ಸಂಶೋಧನಾ ತಂಡದ ಡಾ.ಕೃಷ್ಣ ಎಲ್ಲ ಅವರಿಗೆ ಪ್ರದಾನ ಮಾಡಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್.ಕಿರಣ್‌ಕುಮಾರ್, ಭಾರತ ಸರ್ಕಾರದ ಮಾಜಿ ವೈಜ್ಞಾನಿಕ ಸಲಹೆಗಾರ ಕೆ.ವಿಜಯರಾಘವನ್, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಭ್ರಮರ ಟ್ರಸ್ಟ್‌ನ ಮಾಧುರಿ ತಾತಾಚಾರಿ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಸಮಕುಲಾಧಿಪತಿ ಡಾ.ಸುರೇಶ್ ಭೋಜ್‌ರಾಜ್ ಮತ್ತಿತರರಿದ್ದರು.

ಇಂದಿಗೂ ವಸಹಾತುಶಾಹಿ ರಾಷ್ಟ್ರ: ನೂರಾರು ವರ್ಷಗಳ ಹಿಂದೆ ಭಾರತ ವಸಹಾತುಶಾಹಿ ರಾಷ್ಟ್ರವಾಗಿತ್ತು. ಕಚ್ಚಾ ವಸ್ತುಗಳನ್ನು ಇಲ್ಲಿಂದ ತೆಗೆದುಕೊಂಡು ಹೋಗಿ, ಸಿದ್ಧವಸ್ತುಗಳನ್ನಾಗಿಸಿ ಇಲ್ಲಿಗೆ ತಂದು ನಮಗೆ ಮಾರಾಟ ಮಾಡಿ ದುಡ್ಡು ಮಾಡಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿದ್ದರೂ ಭಾರತ ಇಂದಿಗೂ ವಸಾಹತುಶಾಹಿ ರಾಷ್ಟ್ರವಾಗಿದೆ. ಅಂದು ಕಚ್ಚಾ ವಸ್ತುಗಳಾದರೆ ಇಂದು ದೇಶದ ಬೌದ್ಧಿಕ ಸಾಮರ್ಥ್ಯವನ್ನು ಹೊರದೇಶಗಳು ಬಳಕೆ ಮಾಡಿಕೊಂಡು ಚೀನಾ ದೇಶವನ್ನು ಬಿಟ್ಟು ಉಳಿದೆಲ್ಲಾ ದೇಶದ ಮಾನವರನ್ನು ಉದ್ದೇಶಿತ ಗ್ರಾಹಕರನ್ನಾಗಿ ಮಾಡಲಾಗಿದೆ ಎಂದು ವಿಷಾದಿಸಿದರು.

ಮೌಲ್ಯಯುತ ವ್ಯವಸ್ಥೆ: ನಾವಷ್ಟೇ ಅಲ್ಲ ಎಲ್ಲರೂ ಬದುಕಬೇಕು ಎಂಬ ಮೌಲ್ಯಯುತ ವ್ಯವಸ್ಥೆಯಿಂದಾಗಿ ಭೂಮಿ ಜೀವಯೋಗ್ಯವಾಗಿ ಉಳಿಯಲು ಸಾಧ್ಯವಾಗಿದೆ. ಅದರಲ್ಲಿ ಇತ್ತೀಚಿನ ಪ್ರಮುಖ ಬೆಳವಣಿಗೆ ದೇಶದಲ್ಲಿ ತಯಾರಾದ ಕೊರೊನಾ ವ್ಯಾಕ್ಸಿನ್ ಆಗಿದೆ. ಸ್ವಾರ್ಥದ ಬದಲು ಎಲ್ಲರ ಒಳಿತಿಗಾಗಿ ಯೋಚನೆ ಮಾಡುವವರು ದೇಶದಲ್ಲಿರುವ ಮೌಲ್ಯಯುತ ವ್ಯವಸ್ಥೆಯಿಂದ ಬಂದಿರುವವರಾಗಿದ್ದಾರೆ. ಅಂತಹವರಲ್ಲಿ ಕೋವ್ಯಾಕ್ಸಿನ್ ತಂಡದ ಡಾ.ಕೃಷ್ಣ ಎಲ್ಲ ಅವರು ಒಬ್ಬರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಠಿಣ ಸವಾಲು: ಭಾರತ ಸರ್ಕಾರದ ಮಾಜಿ ವೈಜ್ಞಾನಿಕ ಸಲಹೆಗಾರ ಹಾಗೂ ಪದ್ಮಶ್ರೀ ಪುರಸ್ಕೃತ ಕೆ.ವಿಜಯರಾಘವನ್ ಮಾತನಾಡಿ, ಕೊರೊನಾ ಸಂಕಷ್ಟದ ಪರಿಸ್ಥಿತಿಯಲ್ಲಿ ಎಲ್ಲರ ಜೀವ ಉಳಿಸಲು ವ್ಯಾಕ್ಸಿನ್ ಬೇಕಾಗಿತ್ತು. ದೇಶದ ಜನಸಂಖ್ಯೆಗೆ ಅನುಗುಣವಾಗಿ ವ್ಯಾಕ್ಸಿನ್ ತಯಾರಿಕೆ ಕಠಿಣ ಸವಾಲಾಗಿತ್ತು ಗುಣಮಟ್ಟವನ್ನೂ ಕಾಯ್ದುಕೊಂಡು ಕೋವ್ಯಾಕ್ಸಿನ್ ಲಸಿಕೆ ಕಂಡು ಹಿಡಿದು ದೇಶದ ಉದ್ದಗಲಕ್ಕೂ ಅಲ್ಲದೆ ಹಲವಾರು ದೇಶಗಳಿಗೆ ರಫ್ತು ಮಾಡಿದ್ದು ಶ್ಲಾಘನೀಯ ಕೆಲಸ ಎಂದು ಸ್ಮರಿಸಿದರು.

ಸಂಶೋಧನೆಗೆ ಸೂಕ್ತ ವ್ಯವಸ್ಥೆ ಕಲ್ಪಿಸದೇ ಹೋದರೆ ಯುವಕರು ದೇಶಬಿಟ್ಟು ಹೋಗುತ್ತಾರೆ...!

ದೇಶದ ಆಡಳಿತ ನಡೆಸುವ ಸರ್ಕಾರಗಳು ಸಂಶೋಧನಾ ವ್ಯವಸ್ಥೆಯನ್ನು ಸೂಕ್ತ ರೀತಿ ರೂಪಿಸದಿದ್ದಲ್ಲಿ ಯುವಕರು ದೇಶಬಿಟ್ಟು ಬೇರೆ ದೇಶಗಳಿಗೆ ಹೋಗುತ್ತಾರೆ ಎಂದು ಭಾರತ್ ಬಯೋಟೆಕ್‌ನ ಸಹ–ಸಂಸ್ಥಾಪಕ ಮತ್ತು ಕಾರ್ಯಕಾರಿ ಅಧ್ಯಕ್ಷರೂ ಆದ ಕೋವ್ಯಾಕ್ಸಿನ್ ಸಂಶೋಧನಾ ತಂಡದ ಡಾ.ಕೃಷ್ಣ ಎಲ್ಲ ಕಳವಳ ವ್ಯಕ್ತಪಡಿಸಿದರು.

ಭ್ರಮರ ಟ್ರಸ್ಟಿನ 'ಜೀವಮಾನ ಸಾಧನೆ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಸರ್ಕಾರದಿಂದ ಪರಿಸರ ವ್ಯವಸ್ಥೆ ಸುಧಾರಿಸಲು ಸಾಧ್ಯವಿಲ್ಲ. ಆದರೆ ಅವಶ್ಯ ಸಂಶೋಧನೆಗಳಿಗೆ ಪೂರಕ ವ್ಯವಸ್ಥೆ ರೂಪಿಸಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆಯ ಯುವಕರು ದೇಶಬಿಟ್ಟು ಬೇರೆ ದೇಶಗಳಿಗೆ ಹೋಗುತ್ತಾರೆ. ಹಾಗೆಯೇ ಭಾರತವನ್ನು ವಿಶ್ವಮಾನ್ಯ ದೇಶವನ್ನಾಗಿಸುವ ನಿಟ್ಟಿನಲ್ಲಿ ಯುವಕರು ಸಂಶೋಧನೆಯತ್ತ ಬರಬೇಕು ಎಂದು ಸಲಹೆ ನೀಡಿದರು.

ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ವ್ಯಾಕ್ಸಿನ್ ಕಂಡುಹಿಡಿಯಲು ಸರ್ಕಾರದಿಂದ ಹಣ ಪಡೆಯದೆ ಸುಮಾರು 800 ಕೋಟಿ ರೂ.ನಷ್ಟು ಹೂಡಿಕೆ ಮಾಡಿ ಕೋವ್ಯಾಕ್ಸಿನ್ ಅಭಿವೃದ್ಧಿಪಡಿಸಲಾಯಿತು. ಸಂಶೋಧನಾ ಸಂಸ್ಥೆಗಳು ಕೂಡ ಮಾನವೀಯ ನೆಲೆಗಟ್ಟಿನಲ್ಲಿ ಕೆಲಸ ಮಾಡಬೇಕು. ಮಾನವೀಯ ಸ್ಪರ್ಶ ನೀಡಬೇಕು. ಆದ್ದರಿಂದ ನಮ್ಮ ಸಂಸ್ಥೆಗೂ ಭಾರತ್ ಬಯೋಟೆಕ್ ಎಂದು ಹೆಸರಿಡಲಾಯಿತು ಎಂದರು.

ಮೈಸೂರಿಗೂ ನನಗೂ ನಂಟಿದ್ದು, ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಆರ್.ಗುರು ಅವರು ರೋಟರಿ ಫೌಂಡೇಶನ್ ಫೆಲೋಶಿಪ್‌ಗೆ ನನ್ನನ್ನು ಆಯ್ಕೆ ಮಾಡದಿದ್ದರೆ ನಾನು ಅಮೇರಿಕಾಕ್ಕೆ ತೆರಳಿ ವಿದಾಭ್ಯಾಸ ನಡೆಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಸ್ಮರಿಸಿದರಲ್ಲದೆ, ಸನ್ಮಾನಗಳಿಂದ ದೂರ ಉಳಿದಿದ್ದ ನನಗೆ ಈ ಅಭಿನಂದನಾ ಸಮಾರಂಭ ಅವಿಸ್ಮರಣೀಯವೆನಿಸಿದೆ. ನೂರಾರು ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಪದ್ಮಶ್ರೀ ಪುರಸ್ಕೃತರು, ವಿಜ್ಞಾನಿಗಳ ಸಮ್ಮುಖದಲ್ಲಿ ಪ್ರಶಸ್ತಿ ಪಡೆದಿದ್ದು ಅತ್ಯಂತ ವಿಶೇಷವೆನಿಸಿದೆ ಎಂದು ಹೇಳಿದರು.

ಇದೇ ವೇಳೆ ಶೃಂಗೇರಿ ಶಾರದಾಪೀಠ, ಜೆಎಸ್‌ಎಸ್ ಅಕಾಡೆಮಿ, ಜೆಎಸ್‌ಎಸ್ ಫೌಂಡೇಶನ್, ಭಾರತ್ ಸ್ವಾಭಿಮಾನ್ ಟ್ರಸ್ಟ್, ಆದಿತ್ಯ ಅಧಿಕಾರಿ ಆಸ್ಪತ್ರೆ, ವಾಸವಿ ಶಾಂತಿಧಾಮ, ವಿಜಯ ವಿಠಲ ವಿದ್ಯಾಸಂಸ್ಥೆ, ಪತಂಜಲಿ ಯೋಗ ಸಮಿತಿ, ದೀಕ್ಷಿತ್ ಆರೋಗ್ಯಧಾಮ, ಶಿವಮೊಗ್ಗ ಗುರುಕುಲ ಸಂಸ್ಥೆ, ಐಐಟಿ ಮದ್ರಾಸ್, ಮೈಸೂರಿನ ಅಮೃತ ವಿದ್ಯಾಪೀಠ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಿಂದ ಕೋವ್ಯಾಕ್ಸಿನ್ ಸಂಶೋಧನಾ ತಂಡದ ಡಾ.ಕೃಷ್ಣ ಎಲ್ಲ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತ ವಿಜ್ಞಾನ ಕಾಂಗ್ರೆಸ್‌ನ ವಿಶ್ರಾಂತ ಜನರಲ್ ಪ್ರೆಸಿಡೆಂಟ್ ಹಾಗೂ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಸಮಕುಲಾಧಿಪತಿ ಡಾ.ಸುರೇಶ್ ಭೋಜ್‌ರಾಜ್, ಭ್ರಮರ ಟ್ರಸ್ಟ್‌ನ ಶ್ರೀನಿವಾಸನ್ ಮತ್ತಿತರರಿದ್ದರು.

ಸಿಎಂ, ಕೈಗಾರಿಕಾ ಸಚಿವರ ರಾಜೀನಾಮೆಗೆ ಆಗ್ರಹಿಸಿ ಮೈಸೂರಲ್ಲಿ ಕಾಂಗ್ರೆಸ್ ಭಾರೀ ಪ್ರತಿಭಟನೆ



ಮೈಸೂರು, ಮಾ.4(ಪಿಎಂ)– ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ರಾಜೀನಾಮೆ ನೀಡಬೇಕು ಹಾಗೂ ಚನ್ನಗಿರಿ ಕ್ಷೇತ್ರದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ವತಿಯಿಂದ ಶನಿವಾರ ಭಾರೀ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಆರೋಪಿಸಿ, ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಸಾಯನಿಕ ಪೂರೈಸುವ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು 40 ಲಕ್ಷ ಲಂಚ ಪಡೆಯುವಾಗ ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಮಾಡಾಳ್ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಹೀಗಾಗಿ ಮಾಡಾಳ್ ವಿರೂಪಾಕ್ಷಪ್ಪರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಮಾಡಾಳ್ ವಿರೂಪಾಕ್ಷಪ್ಪ ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ 2022–23ನೇ ಸಾಲಿಗೆ ಕಚ್ಚಾಸಾಮಗ್ರಿಗಳ ಖರೀದಿಗೆ ಮಾರುಕಟ್ಟೆ ದರಕ್ಕಿಂತ 4 ಪಟ್ಟು ಹೆಚ್ಚು ಬೆಲೆ ನಿಗದಿಪಡಿಸಿ, 850 ಕೋಟಿಗೂ ಹೆಚ್ಚು ಮೊತ್ತದಲ್ಲಿ ಖರೀದಿಸಿದ್ದಾರೆ. ವಿಧಾನಸಭಾ ಚುನಾವಣೆಗೆ ಸಮೀಪದಲ್ಲಿ ಹೊಸ ಟೆಂಡರ್ ಕರೆಯಲು ಅವಕಾಶವಿಲ್ಲ. 17ಕ್ಕೂ ಹೆಚ್ಚು ವಿವಿಧ ಕಚ್ಚಾ ಸಾಮಗ್ರಿಗಳ ಖರೀದಿಗೆ ಒಂದೇ ವಾರದಲ್ಲಿ ಟೆಂಡರ್ ಕರೆಯಲಾಗಿದೆ. ಅಂದಾಜು 150 ಕೋಟಿಗೂ ಹೆಚ್ಚಿನ ಮೊತ್ತವನ್ನು ಗುತ್ತಿಗೆದಾರರಿಗೆ ಅಕ್ರಮವಾಗಿ ಲಾಭ ಮಾಡಿಕೊಟ್ಟು ಇದರಿಂದ ಕನಿಷ್ಠ 15 ಕೋಟಿ ಕಮಿಷನ್ ಪಡೆದಿರುವ ಆರೋಪಗಳೂ ಕೇಳಿ ಬಂದಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಖಾನೆಯ ಆಡಳಿತ ಮಂಡಳಿ, ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಮಾರುಕಟ್ಟೆಯಲ್ಲಿನ ದರಕ್ಕಿಂತಲೂ ಹೆಚ್ಚಿನ ದರ ನಮೂದಿಸಿ ಭಾರೀ ಪ್ರಮಾಣದಲ್ಲಿ ಕಮಿಷನ್ ಪಡೆದಿರುವುದರಿಂದಲೇ ಪ್ರಶಾಂತ್ ಅವರ ಮನೆ, ಕಚೇರಿಯಲ್ಲಿ 8 ಕೋಟಿಗೂ ಅಧಿಕ ಹಣ ಸಿಕ್ಕಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ರಾಜ್ಯ ಸರ್ಕಾರ ಸಂಪತ್ತನ್ನು ಲೂಟಿ ಮಾಡುತ್ತಿದ್ದರೂ ಮುಖ್ಯಮಂತ್ರಿಗಳು ಕಾಣದ ರೀತಿಯಲ್ಲಿ ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರಾಜ್ಯ ಬಿಜೆಪಿ ಸರ್ಕಾರದಲ್ಲಿ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಪಡೆಯಲೂ ಲಂಚ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಮೂಲಕ ಕೆಟ್ಟ ಸಂಪ್ರದಾಯಕ್ಕೆ ಬಿಜೆಪಿ ಸರ್ಕಾರ ನಾಂದಿ ಹಾಡಿದೆ. ಅಲ್ಲದೆ, ಗ್ಯಾಸ್, ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಸಿ ಬಡವರ ಮೇಲೆ ಬರೆ ಹಾಕಿದೆ. ಜೊತೆಗೆ ಎಸ್‌ಸಿ–ಎಸ್‌ಟಿ ಸಮುದಾಯದ ಸೌಲಭ್ಯಗಳನ್ನು ಕಡಿತ ಮಾಡುತ್ತಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಈ ಸಮುದಾಯದ ಶ್ರೇಯೋಭಿವೃದ್ಧಿಗೆ 35 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದ್ದರು. ಆದರೆ ಈ ಸರ್ಕಾರ ಬಜೆಟ್‌ನಲ್ಲಿ 26 ಸಾವಿರ ಕೋಟಿ ಕಡಿತ ಮಾಡಿದೆ ಎಂದು ಆರೋಪಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕೇವಲ ಒಂದು ದಿನ ಲೋಕಾಯುಕ್ತ ದಾಳಿ ಮಾಡಿದ್ದಕ್ಕೆ 8 ಕೋಟಿ ಅಕ್ರಮ ಹಣ ಸಿಕ್ಕಿದೆ. ಇದೇ ರೀತಿಯಲ್ಲಿ ಬಿಜೆಪಿಯವರ ವಿರುದ್ಧ ನಿರಂತರ ದಾಳಿ ಮಾಡಿದರೆ ಅದೆಷ್ಟೋ ಲಕ್ಷ ಕೋಟಿ ಸಿಗಲಿದೆ. ಬಿಜೆಪಿ ದುರಾಡಳಿತಕ್ಕೆ ಜನಾಕ್ರೋಶ ಭುಗಿಲೆದ್ದಿದ್ದು, ಜನ ರೋಸಿ ಹೋಗಿದ್ದಾರೆ. ಕೆಟ್ಟ ಸರ್ಕಾರ ಇಂದು ದೇಶದ ಆಡಳಿತ ನಡೆಸುತ್ತಿದೆ ಎಂದು ಕಿಡಿಕಾರಿದರು. ಶಾಸಕರಾದ ಹೆಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಕೆ.ಹರೀಶ್‌ಗೌಡ, ಎಂ.ಪ್ರದೀಪ್‌ಕುಮಾರ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಕೆ.ಜಿ.ಕೊಪ್ಪಲು ಕನ್ನೇಗೌಡ ಟೈಗರ್ಸ್ ಮತ್ತು ರಾಕೇಶ್ ಗೆಳೆಯರ ಬಳಗದ ವತಿಯಿಂದ ಸಮಾಜ ಸೇವಕರೂ ಆದ ಯುವ ಮುಖಂಡ ಆರ್.ರಾಕೇಶ್ ಗೌಡ ಅವರ ಹುಟ್ಟುಹಬ್ಬವನ್ನು ಮಹಿಳೆಯರಿಗೆ ಸೀರೆ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಭೀಮ ಮಹೇಶ್, ಅನಿಲ್, ಮೋಹನ್, ರವಿ, ಕಾರ್ತಿಕ್, ಭರತ್, ಮನು ದೀಪು ಮತ್ತು ಪೃಥ್ವಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಇದಲ್ಲದೆ, ಬಡ ರೋಗಿಗಳಿಗೆ ಹಣ್ಣು–ಹಂಪಲು, ಆಟೋ ಚಾಲಕರಿಗೆ ಸಮವಸ್ತ್ರ ಹಾಗೂ ಬಡಮಹಿಳೆಯರಿಗೆ ಹೊಲಿಗೆ ಯಂತ್ರವನ್ನೂ ಸಹ ವಿತರಿಸಲಾಯಿತು.

ಮಾ.13 ರಂದು ಅಪ್ರೆಂಟಿಸ್‌ಶಿಪ್ ಮೇಳ

ಮೈಸೂರು, ಮಾ.4– ಮಾ.13 ರಂದು ಅಪ್ರೆಂಟಿಸ್‌ಶಿಪ್ ಮೇಳವನ್ನು ನಗರದ ಎನ್.ಆರ್. ಮೊಹಲ್ಲಾದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿದ್ದು, ಈ ಮೇಳದಲ್ಲಿ ಐ.ಟಿ.ಐ ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಉಪ ಪ್ರಾಚಾರ್ಯ ಎಂ.ಜಯೇಂದ್ರ (ದೂ.ಸಂ.8792426277) ಹಾಗೂ ತರಬೇತಿ ಅಧಿಕಾರಿ ಎಂ.ಹೆಚ್.ನಾಗೇಶ್ (ದೂ.ಸಂ.9945616088) ಅವರನ್ನು ಸಂಪರ್ಕಿಸಬಹುದು ಎಂದು ಕೈಗಾರಿಕಾ ತರಬೇತಿ ಸಂಸ್ಥೆಯ ಉಪ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಂಚ ಸ್ವೀಕಾರ ಪ್ರಕರಣಕ್ಕೆ ಪ್ರಧಾನಿಗಳೇ ನೇರ ಹೊಣೆ: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ



ಮೈಸೂರು, ಮಾ.4(ಪಿಎಂ)– ಪ್ರವಾಹ, ಕೋವಿಡ್ ಸಂಕಷ್ಟದಲ್ಲಿ ರಾಜ್ಯಕ್ಕೆ ಭೇಟಿ ನೀಡದೇ ಈಗ ನಾಚಿಕೆ ಇಲ್ಲದೇ ಮತಯಾಚನೆಗೆ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ಅಲ್ಲದೆ ಪ್ರತಿಪಕ್ಷಗಳ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವರ ವಿರುದ್ಧ ಕಿಡಿಕಾರಿದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಲಂಚ ಸ್ವೀಕಾರ ಪ್ರಕರಣಕ್ಕೆ ಪ್ರಧಾನಿಗಳೇ ನೇರ ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಕೇಂದ್ರ, ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರಧಾನಿ, ಕೇಂದ್ರ ಗೃಹ ಸಚಿವರು ಪದೇ ಪದೆ ರಾಜ್ಯಕ್ಕೆ ಭೇಟಿ ನೀಡುತ್ತಿರುವ ಕುರಿತು ಪ್ರತಿಕ್ರಿಯಿಸಿ, ಪ್ರತಿಯೊಂದು ರಾಜ್ಯಕ್ಕೆ ಅಲ್ಲಿನ ಚುನಾವಣೆ ಸಂದರ್ಭದಲ್ಲಿ ಭೇಟಿ ನೀಡಿ ಪ್ರಚಾರ ಮಾಡುತ್ತಿದ್ದಾರೆ. ಇವರು ಯಾವಾಗ ಆಡಳಿತದ ಮಾಡುತ್ತಾರೋ ಗೊತ್ತಿಲ್ಲ. ಇವರು ಪ್ರಧಾನ ಮಂತ್ರಿ ಆಗುವ ಬದಲು ಚುನಾವಣೆ ಪ್ರಚಾರ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಪ್ರವಾಹ, ಕೋವಿಡ್ ವೇಳೆ ಆಕ್ಸಿಜನ್ ಕೊರತೆ ಉಂಟಾದಾಗ ಬರಲಿಲ್ಲ. ಆದರೆ ಈಗ ನಾಚಿಕೆ ಇಲ್ಲದೇ ಕೇವಲ ಮತ ಯಾಚನೆಗೆ ಬರುತ್ತಿದ್ದಾರೆ. ಅಲ್ಲದೆ, ಬಂದು ಪ್ರತಿಪಕ್ಷಗಳ ಮೇಲೆ ಇಲ್ಲ–ಸಲ್ಲದ ಆರೋಪ ಮಾಡುತ್ತಿದ್ದಾರೆ. ಅವರಲ್ಲಿಯೇ ಈ ಒಂದು ಪ್ರಕರಣ ಬೆಳಕಿಗೆ ಬಂದಿದೆ. ಪ್ರಧಾನಮಂತ್ರಿಗಳೇ ಇದಕ್ಕೆ ನೇರ ಹೊಣೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಭ್ರಷ್ಟಾಚಾರ ಭಾರೀ ಪ್ರಮಾಣದಲ್ಲಿ ನಡೆಯುತ್ತಿದ್ದು, ಅದರಲ್ಲಿ ಇಂದು ಒಂದು ಪ್ರಕರಣ ಬೆಳಕಿಗೆ ಬಂದಿದೆ ಅಷ್ಟೇ. ಈಗ ಲೋಕಾಯುಕ್ತ ತಂದಿದ್ದು ನಾವೇ ಎಂದು ಅದರಲ್ಲಿಯೂ ಕ್ರೆಡಿಟ್ ತೆಗೆದುಕೊಳ್ಳಲು ನೋಡುತ್ತಿದ್ದಾರೆ. ಆದರೆ ನಿಜವಾಗಲೂ ಲೋಕಾಯುಕ್ತ ಬರಲು ಕಾರಣ ಕೋರ್ಟ್‌ಗಳ ನಿರ್ಧಾರಗಳಾಗಿವೆ ಎಂದು ಹೇಳಿದರು.

ವರುಣಾದಲ್ಲಿ ಸದೃಢ: ವರುಣಾ ಕ್ಷೇತ್ರದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಬಗ್ಗೆ ಪ್ರತಿಕ್ರಿಯಿಸಿ, ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಯಾತ್ರೆ ಮಾಡುತ್ತಿರುವುದು ನನಗೇ ಗೊತ್ತಿಲ್ಲ. ಇನ್ನು ಸಾಮಾನ್ಯ ಜನತೆಗೆ ಗೊತ್ತಿರುತ್ತದೆಯೇ? ವರುಣಾ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ. ಕ್ಷೇತ್ರ ರಚನೆಯಾದಾಗಿನಿಂದಲೂ ಕಾಂಗ್ರೆಸ್ ಅನ್ನೇ ಜನ ಗೆಲ್ಲಿಸಿದ್ದಾರೆ ಈಗಲೂ ಕಾಂಗ್ರೆಸ್ ಪಕ್ಷ ಕ್ಷೇತ್ರದಲ್ಲಿ ಸದೃಢವಾಗಿದೆ ಎಂದರು. ಸಿದ್ದರಾಮಯ್ಯನವರು ಸ್ಪರ್ಧಿಸುವ ಕ್ಷೇತ್ರದ ಆಯ್ಕೆ ಬಗ್ಗೆ ಬಿಜೆಪಿಗರ ಟೀಕೆ ಕುರಿತು ಪ್ರತಿಕ್ರಿಯಿಸಿ, ಸಿದ್ದರಾಮಯ್ಯನವರಿಗೆ ಕ್ಷೇತ್ರವಿಲ್ಲ ಎಂದು ಟೀಕಿಸುವುದು ಸರಿಯಲ್ಲ. ಹಲವು ಕ್ಷೇತ್ರಗಳ ಜನತೆ ತಮ್ಮ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುವಂತೆ ಒತ್ತಾಯಿಸಿದ್ದಾರೆ ಎಂದು ಹೇಳಿದರು.



ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ವತಿಯಿಂದ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ವಿಶ್ವ ಇಂಜಿನಿಯರ್ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಇಂಜಿನಿಯರ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಸದಾಶಿವೇಗೌಡ 'ಸುಸ್ಥಿರ ಅಭಿವೃದ್ಧಿ' ಕುರಿತು ಉಪನ್ಯಾಸ ನೀಡಿದರು. ಈ ವೇಳೆ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಕಾರ್ಯದರ್ಶಿ ಎಚ್.ಎಸ್.ಸುರೇಶ್ ಬಾಬು, ಜಂಟಿ ಕಾರ್ಯದರ್ಶಿ ಡಾ.ಆರ್.ದೀಪು ಉಪಸ್ಥಿತರಿದ್ದರು.

ಗೋಣಿಕೊಪ್ಪದಲ್ಲಿ ಕನ್ನಡ ಹಬ್ಬಕ್ಕೆ ವರ್ಣರಂಜಿತ ಚಾಲನೆ

ಮೊಳಗಿದ ಘೋಷಣೆಗಳು, ವೈಭವದ ಮೆರವಣಿಗೆ, ಸಾವಿರಾರು ಮಂದಿ ಭಾಗಿ





ಗೋಣಿಕೊಪ್ಪ, ಮಾ.4– ಭಾಷೆ, ಕಲೆ, ಸಂಸ್ಕೃತಿ, ಆಚಾರ–ವಿಚಾರ ಅನಾವರಣದ ಮೂಲಕ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನ ದಲ್ಲಿ ನಿರ್ಮಿಸಿರುವ ಡಾ. ಪಿ. ಎಂ. ನಾಣಮಯ್ಯ ಸಭಾಂಗಣ ಮತ್ತು ಡಾ. ಐ. ಮಾ. ಮುತ್ತಣ್ಣ ವೇದಿಕೆಯಲ್ಲಿ ವಿವಿಧ ಕಾರ್ಯಕ್ರಮಗಳು ಕನ್ನಡ ಬೆಳವಣಿಗೆಗೆ ಪೂರಕ ಸಂದೇಶ ನೀಡಿದವು. ಕನ್ನಡದ ಘೋಷಣೆಗಳು ಮೊಳಗಿದವು. ಕಿರಿಯರು, ಹಿರಿಯರ ಸಂಗಮದ ಮೂಲಕ ಕನ್ನಡದ ಘೋಷಣೆ ಕೂಗಿದರು.

ಕನ್ನಡ ಬಳಕೆಗೆ ಕಾಯ್ದೆ: ಡಾ. ಪಿ. ಎಂ. ನಾಣಮಯ್ಯ ಸಭಾ ಮಂಟಪ, ಐ.ಮಾ. ಮುತ್ತಣ್ಣ ವೇದಿಕೆಯಲ್ಲಿ 16 ನೇ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಾಸಕ ಕೆ. ಜಿ. ಬೋಪಯ್ಯ ದೀಪ ಬೆಳಸುವ ಮೂಲಕ ಉದ್ಘಾಟಿಸಿ ಮಾತನಾಡಿ, ರಾಜ್ಯ ಸರ್ಕಾರ ಕೂಡ ಕನ್ನಡ ಪೋಷಣೆಗೆ ಕಾಯ್ದೆ ರೂಪಿಸಿದೆ. ಸರ್ಕಾರದ ಆಡಳಿತ ವ್ಯವಸ್ಥೆಗೆ ಕನ್ನಡ ಕಡ್ಡಾಯ ಬಳಕೆ ಕಾನೂನು ರೂಪಿಸಿರುವುದು ಭವಿಷ್ಯದಲ್ಲಿ ಕನ್ನಡ ಪೋಷಣೆಗೆ ನಾಂದಿಯಾಡಲಿದೆ ಎಂದು ಹೇಳಿದರು.

ಕಾಯ್ದೆಗೆ ರಾಜ್ಯಪಾಲರ ಒಪ್ಪಿಗೆ ಉಚ್ಚ ನ್ಯಾಯಾಲಯ ಒಪ್ಪಿಗೆ ಕೂಡ ದೊರೆತಿದೆ. ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಲು ಸರ್ಕಾರ ನಿಯಮ ರೂಪಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೂಡ ಕನ್ನಡ ಭಾಷೆ ಬಳಕೆಗೆ ಅಂಕ ನೀಡುವ ಕುರಿತು ಚರ್ಚಿಸಲಾಗುತ್ತಿದೆ ಎಂದರು.

ಕಸಾಪ ನಿಕಟಪೂರ್ವ ರಾಜ್ಯಾಧ್ಯಕ್ಷ ನಾಡೋಜ ಡಾ. ಮನು ಬಳಿಗಾರ್ ಮಾತನಾಡಿ, ಕೊಡಗಿನ ಭೌಗೋಳಿಕ ಹಿನ್ನೆಲೆ, ಕೃಷಿ, ಸಂಸ್ಕೃತಿ, ಭಾಷೆ, ಕಲೆ ಮತ್ತಷ್ಟು ಬೆಳವಣಿಗೆಗೆ ಕಾರ್ಯಕ್ರಮಗಳು ಸಹಾಯವಾಗಲಿದೆ. ಸಮಾವೇಶಗಳು ಹೆಚ್ಚು ಸರ್ಕಾರದ ಮಟ್ಟದಲ್ಲಿ ನಡೆಯಬೇಕಿದೆ. ರಾಜ್ಯ ಸರ್ಕಾರ ಕೂಡ ಹೆಚ್ಚುವರಿ ಅನುದಾನದ ಮೂಲಕ ಬೆಂಬಲ ನೀಡುತ್ತಿದೆ. ಇದರ ಸದುಪಯೋಗವಾಗಬೇಕಿದೆ ಎಂದರು. ಸ್ಮರಣ ಸಂಚಿಕೆ ಮುಖಪುಟವನ್ನು ಅರಮೇರಿ ಕಳಂಚೇರಿ ಮಠದ ಅಧ್ಯಕ್ಷ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಬಿಡುಗಡೆಗೊಳಿಸಿದರು. ಈ ಸಂದರ್ಭ ಸಂಚಿಕೆ ಸಂಪಾದಕ ಕೆ. ಬಿ. ಜಗದೀಶ್ ಜೋಡುಬೀಟಿ, ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಮಂಡೇಪಂಡ ಗೀತಾ ಮಂದಣ್ಣ, ಕಸಾಪ ನಿಕಟಪೂರ್ವ ಅಧ್ಯಕ್ಷ ಲೋಕೇಶ್ ಸಾಗರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆರ್. ಪಿ. ಚಂದ್ರಶೇಖರ್, ಖಜಾಂಚಿ ಎಂ. ಬಿ. ಜೋಯಪ್ಪ, ಕಾರ್ಯದರ್ಶಿ ಎಸ್.ಐ. ಮುನೀರ್, ಮುದಿನೆರವನ ರೇವತಿ ರಮೇಶ್, ಕಸಾಪ ಪೊನ್ನಂಪೇಟೆ ಹೋಬಳಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಕುಶಾಲನಗರ ಅಧ್ಯಕ್ಷ ಕೆ. ಎಸ್. ಮೂರ್ತಿ, ವಿರಾಜಪೇಟೆ ಅಧ್ಯಕ್ಷ ರಾಜೇಶ್ ಪದ್ಮನಾಭ, ಸೋಮವಾರಪೇಟೆ ಅಧ್ಯಕ್ಷ ಎಸ್. ಡಿ. ವಿಜೇತ್, ಮಡಿಕೇರಿ ಅಧ್ಯಕ್ಷ ಅಂಬೆಕಲ್ ನವೀನ್, ಪೊನ್ನಂಪೇಟೆ ತಾಲೂಕು ನಿಕಟಪೂರ್ವ ಅಧ್ಯಕ್ಷ ಡಾ. ಚಂದ್ರಶೇಖರ್ ಇದ್ದರು.

ಡಾ. ಪಿ.ಎಂ. ನಾಣಮಯ್ಯ ಸಭಾ ಮಂಟಪದ ಆವರಣದಲ್ಲಿ ರಾಷ್ಟ್ರಧ್ವಜವನ್ನು ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು, ಕನ್ನಡ ಸಾಹಿತ್ಯ ಪರಿಷತ್ತು ಧ್ವಜಾರೋಹಣವನ್ನು ಕಸಾಪ ಜಿಲ್ಲಾಧ್ಯಕ್ಷ ಕೇಶವ ಕಾಮತ್, ಕನ್ನಡ ಧ್ವಜವನ್ನು ಪೊನ್ನಂಪೇಟೆ ತಾಲೂಕು ಕಸಾಪ ಅಧ್ಯಕ್ಷ ಕೋಳೇರ ದಯಾ ಚೆಂಗಪ್ಪ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭ ರಾಷ್ಟ್ರಗೀತೆ, ನಾಡಗೀತೆ ಗಾಯನ ಮೂಡಿಬಂತು.

ನೆನಪಿನ ದ್ವಾರ: ಸ್ಥಳೀಯವಾಗಿ ಸಮಾಜಕ್ಕೆ ಕೊಡುಗೆ ನೀಡಿದವರ ಹೆಸರಿನಲ್ಲಿ ದ್ವಾರ ನಿರ್ಮಿಸಿ ನೆನಪಿಸಿಕೊಳ್ಳಲಾಯಿತು. ಒಂಬತ್ತು ಕಡೆಗಳಲ್ಲಿ ನಿರ್ಮಿಸಿರುವ ದ್ವಾರವನ್ನು ಏಕಕಾಲಕ್ಕೆ ಉದ್ಘಾಟಿಸಲಾಯಿತು. ಜಮ್ಮಡ ಕರುಂಬಯ್ಯ ನೆನಪಿನ ದ್ವಾರ, ಕೊಳ್ಳಿಮಾಡ ಸಿ ಮಂದಣ್ಣ ದ್ವಾರ, ಮಲ್ಲಂಡ ಕೆ. ನಂಜಪ್ಪ ದ್ವಾರ, ವಾಟೇರೀರ ಪಿ. ಅಯ್ಯಪ್ಪ ದ್ವಾರ, ಅಜ್ಜಿಕುಟ್ಟೀರ ಶಾಂತು ಅಪ್ಪಯ್ಯ, ಮನೆಯಪಂಡ ಡಬ್ಲ್ಯೂ ಅಯ್ಯಪ್ಪ, ಜಿ. ಟಿ. ಪುಟ್ಟತಾಯಮ್ಮ ಎಂ. ಜಿ. ಪದ್ಮನಾಭ ಕಾಮತ್, ಸಿ. ಟಿ. ದೇವಯ್ಯ ದ್ವಾರ ಉದ್ಘಾಟಿಸಲಾಯಿತು.

ಪ್ರಮುಖರಾದ ಕೊಳ್ಳಿಮಾಡ ಅಜಿತ್ ಅಯ್ಯಪ್ಪ, ಕುಲ್ಲಚಂಡ ಪಿ. ಬೋಪಣ್ಣ, ಕಡೇಮಾಡ ಸುನಿಲ್ ಸುಬ್ರಮಣಿ, ಕಿರಿಯಮಾಡ ಅರುಣ್ ಪೂಣಚ್ಚ, ಚೆಪ್ಪುಡೀರ ಗಣಪತಿ, ಎಂ. ಎನ್. ಪ್ರಕಾಶ್, ಎಂ. ಜಿ. ಮೋಹನ್, ಮನೆಯಪಂಡ ಸೋಮಣ್ಣ, ಎಸ್. ಎಲ್. ಶಿವಣ್ಣ ಜಪ್ಪೋಡಿ ರಾಜಾ ಉದ್ಘಾಟಿಸಿದರು. ಅಜ್ಜಿಕುಟ್ಟೀರ ಎ ಅಪ್ಪಣ್ಣ ಮುಖ್ಯದ್ವಾರವನ್ನು ಜಿಪಂ ಮಾಜಿ ಸದಸ್ಯ ಸಿ.ಕೆ ಬೋಪಣ್ಣ, ಮುಲ್ಲೇಂಗಡ ಬೇಬಿ ಚೋಂದಮ್ಮ ಪುಸ್ತಕ ಮಳಿಗೆಯನ್ನು ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬೀಳಗಿ, ಕೇಚಮಾಡ ಸುಬ್ಬಯ್ಯ ಸ್ತ್ರೀಶಕ್ತಿ ಸಂಘಟನೆಗಳ ಮಳಿಗೆಯನ್ನು ಸ್ತ್ರೀಶಕ್ತಿ ಸಂಘಟಕಿ ಎಂ. ಎಸ್. ರಜನಿ, ಆಲೀರ ಆಲಿ ಚಿತ್ರಕಲಾ ಪ್ರದರ್ಶನ ಮಳಿಗೆಯನ್ನು ಆಲೀರ ಎರ್ಮಿ ಹಾಜಿ, ಡಾ. ಪಿ. ಎಂ. ನಾಣಮಯ್ಯ ಸಭಾಂಗಣವನ್ನು ಸಮಾಜ ಸೇವಕ ಪೊನ್ನಿಮಾಡ ಸುರೇಶ್, ಡಾ. ಐ. ಮಾ. ಮುತ್ತಣ್ಣ ವೇದಿಕೆಯನ್ನು ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು.

ಚಂದ್ರಕಲಾ ವಿ. ಮೂರ್ತಿ, ವಿ. ಟಿ. ಶ್ರೀನಿವಾಸ್ ಹಾಗೂ 29 ಕಲಾವಿದರ ತಂಡದಿಂದ ಹಚ್ಚೇವು ಕನ್ನಡ ದೀಪ, ನೇಗಿಲ ಯೋಗಿ ಹಾಡುಗಳು ಮೂಡಿಬಂದವು. ಕಲಾವಿದ ಬಿ. ಆರ್. ಸತೀಶ್– ಗಾಯಕ ಟಿ. ಡಿ. ಮೋಹನ್ ತಂಡದ ಕುಂಚಗಾಯನದ ಮೂಲಕ ಕನ್ನಡಕ್ಕೆ ವಿಶೇಷ ಗೌರವ ನೀಡಲಾಯಿತು.

ಪುಸ್ತಕ ಲೋಕಾರ್ಪಣೆ: ಜಯಪ್ರಕಾಶ್ ಪುತ್ತೂರು ಬರೆದ ಬದುಕಲು ಬಿಡಿ ಪ್ಲೀಸ್, ಶರ್ಮಿಳಾ ರಮೇಶ್ ಬರೆದ ಲಹರಿ, ಲಲಿತಾ ಪ್ರಬಂಧ, ಕಿಗ್ಗಾಲು ಗಿರೀಶ್ ಬರೆದ ಅನಿರೀಕ್ಷಿತ ತಿರುವುಗಳು ಕಾದಂಬರಿ, ಕೃಪಾ ದೇವರಾಜ್ ಬರೆದ ಚೌ ಚೌ ಬಾತ್, ಫ್ರಾನ್ಸಿಸ್ ಚಿರಯ್ಕಲ್ ಬರೆದ ಗ್ರಾಮಾಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿ ಮತ್ತು ಮಹಿಳಾ ಸ್ವ ಸಹಾಯ ಸಂಘಗಳ ಪಾತ್ರ ಪುಸ್ತಕಗಳನ್ನು ಕಸಾಪ ಮಾಜಿ ಜಿಲ್ಲಾಧ್ಯಕ್ಷ ಟಿ. ಪಿ. ರಮೇಶ್ ಬಿಡುಗಡೆಗೊಳಿಸಿದರು.

ಸಂಸ್ಕೃತಿ ಬಿಂಬಿಸಿದ ಬೊಟ್ಟ್ ಪೊಡಿಯ: ಸಮ್ಮೇಳನಾಧ್ಯಕ್ಷೆ ಡಾ. ತೀತೀರ ರೇಖಾ ವಸಂತ್ ಕೊಡವರ ಬೊಟ್ಟ್ ಪೊಡಿಯ (ಸೀರೆ) ಉಟ್ಟು ಸ್ಥಾನಕ್ಕೆ ಸಂಸ್ಕೃತಿಯ ಮೆರಗು ನೀಡಿದರು. ನೀಲಿ, ಕೆಂಪು ಬಣ್ಣದ ಸೀರೆಗೆ ಚಿನ್ನದ ಬಣ್ಣದ ಬೊಟ್ಟ್ ಇಟ್ಟ ಸೀರೆ ವಿಶೇಷ ಆಕರ್ಷಣೆಯಾಗಿತ್ತು. ತಲೆಗೆ ವಸ್ತ್ರ, ಕೊರಳಿಗೆ ಪತ್ತಾಕ್ ಆಭರಣ ತೊಟ್ಟು ಕೊಡವರ ಸಾಂಪ್ರದಾಯಿಕ ಉಡುಪಿಗೆ ಮನ್ನಣೆ ನೀಡಿದರು. ಇವರಿಗೆ ಹೂಮಾಲೆ ಹಾಕಿ ಮೆರವಣಿಗೆಯಲ್ಲಿ ಕರೆದುಕೊಂಡು ಬರಲಾಯಿತು. ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾ ಕುಶಾಲಪ್ಪ ಉದ್ಘಾಟನ ಕಾರ್ಯಕ್ರಮಕ್ಕೆ ಗೈರಾದರು.

ಕಲೆ, ಸಂಸ್ಕೃತಿ ಮೆರಗು

ಪಾಲಿಬೆಟ್ಟ ರಸ್ತೆ ಜಂಕ್ಷನ್‌ನಿಂದ ಸಮ್ಮೇಳನಾಧ್ಯಕ್ಷೆ ಮೆರವಣಿಗೆಯು ವೇದಿಕೆವರೆಗೂ ಸಾಗಿ ಬಂತು. ಕಿರಿಯ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 3 ಸಾವಿರ ಕನ್ನಡ ಅಭಿಮಾನಿಗಳು ಮೆರವಣಿಗೆಯಲ್ಲಿ ಕನ್ನಡದ ಸಂದೇಶದೊಂದಿಗೆ ಸಾಗಿ ಬಂದರು. ಸಮ್ಮೇಳನಾಧ್ಯಕ್ಷೆ ಡಾ. ತೀತೀರ ರೇಖಾ ವಸಂತ್, ಕಸಾಪ ಜಿಲ್ಲಾಧ್ಯಕ್ಷ ಕೇಶವ ಕಾಮತ್, ಹೋಬಳಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು ಅವರುಗಳನ್ನು ತೆರೆದ ವಾಹನದಲ್ಲಿ ಕರೆತರಲಾಯಿತು. ಮಂಗಳವಾದ್ಯ, ಚಂಡೆವಾದ್ಯ, ಕಳಸ ಮೆರವಣಿಗೆ, ಸ್ತಬ್ದಚಿತ್ರ, ಗೊಂಬೆಯಾಟ, ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ, ಬ್ಯಾಂಡ್‌ಸೆಟ್, ಸ್ತ್ರೀಶಕ್ತಿ, ಸಂಜೀವಿನಿ ಒಕ್ಕೂಟ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಟನೆ, ಅಂಗನವಾಡಿ, ಆಶಾ ಕಾರ್ಯಕರ್ತೆ, ಶಿಕ್ಷಕರು, ವಿವಿಧ ಸಂಘ–ಸಂಸ್ಥೆ, ಆಟೋ, ವಾಹನ ಚಾಲಕರು, ಎನ್‌ಸಿಸಿ, ಸ್ಕೌಟ್ಸ್ ಆಂಡ್ ಗೈಡ್ಸ್ ಪಾಲ್ಗೊಂಡರು.

ಸುಂಟಿಕೊಪ್ಪದಲ್ಲಿ ಗಾಂಜಾ ಮಾರಾಟ ಜಾಲಪತ್ತೆ

ಇಬ್ಬರ ಬಂಧನ, ಗಾಂಜಾ, ವಾಹನ, ನಗದು ವಶ



ಸುಂಟಿಕೊಪ್ಪ, ಮಾ.4– ಸುಂಟಿಕೊಪ್ಪದಲ್ಲಿ ಗಾಂಜಾ ಮಾರಾಟ ಜಾಲವೊಂದನ್ನು ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, ಮಾಲು ಹಾಗೂ ವಾಹನ ಸಹಿತ ಇಬ್ಬರನ್ನು ಬಂಧಿಸಿದ್ದಾರೆ.

ಸುಂಟಿಕೊಪ್ಪ ಚೆಸ್ಕಾಂ ಬಳಿಯ ನಿವಾಸಿಗಳಾದ ಅಪ್ಸರ್ ಶರೀಫ್(34) ಮತ್ತು ಫಯಾಜ್ ಎಂ.ಎಸ್.(34) ಬಂಧಿತ ಆರೋಪಿಗಳು. 25 ಸಾವಿರ ರೂ. ಮೌಲ್ಯದ 400 ಗ್ರಾಂ. ಗಾಂಜಾ ಮತ್ತು ರೂ 2720 ನಗದು ಮತ್ತು 70 ಸಾವಿರ ರೂ. ಬೆಲೆ ಬಾಳುವ ದ್ವಿಚಕ್ರ ವಾಹನವೊಂದನ್ನು ವಶಪಡಿಸಿಕೊಂಡಿದ್ದಾರೆ. ಸುಂಟಿಕೊಪ್ಪದ ಬಿ.ಎಂ.ರಸ್ತೆಯಲ್ಲಿ ಹೋಟೇಲ್ ಒಂದರಲ್ಲಿ ಕುಳಿತು ವ್ಯಾಪಾರ ನಡೆಸುತ್ತಿರುವ ಸಂದರ್ಭ ಖಚಿತ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದ್ದು ಇಬ್ಬರನ್ನು ಬಂಧಿಸಿದ್ದಾರೆ.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ಮಾರಾಟದ ಬಗ್ಗೆ ಠಾಣೆಗಳಿಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ಮಾದಕ ವಸ್ತುಗಳ ಮಾರಾಟವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೊಡಗು ಜಿಲ್ಲಾ ಪೊಲೀಸ್ ಅಧೀಕ್ಷಕ ರಾಮರಾಜನ್, ಕೊಡಗು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರ್ ರಾಜ್, ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ ಕುಶಾಲನಗರ ವೃತ್ತ ನಿರೀಕ್ಷಕ ಬಿ.ಜಿ.ಮಹೇಶ್, ನೇತೃತ್ವದಲ್ಲಿ ತಂಡವನ್ನು ರಚಿಸಿ ತನಿಖೆ ಕೈಗೊಂಡು ಮಾಹಿತಿ ಸಂಗ್ರಹಿಸಿ ದಾಳಿ ನಡೆಸಿದ್ದಾರೆ. ಸುಂಟಿಕೊಪ್ಪ ಠಾಣಾಧಿಕಾರಿ ಶ್ರೀಧರ್ ಎಂಸಿ, ಹಾಲಪ್ಪ ಆರ್.ಎಸ್, ಸಿಬ್ಬಂದಿಗಳಾದ ಸತೀಶ್ ಎಂ.ವಿ, ಪ್ರವೀಣ್, ಜಗದೀಶ್, ಸಂಪತ್, ನಿಶಾಂತ್, ಸತೀಶ್ ಎಂ.ಎಸ್, ಹೊನ್ನರಾಜಪ್ಪ, ಸೌಮ್ಯ, ಲೀಲಾವತಿ, ಪ್ರಶಾಂತ್, ಸತೀಶ್ ಇಳಗೆರೆ, ಅಭಿಲಾಷ್, ಚಾಲಕ ಜಯಶಂಕರ್ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಹುಲಿ ಉಗುರು, ನಕ್ಷತ್ರ ಆಮೆ ಮಾರುತ್ತಿದ್ದ ಇಬ್ಬರ ಬಂಧನ

ಎರಡು ಪ್ರತ್ಯೇಕ ಪ್ರಕರಣದಲ್ಲಿ





ಮಡಿಕೇರಿ, ಮಾ.4– ಹುಲಿ ಉಗುರು ಮತ್ತು ಅಳಿವಿನ ಅಂಚಿನಲ್ಲಿರುವ ನಕ್ಷತ್ರ ಆಮೆಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳನ್ನು ಭೇದಿಸಿರುವ ಮಡಿಕೇರಿ ಅರಣ್ಯ ಸಂಚಾರಿ ದಳ ಇಬ್ಬರು ಆರೋಪಿಗಳನ್ನು ಬಂಧಿಸಿ, ಅಮೂಲ್ಯ ಸ್ವತ್ತುಗಳನ್ನು ವಶಕ್ಕೆ ಪಡೆದಿದೆ.

ಹುಲಿ ಉಗುರು ಪತ್ತೆ: ಮಾ.3ರಂದು ಆಂಜನೇಯ ದೇವಸ್ಥಾನದಿಂದ ದೇಚೂರಿಗೆ ತೆರಳುವ ರಸ್ತೆಯಲ್ಲಿ ಪಿ.ಬಿ ಸೂರ್ಯ ಪ್ರಕಾಶ್ ಎಂಬಾತ ಹುಲಿಯ 4 ಉಗುರುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ. ಈ ಬಗ್ಗೆ ಮಾಹಿತಿ ಅರಿತ ಮಡಿಕೇರಿ ಅರಣ್ಯ ಸಂಚಾರಿ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಯನ್ನು ಹುಲಿ ಉಗುರು ಸಹಿತ ಬಂಧಿಸಿದ್ದಾರೆ.

ನಕ್ಷತ್ರ ಆಮೆ ವಶ: ನಗರದ ಎಂ.ಎಂ. ವೃತ್ತದಿಂದ ಓಂಕಾರೇಶ್ವರ ದೇವಾಲಯಕ್ಕೆ ತೆರಳುವ ಮಾರ್ಗದಲ್ಲಿ ಬಿ.ವೇಣು ಎಂಬಾತ ಅಳಿವಿನ ಅಂಚಿನಲ್ಲಿರುವ ಒಂದು ನಕ್ಷತ್ರ ಆಮೆಯನ್ನು ಅಕ್ರಮವಾಗಿ ಇಟ್ಟುಕೊಂಡು ಮಾರಾಟ ಮಾಡಲು ಯತ್ನಿಸಿದ್ದಾನೆ. ಈ ವೇಳೆ ದಾಳಿ ನಡೆಸಿದ ಮಡಿಕೇರಿ ಅರಣ್ಯ ಸಂಚಾರಿದಳದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಆರೋಪಿಯನ್ನು ಬಂಧಿಸಿದ್ದಾರೆ. ಒಂದು ಜೀವಂತ ನಕ್ಷತ್ರ ಆಮೆಯನ್ನು ವಶಕ್ಕೆ ಪಡೆಯಲಾಗಿದ್ದು, ಬಂಧಿತ ಇಬ್ಬರು ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದಾರೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ. ಶರತ್ ಚಂದ್ರ, ಸಿಐಡಿ ಪೊಲೀಸ್ ಅರಣ್ಯ ಘಟಕದ ಕೊಡಗು ಪೊಲೀಸ್ ಅಧೀಕ್ಷಕ ಕೆ.ಬಿ. ವಿಶ್ವನಾಥ್ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು. ಸವಿ, ಸಿಬ್ಬಂದಿ ಗಳಾದ ಶೇಖರ್, ರಾಘವೇಂದ್ರ ಯೋಗೇಶ್, ಉಮೇಶ್, ಮೋಹನ್, ಸ್ವಾಮಿ ಮತ್ತು ಮಂಜುನಾಥ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಸಿದ್ದಯ್ಯನಪುರ ಗ್ರಾಮದಲ್ಲಿ ವಿಶ್ವ ಬಾಯಿ ಆರೋಗ್ಯ ದಿನಾಚರಣೆ

ಚಾಮರಾಜನಗರ, ಮಾ.4– ವಿಶ್ವ ಬಾಯಿ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಮಾ.6ರಂದು ಬೆಳಿಗ್ಗೆ 10.30 ಗಂಟೆಗೆ ಚಾಮರಾಜನಗರ ತಾಲೂಕಿನ ಸಿದ್ದಯ್ಯನಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯ ಮುಖ್ಯ ದಂತ ವೈದ್ಯಾಧಿಕಾರಿ ಹಾಗೂ ಜಿಲ್ಲಾ ನೋಡಲ್ ಅಧಿಕಾರಿ (ಎನ್.ಓ.ಹೆಚ್.ಪಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಚೆ ಇಲಾಖೆಯಲ್ಲಿ ಚಿನ್ನಕ್ಕೆ ಹೂಡಿಕೆ ಯೋಜನೆ

ಚಾಮರಾಜನಗರ, ಮಾ.4– ಅಂಚೆ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಅತ್ಯುತ್ತಮ ಹೂಡಿಕೆಯ ಯೋಜನೆಯಾದ ಸಾವರಿನ್ ಗೋಲ್ಡ್ ಬಾಂಡ್ ಯೋಜನೆಯು ಮಾ.6 ರಿಂದ 10 ರವರೆಗೆ ಜಾರಿಯಲ್ಲಿದ್ದು, ಚಿನ್ನಕ್ಕೆ ಹೂಡಿಕೆ ಮಾಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿ ಅಥವಾ ನಂಜನಗೂಡು ಅಂಚೆ ವಿಭಾಗದ ಅಂಚೆ ಅಧೀಕ್ಷಕರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮಾ.9ರಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಚಾಮರಾಜನಗರ ಜಿಲ್ಲೆಯಲ್ಲಿ 17 ಕೇಂದ್ರಗಳು



ಫೈಲ್ ಚಿತ್ರ

ಚಾಮರಾಜನಗರ, ಮಾ.4– ಜಿಲ್ಲೆಯ 17 ಕೇಂದ್ರಗಳಲ್ಲಿ ಮಾ. 9 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆಯು ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಂಡಿದೆ. ಜಿಲ್ಲೆಯಲ್ಲಿ 24 ಸರ್ಕಾರಿ, ಏಳು ಅನುದಾನಿತ ಮತ್ತು 29 ಖಾಸಗಿ ಪಿಯು ಕಾಲೇಜುಗಳಿವೆ. ಈ ಬಾರಿ 7474 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಲಾ ವಿಭಾಗದಲ್ಲಿ 2,531, ವಾಣಿಜ್ಯ ವಿಭಾಗದಲ್ಲಿ 2,377 ಹಾಗೂ ವಿಜ್ಞಾನ ವಿಭಾಗದಲ್ಲಿ 1,722 ವಿದ್ಯಾರ್ಥಿಗಳು ಈ ಬಾರಿಯ ಪರೀಕ್ಷೆಯನ್ನು ಎದುರಿಸಲಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲಾ ರೀತಿಯ ಸಿದ್ಧತೆಯನ್ನು ಕೈಗೊಳ್ಳಲಾಗುತ್ತಿದೆ.

ಹೊಸದಾಗಿ 3,133 ಬಾಲಕರು, 3,497 ಬಾಲಕಿಯರು ಸೇರಿದಂತೆ 6,630 ಮಂದಿ ಪರೀಕ್ಷೆ ಬರೆಯಲಿದ್ದಾರೆ. ಪುನರಾವರ್ತಿತ ಅಭ್ಯರ್ಥಿಗಳಲ್ಲಿ 844 ಮಂದಿ ಪರೀಕ್ಷೆ ತೆಗೆದುಕೊಂಡಿದ್ದಾರೆ. ಚಾಮರಾಜನಗರದಲ್ಲಿ ನಾಲ್ಕು ಕೇಂದ್ರದಲ್ಲಿ 2,243 ವಿದ್ಯಾರ್ಥಿಗಳು, ಗುಂಡ್ಲುಪೇಟೆಯಲ್ಲಿ ಮೂರು ಕೇಂದ್ರಗಳಲ್ಲಿ 1,596 ವಿದ್ಯಾರ್ಥಿಗಳು, ಯಳಂದೂರಿನಲ್ಲಿ ಎರಡು ಕೇಂದ್ರದಲ್ಲಿ 705 ವಿದ್ಯಾರ್ಥಿಗಳು, ಕೊಳ್ಳೇಗಾಲದಲ್ಲಿ ಐದು ಕೇಂದ್ರಗಳಲ್ಲಿ 1,790 ವಿದ್ಯಾರ್ಥಿಗಳು ಹಾಗೂ ಹನೂರಿನಲ್ಲಿ ಮೂರು ಕೇಂದ್ರಗಳಲ್ಲಿ 1,140 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ಕೋವಿಡ್ ಹಾವಳಿ ಇರಲಿಲ್ಲ. ಹಾಗಾಗಿ, ಪಠ್ಯದ ಬೋಧನೆ ಪೂರ್ಣ ಪ್ರಮಾಣದಲ್ಲಿ ಆಗಿದೆ. ಪೂರ್ವ ಸಿದ್ಧತಾ ಪರೀಕ್ಷೆಗಳು ಈಗಾಗಲೇ ಮುಗಿದಿವೆ.

ನಿಷೇಧಾಜ್ಞೆ ಜಾರಿ: ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದ್ದು, ಕೇಂದ್ರಗಳ ಸುತ್ತಮುತ್ತ ಪರೀಕ್ಷೆ ನಡೆಯುವ ದಿನ ಬೆಳಗ್ಗೆ 10.15ರಿಂದ ಮಧ್ಯಾಹ್ನ 1.30 ರವರೆಗೆ 200 ಮೀಟರ್ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಅಲ್ಲದೇ, ಕೇಂದ್ರಗಳ ಅಕ್ಕಪಕ್ಕದ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಅಕ್ರಮ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಸಣ್ಣಪುಟ್ಟ ಗೊಂದಲಕ್ಕೂ ಅವಕಾಶವಾಗದಂತೆ ಎಚ್ಚರ ವಹಿಸಲಾಗಿದೆ. ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗೆ ಗುರುತಿನ ಚೀಟಿ ನೀಡಲಾಗಿದೆ. ಗುರುತಿನ ಚೀಟಿ ಇಲ್ಲದ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ನಿರ್ಬಂಧಿಸಲಾಗುತ್ತದೆ.

> ಕಳೆದ ಸಾಲಿನಲ್ಲಿ ಜಿಲ್ಲೆಯು ಶೇ.63.02ರಷ್ಟು ಫಲಿತಾಂಶ ದಾಖಲಿಸಿ ರಾಜ್ಯದಲ್ಲಿ 18ನೇ ಸ್ಥಾನ ಗಳಿಸಿತ್ತು. ಅದರ ಹಿಂದಿನ ವರ್ಷ ಜಿಲ್ಲೆ 12ನೇ ಸ್ಥಾನದಲ್ಲಿತ್ತು. ಈ ಬಾರಿ ಉತ್ತಮ ಫಲಿತಾಂಶ ಪಡೆಯುವ ಗುರಿಯೊಂದಿಗೆ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ಪ್ರಾಂಶುಪಾಲರೊಂದಿಗೆ ಸಭೆ ನಡೆಸಲಾಗಿದೆ. ವಿಶೇಷ ತರಗತಿ ನಡೆಯುತ್ತಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಗಮನ ಹರಿಸಲಾಗುತ್ತಿದೆ. ವಿದ್ಯಾರ್ಥಿಗಳು ಯಾವುದೇ ಒತ್ತಡ, ಭಯಕ್ಕೆ ಒಳಗಾಗದೆ ಪರೀಕ್ಷೆ ಬರೆಯಬೇಕು.
>
> – ಸಿ. ಮಂಜುನಾಥ ಪ್ರಸನ್ನ,
> ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.



ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಬಾಲಕಿ ಚಿಕಿತ್ಸೆಗೆ ಆರ್ಥಿಕ ನೆರವು

ಗುಂಡ್ಲುಪೇಟೆ, ಮಾ.4– ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದರೂ ಹಣದ ಕೊರತೆಯಿಂದ ಚಿಕಿತ್ಸೆ ಪಡೆಯಲು ಸಾಧ್ಯವಾಗದ ಬಡ ಕುಟುಂಬಕ್ಕೆ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ನೆರವು ನೀಡಿ ಮಾನವೀಯತೆ ಮೆರೆದಿದ್ದಾರೆ.



ದೇವರಹಳ್ಳಿ ಗ್ರಾಮದ ಚೆನ್ನಶೆಟ್ಟಿ ಎಂಬುವರು ಕಳೆದ ಮೂರು ವರ್ಷಗಳಿಂದ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ತಮ್ಮ ಮಗಳು ಕವಿತಾಳಿಗೆ ಚಿಕಿತ್ಸೆ ಕೊಡಿಸುತ್ತಿದ್ದರು. ರೋಗದಿಂದ ಬಳಲುತ್ತಿರುವ ಮಗಳಿಗೆ ಸಾಲಸೋಲ ಮಾಡಿ 5 ಲಕ್ಷ ರೂಪಾಯಿಗೂ ಹೆಚ್ಚಿನ ಹಣ ಖರ್ಚು ಮಾಡಿದ್ದಾರೆ. ಪ್ರತಿ ತಿಂಗಳೂ ಎರಡು ಬಾರಿ ಡಯಾಲಿಸಿಸ್ ಮಾಡಿಸಲು 10 ಸಾವಿರ ರೂಪಾಯಿ ಹೊಂದಿಸಲು ಸಾಧ್ಯವಾಗದೆ ಕೈಚೆಲ್ಲಿದ್ದರು.

ಈ ವಿಷಯ ತಿಳಿದ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಕವಿತಾಳಿಗೆ ನೆರವು ನೀಡಲು ಮುಂದಾದರು. ದೇವರಹಳ್ಳಿ ಗ್ರಾಮಕ್ಕೆ ತೆರಳಿ ದಿ.ಎಚ್.ಎಸ್. ಮಹದೇವ ಪ್ರಸಾದ್ ಫೌಂಡೇಶನ್‌ನಿಂದ 10 ಸಾವಿರ ರೂಪಾಯಿ ಆರ್ಥಿಕ ನೆರವು ನೀಡಿದರು. ಈ ಸಂದರ್ಭದಲ್ಲಿ ಗುತ್ತಿಗೆದಾರ ಡಿ.ಎಸ್. ಪ್ರಭುಸ್ವಾಮಿ, ಪಿ. ಯೋಗೇಶ್, ಕೆ.ನಾಗರಾಜು, ಮಹೇಶ್, ಮಂಗಳಮ್ಮ ಸೋಮೇಗೌಡ, ಸಿದ್ದಪ್ಪ ಹಾಗೂ ಇತರರು ಇದ್ದರು.

ಕಲಾವಿದರಿಗೆ ಫುಡ್‌ಕಿಟ್ ವಿತರಣೆ ಒಂದು ಹೃದಯಸ್ಪರ್ಶಿ ಕಾರ್ಯಕ್ರಮ



ಚಾಮರಾಜನಗರ, ಮಾ. 4– ಕಲಾವಿದರಿಗೆ ಫುಡ್ ಕಿಟ್ ವಿತರಣೆ ಒಂದು ಹೃದಯಸ್ಪರ್ಶಿ ಕಾರ್ಯಕ್ರಮವಾಗಿದೆ ಎಂದು ಸಿವಿಲ್ ನ್ಯಾಯಾಧೀಶರಾದ ಶ್ರೀಧರ್ ಹೇಳಿದರು.

ನಗರದ ಪ್ರಕಾಶ್ ಭವನದಲ್ಲಿ ಕನ್ನಡ ಜಾನಪದ ಪರಿಷತ್ ಹಾಗೂ ಬ್ರಹ್ಮ ಕುಮಾರಿ ಈಶ್ವರಿ ವಿದ್ಯಾನಿಲಯ ಸಹಯೋಗದಲ್ಲಿ ಇತ್ತೀಚೆಗೆ ಬೆಂಗಳೂರು ಶ್ರೀನಿವಾಸ ಸ್ಮರಣಾರ್ಥ ನಡೆದ ಜಾನಪದ, ಸೋಬಾನೆ ಪದ ಕಲಾವಿದರಿಗೆ ಫುಡ್ ಕಿಟ್ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಫುಡ್ ಕಿಟ್ ವಿತರಿಸಿ ಮಾತನಾಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ವತಿಯಿಂದ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾದ್ಯಂತ ಬೇರೆಬೇರೆ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆ. ಆದರೆ ಇಂದು ಜಾನಪದ, ಸೋಬಾನೆ ಕಲಾವಿದರೊಟ್ಟಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನ್ನ ಸೌಭಾಗ್ಯವಾಗಿದೆ. ಸೋಬಾನೆ, ಜಾನಪದ ಕಲಾವಿದರ ಸೇವೆ ಇಂದಿನ ಪೀಳಿಗೆಯಲ್ಲಿ ಅವಿಸ್ಮರಣೀಯವಾಗಿದೆ ಎಂದರು.

ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಬಾಲಾಜಿ ಮಾತನಾಡಿ, ಬೆಂಗಳೂರಿನ ಶ್ರೀನಿವಾಸ ಅವರ ಸ್ಮರಣಾರ್ಥವಾಗಿ ಕನ್ನಡ ಜಾನಪದ ಪರಿಷತ್ ಹಾಗೂ ಬ್ರಹ್ಮ ಕುಮಾರಿ ಈಶ್ವರಿ ವಿದ್ಯಾನಿಲಯ ಸಹಯೋಗದಲ್ಲಿ ಫುಡ್‌ಕಿಟ್ ವಿತರಿಸಲಾಗಿದೆ ಎಂದರು. ಕನ್ನಡ ಜಾನಪದ ಪರಿಷತ್ ಕನ್ನಡ ಸಾಹಿತ್ಯ ಮತ್ತು ಜಾನಪದ ಕಲೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ನಾಡಿನಲ್ಲಿರುವ ಜಾನಪದ ಕಲಾವಿದರನ್ನು ಗುರುತಿಸಿ ಅವರಿಗೆ ಸರ್ಕಾರ ವತಿಯಿಂದ ದೊರೆಯುವ ಸೌಲಭ್ಯಗಳನ್ನು ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ರಾಜಯೋಗಿನಿ ಬಿ.ಕೆ.ದಾನೇಶ್ವರಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಕನ್ನಡ ಜಾನಪದ ಪರಿಷತ್ ವೇದಿಕೆ ಜಿಲ್ಲಾಧ್ಯಕ್ಷ ಜ.ಸುರೇಶ್‌ನಾಗ್, ಶೇಖರಪ್ಪ, ಕಾಂತಪ್ಪ, ಸಿ.ಡಿ.ಪ್ರಕಾಶ್, ಪದ್ಮಾಕ್ಷಿ, ಶಿಕ್ಷಕ ರಂಗನಾಥ್, ಆರಾಧ್ಯರು ಹಾಜರಿದ್ದರು.

ಅಪ್ರಾಪ್ತ ಬಾಲಕಿ ಜೊತೆ ಬಲವಂತದ ಮದುವೆ: ತಾಯಿ, ಮಗನಿಗೆ 20 ವರ್ಷ ಕಠಿಣ ಸಜೆ

ಚಾಮರಾಜನಗರ, ಮಾ.4– ಅಪ್ರಾಪ್ತ ಬಾಲಕಿಯನ್ನು ಬಲವಂತವಾಗಿ ಮದುವೆಯಾಗಿ, ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಮದುವೆಯಾದ ವ್ಯಕ್ತಿ ಹಾಗೂ ಆತನ ತಾಯಿಗೆ ಪೋಕ್ಸೋ ಕಾಯ್ದೆಯಡಿ ತಲಾ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ ಮಕ್ಕಳ ಸ್ನೇಹಿ ಹಾಗೂ ಹೆಚ್ಚುವರಿ ಜಿಲ್ಲಾ, ಸೆಷೆನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ತಮಿಳುನಾಡಿನ ತಿರಚಂಗೂರು ತಾಲೂಕಿನ ಶರಣ್‌ರಾಜ್ (25) ಹಾಗೂ ಆತನ ತಾಯಿ ಸೆಲ್ವಿ (45) ಶಿಕ್ಷೆಗೆ ಗುರಿಯಾದವರು. 2018ರ ಸೆ.9ರಂದು 14 ವರ್ಷದ ಬಾಲಕಿಯನ್ನು ಶರಣ್‌ರಾಜ್ ಮತ್ತು ಆತನ ಸೋದರ ಶಶಿಕುಮಾರ್ (ಈತ ತಲೆಮರೆಸಿಕೊಂಡಿದ್ದಾನೆ) ಬೈಕಿನಲ್ಲಿ ಬಲವಂತವಾಗಿ ಕರೆದುಕೊಂಡು ಹೋಗಿದ್ದರು. ನಂತರ ಇವರ ತಾಯಿ ಸೆಲ್ವಿ ಸೇರಿಕೊಂಡು ಒತ್ತಾಯಪೂರ್ವಕವಾಗಿ ಬಾಲಕಿಯನ್ನು ಶರಣ್‌ರಾಜ್ ಜೊತೆ ಮದುವೆ ಮಾಡಿದ್ದರು. ಶರಣ್‌ರಾಜ್ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ.

ಈ ಮೂವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆಯಡಿ ಮಲೆ ಮಹದೇಶ್ವರ ಬೆಟ್ಟ ಠಾಣೆ ಇನ್‌ಸ್ಪೆಕ್ಟರ್ ಬಿ. ಮಹೇಶ್ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಎ.ಸಿ. ನಿಶಾರಾಣಿ ಅವರು ಮಗ ಶರಣ್‌ರಾಜ್ ಹಾಗೂ ತಾಯಿ ಸೆಲ್ವಿ ಅವರಿಗೆ ತಲಾ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದ್ದಾರೆ. ಅಲ್ಲದೇ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ನೊಂದ ಬಾಲಕಿಗೆ 1 ಲಕ್ಷ ರೂ. ಪರಿಹಾರ ನೀಡಬೇಕೆಂದು ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

ಸಾರ್ವಜನಿಕರ ಬೇಡಿಕೆ ಅನುಸಾರ ಬಸ್ ಸಂಚಾರ

ಮಂಗಲದಲ್ಲಿ ಸಾರಿಗೆ ಬಸ್ ಕೋರಿಕೆ ನಿಲ್ದಾಣದ ನಾಮಫಲಕ ಅನಾವರಣ



ಚಾಮರಾಜನಗರ, ಮಾ. 4– ಜಿಲ್ಲೆಯ ಸಾರ್ವಜನಿಕರು, ವಿದ್ಯಾರ್ಥಿಗಳು, ನೌಕರರ ಬೇಡಿಕೆ ಅನುಗುಣವಾಗಿ ಬಸ್ ಸಂಚಾರ ಕಲ್ಪಿಸಲಾಗಿದ್ದು, ಕೋರಿಕೆ ನಿಲ್ದಾಣ ವ್ಯವಸ್ಥೆ ಮಾಡಲಾಗಿದೆ ಎಂದು ಸಾರಿಗೆ ಇಲಾಖೆ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ ತಿಳಿಸಿದ್ದಾರೆ.

ತಾಲೂಕಿನ ಮಂಗಲ ಗ್ರಾಮದ ಬಸ್ ನಿಲ್ದಾಣದಲ್ಲಿ ಸಾರಿಗೆ ಇಲಾಖೆ ವತಿಯಿಂದ ಅಳವಡಿಸಿದ್ದ ಕೋರಿಕೆ ನಿಲ್ದಾಣದ ನಾಮಫಲಕವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು. ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮಸ್ಥರ ಕೋರಿಕೆಯಂತೆ ಗ್ರಾಮದಲ್ಲಿ ಸಾರಿಗೆ ಬಸ್ ಕೋರಿಕೆ ನಿಲ್ದಾಣ ಮಾಡಲಾಗಿದೆ ಎಂದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್ ಮಾತನಾಡಿ, ಗ್ರಾ.ಪಂ.ಸದಸ್ಯರು, ಗ್ರಾಮಸ್ಥರ ಕೋರಿಕೆ ಮೇರೆಗೆ ಗ್ರಾಮದಲ್ಲಿ ಸಾರಿಗೆ ಬಸ್ ಕೋರಿಕೆ ನಿಲ್ದಾಣ ಮಾಡಿರುವುದು ಈ ಭಾಗದ ಜನತೆಗೆ ತುಂಬಾ ಅನುಕೂಲವಾಗಿದೆ. ಮಂಗಲ ಗ್ರಾಮದಲ್ಲಿ ಹೆಚ್ಚಿನ ಜನಸಂಖ್ಯೆಯಿದ್ದು, ಅಕ್ಕಪಕ್ಕದ ಗ್ರಾಮಸ್ಥರು ಚಾಮರಾಜನಗರ, ಸಂತೇಮರಹಳ್ಳಿ ಕಡೆ ಹೋಗಬೇಕಾದರೆ ಮಂಗಲ ಗ್ರಾಮದ ಬಸ್ ನಿಲ್ದಾಣದಿಂದಲ್ಲೇ ಬಸ್ ಹತ್ತಬೇಕು. ಇಳಿಯಬೇಕಾಗಿರುವುದು ಗ್ರಾಮದ ಬಸ್ ನಿಲ್ದಾಣವನ್ನು ಸ್ಟೇಜ್ ಮಾಡಬೇಕು ಎಂದು ಸಾರಿಗೆ ಇಲಾಖೆ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ ಅವರಲ್ಲಿ ಮನವಿ ಮಾಡಿದರು. ಮನವಿ ಸ್ಪಂದಿಸಿದ ಶ್ರೀನಿವಾಸ ಪರಿಶೀಲಿಸಿ ಕ್ರಮಕೈಕೊಳ್ಳುವುದಾಗಿ ಭರವಸೆ ನೀಡಿದರು.

ಅಭಿನಂದನೆ: ಗ್ರಾಮ ಪಂಚಾಯಿತಿ ಅಧಿಕಾರಿ ಆದಿಶೇಷ ಮೂರ್ತಿ ಮಾತನಾಡಿ, ಗ್ರಾಮಸ್ಥರು ಗ್ರಾಮದಲ್ಲಿ ಸಾರಿಗೆ ಬಸ್ ಕೋರಿಕೆ ನಿಲ್ದಾಣ ಮಾಡಿಸಿಕೊಡುವಂತೆ ಗ್ರಾಮ ಪಂಚಾಯಿತಿ ಮನವಿ ಕೊಟ್ಟಿದ್ದರು. ಅದರಂತೆ ಗ್ರಾಮ ಪಂಚಾಯಿತಿ ಸಭೆಯಲ್ಲಿ ನಡವಳಿಕೆ ಮಾಡಿ ಸಾರಿಗೆ ಇಲಾಖೆಗೆ ಕಳುಹಿಸಿಕೊಡಲಾಗಿತ್ತು. ಅದರಂತೆ ಸಾರಿಗೆ ಇಲಾಖೆಯವರು ಗ್ರಾಮದಲ್ಲಿ ಕೋರಿಕೆ ನಿಲ್ದಾಣ ಮಾಡಿದ್ದಾರೆ. ಗ್ರಾಮಸ್ಥರ ಪರವಾಗಿ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಧ್ಯಕ್ಷೆ ಚಿನ್ನತಾಯಮ್ಮ, ಸದಸ್ಯರಾದ ಮಂಜುನಾಥಸ್ವಾಮಿ, ಸುರೇಶ್, ಅಣ್ಣಪ್ಪಸ್ವಾಮಿ, ಮಹೇಶ್, ಗೌಡಿಕೆ ಮಾದಪ್ಪ, ಸಂತೇಮರಹಳ್ಳಿ ಪೊಲೀಸ್ ಠಾಣೆ ಪಿಎಸ್ ಐ ಹನುಮಂತ ಉಪ್ಪಾರ್, ಗುತ್ತಿಗೆದಾರ ಕುಮಾರ್, ಬಿಲ್ ಕಲೆಕ್ಟರ್ ಕೃಷ್ಣ, ಗ್ರಾಮದ ಯಜಮಾನರು, ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಮಿತ್ರ ಭಾನುವಾರ 5 ಮಾರ್ಚ್ 2023

ಮೂರನೇ ಪುಟದಿಂದ

ಅಪಾರ ಪ್ರಮಾಣದ ಸಸ್ಯ ಸಂಪತ್ತು ನಾಶ

ಹರಡದಂತೆ ತಡೆದರು. ಅಗ್ನಿಶಾಮಕ ವಾಹನ ತೆರಳಲು ರಸ್ತೆ ಇದ್ದ ಕಾರಣ ವ್ಯೂವ್ ಪಾಯಿಂಟ್ ಬಳಿಯಿಂದಲೇ ಕಾರ್ಯಾಚರಿಸಿ ಬೆಂಕಿ ನಂದಿಸಲು ಸಾಧ್ಯವಾಯಿತು. ಈ ವೇಳೆ ಕೆಲಕಾಲ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು.

ಬೆಂಕಿಯಿಂದ ನೂರಕ್ಕೂ ಹೆಚ್ಚು ಎಕರೆ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿದೆ. ಮಧ್ಯಾಹ್ನ 2.20ರಿಂದ 5 ಗಂಟೆವರೆಗೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಆದರೆ, ಒಣ ಮರಗಳು ದಹಿಸಿದ್ದರಿಂದ ಉಂಟಾಗಿದ್ದ ಭಾರೀ ಪ್ರಮಾಣದ ಕೆಂಡವನ್ನು ಸಂಜೆ 7 ಗಂಟೆವರೆಗೂ ನಂದಿಸಲಾಯಿತು.

ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್ ಸತೀಶ್, ಅಗ್ನಿಶಾಮಕ ಸಿಬ್ಬಂದಿ, ವಾಚರ್‌ಗಳು, ಗಾರ್ಡ್‌ಗಳು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಗೋಪಾಲಸ್ವಾಮಿ ಬೆಟ್ಟದಲ್ಲೂ ಬೆಂಕಿ



ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಗೌರಿ ಕಲ್ಲು ಗುಡ್ಡ ಅರಣ್ಯ ಪ್ರದೇಶದಲ್ಲಿ ಆಕಸ್ಮಿಕ ಬೆಂಕಿಗೆ ಸರಿ ಸುಮಾರು 8 ಎಕರೆಯಷ್ಟು ಕುರುಚಲು ಕಾಡು ಅಗ್ನಿಗಾಹುತಿಯಾಗಿದೆ.

ಗೋಪಾಲಸ್ವಾಮಿ ಬೆಟ್ಟದ ಗೌರಿಕಲ್ಲು ಬೆಟ್ಟದ ಸುತ್ತಮುತ್ತ ಶನಿವಾರ ಮಧ್ಯಾಹ್ನ 12.30ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ತಕ್ಷಣ ಅರಣ್ಯ ಸಿಬ್ಬಂದಿ ತುರ್ತು ಕಾರ್ಯಾಚರಣೆ ನಡೆಸಿ ಎರಡು ಗಂಟೆಗಳ ಸತತ ಪರಿಶ್ರಮದಿಂದ ದಟ್ಟ ಕಾಡಿಗೆ ಬೆಂಕಿ ಬೀಳುವುದನ್ನು ತಪ್ಪಿಸಿದ್ದಾರೆ. ಇದು ಆಕಸ್ಮಿಕ ಬೆಂಕಿಯಾಗಿದ್ದು, ಬೆಂಕಿ ಬಿದ್ದ ಪ್ರದೇಶವು ಕಣಿವೆ ಪ್ರದೇಶವಾದ ಕಾರಣ ನೆಲಮಟ್ಟದಲ್ಲಿದ್ದ ಹಲ್ಲು ಮತ್ತಿತರೆ ಸಣ್ಣ ಪುಟ್ಟ ಗಿಡಗಳಿಗೆ ಹಾನಿಯಾಗಿದೆ. ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ, ಜಿ.ಎಸ್.ಬೆಟ್ಟ, ಕುಂದಕೆರೆ, ಮೂಲೆಹೊಳೆ, ಮದ್ದೂರು ಮತ್ತು ಓಂಕಾರ ವಲಯದ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ. ಇದರಿಂದ ಯಾವುದೇ ವನ್ಯಪ್ರಾಣಿಗಳಿಗೆ ತೊಂದರೆಯಾಗಿಲ್ಲ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿದೆ.

ತಡೆಯಾಜ್ಞೆ ತಂದ ಸಕ್ಕರೆ ಕಾರ್ಖಾನೆಗಳು

ನಷ್ಟದಲ್ಲಿರುವ ಸಂಸ್ಥೆಯಾಗಿದ್ದರೆ ನಾವೂ ಒತ್ತಾಯಿಸುತ್ತಿರಲಿಲ್ಲ. ಬಣ್ಣಾರಿ ಅಮ್ಮನ್ ಕಾರ್ಖಾನೆ ಲಾಭದಲ್ಲಿದೆ. ಉಪ ಉತ್ಪನ್ನಗಳ ಲಾಭದಲ್ಲಿ ಒಂದು ರೂ. ರೈತರಿಗೆ ನೀಡುವುದಿಲ್ಲ. ತಮಿಳುನಾಡಿನ ಕಾರ್ಖಾನೆಗೆ ಇಲ್ಲಿಂದ ಕಬ್ಬು ತೆಗೆದುಕೊಂಡು ಹೋಗುತ್ತಾರೆ. ಆದರೂ ಅಲ್ಲಿನ ದರ ಹೆಚ್ಚಾಗಿದೆ. ತಮ್ಮ ಭೂಮಿ, ನೀರು ಕೊಟ್ಟಿರುವ ಇಲ್ಲಿನ ಕಾರ್ಖಾನೆಯಲ್ಲಿ 150 ರೂ. ಹೆಚ್ಚುವರಿ ನೀಡಲಾಗುತ್ತಿಲ್ಲ. ಹೀಗಾದರೆ ದಂಗೆ ಏಳುವುದೊಂದೇ ನಮಗೆ ಉಳಿದಿರುವ ಮಾರ್ಗ. ಬೇಕಿದ್ದರೆ ನಮ್ಮ ಮೇಲೆ ಗುಂಡು ಹಾರಿಸಿ ಎಂದು ರೈತರು ಬೇಸರ ವ್ಯಕ್ತಪಡಿಸಿದರು.

ಸಾಮರಸ್ಯವಿರಬೇಕು: ಸರ್ಕಾರದ ಮೊದಲ ಆದೇಶದಲ್ಲಿ ಎಥೆನಾಲ್ ಘಟಕ ಇರುವ ಕಾರ್ಖಾನೆಗಳಿಂದ ರೈತರಿಗೆ 50 ರೂ. ಹೆಚ್ಚುವರಿ ನೀಡಲು ಸೂಚಿಸಲಾಗಿದೆ. ಆದರೆ ನಮ್ಮಲ್ಲಿ ಘಟಕ ಸ್ಥಾಪನೆಗೆ ಅನುಮತಿ ಸಿಕ್ಕಿದ್ದು, ಇನ್ನೂ ಅನುಷ್ಠಾನವಾಗಿಲ್ಲ. 2ನೇ ಆದೇಶದಲ್ಲಿ 100 ರೂ. ನೀಡಲು ಸೂಚಿಸಲಾಗಿತ್ತು. ಈ ಎರಡೂ ಆದೇಶಗಳ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅಮೈಂಡ್‌ಮೆಂಟ್ ಪಿಟಿಷನ್‌ಗೆ ತಡೆಯಾಜ್ಞೆ ಸಿಕ್ಕಿದೆ ಎಂದು ಬಣ್ಣಾರಿ ಅಮ್ಮನ್ ಕಾರ್ಖಾನೆ ಉಪಾಧ್ಯಕ್ಷ ಸತೀಶ್ ಕುಮಾರ್ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ರಾಜೇಂದ್ರ, ಎಥೆನಾಲ್ ಉತ್ಪಾದನೆ ಮಾಡುತ್ತಿಲ್ಲ ಎಂದು ಸಬೂಬು ಹೇಳುವುದು ಸರಿಯಲ್ಲ. ಮೊಲ್ಯಾಸಿಸ್, ಸ್ಪಿರಿಟ್ ಉಪ ಉತ್ಪನ್ನಗಳ ಲಾಭಾಂಶ ನೀಡಬಹುದು ಎನ್ನುವುದು ರೈತರ ಆಗ್ರಹ. ಸಮಸ್ಯೆಯಾದರೆ ರೈತರು, ಸರ್ಕಾರ ಹಾಗೂ ಕಂಪನಿಗೂ ನಷ್ಟವಾಗುತ್ತದೆ. ಪರಸ್ಪರ ಸಾಮರಸ್ಯದಿಂದ ಮುಂದುವರೆಯುವ ನಿಟ್ಟಿನಲ್ಲಿ ಕಂಪನಿಯವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಹಲವು ಸೂಚನೆಗಳು: ಸುಮಾರು ಮೂರು ಗಂಟೆಗಳ ಕಾಲ ನಡೆದ ಸುದೀರ್ಘ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ರೈತರ ಹತ್ತಾರು ಅಹವಾಲು ಆಲಿಸಿ, ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ರಸಗೊಬ್ಬರ, ಬಿತ್ತನೆ ಬೀಜದ ಸಮಸ್ಯೆ ಉಂಟಾಗದಂತೆ 2 ತಿಂಗಳಿಗೊಮ್ಮೆ ರಸಗೊಬ್ಬರ ಮಾರಾಟಗಾರರು ಹಾಗೂ ರೈತ ಪ್ರತಿನಿಧಿಗಳ ಸಭೆ ನಡೆಸಬೇಕು. ಗ್ರಾಮೀಣ ಭಾಗದಲ್ಲಿ ಗ್ಯಾಸ್ ಸಿಲಿಂಡರ್ ವಿತರಿಸಲು 50–100 ರೂ. ಪಡೆಯಲಾಗುತ್ತಿದೆ ಎಂಬ ದೂರಿನ ಬಗ್ಗೆ ಪರಿಶೀಲಿಸಿ, 15 ಕಿ.ಮೀ. ವ್ಯಾಪ್ತಿಯಲ್ಲಿ ಹೆಚ್ಚುವರಿ ಹಣ ಪಡೆಯದಂತೆ ಸೂಚಿಸಿ, ಅದನ್ನು ಉಲ್ಲಂಘಿಸಿದರೆ ಲೈಸೆನ್ಸ್ ರದ್ದುಮಾಡಿ. ಬಾಳೆಕಾಯಿ ಮತ್ತು ಹೂವಿನ ಮಂಡಿಯನ್ನು ಎಪಿಎಂಸಿ ಆವರಣಕ್ಕೆ ಸ್ಥಳಾಂತರಿಸುವ ಬಗ್ಗೆ ತಿಂಗಳಲ್ಲಿ ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ಆಹಾರ ಜಂಟಿ ನಿರ್ದೇಶಕಿ ಕುಮುದಾ, ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ರೈತ ಮುಖಂಡರಾದ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಬರಡನಪುರ ನಾಗರಾಜ್, ಕೆರೆಹುಂಡಿ ರಾಜಣ್ಣ, ಕುರುಬೂರು ಸಿದ್ದೇಶ್, ಲಕ್ಷ್ಮಿಪುರ ವೆಂಕಟೇಶ್, ಹಂಪಾಪುರ ರಾಜೇಶ್, ಆದಿಬೆಟ್ಟಹಳ್ಳಿ ನಂಜುಂಡಸ್ವಾಮಿ, ಕುರುಬೂರು ಪ್ರದೀಪ್, ಕಾಟೂರು ಮಹದೇವಸ್ವಾಮಿ, ಮುದ್ದಳ್ಳಿ ಶಿವಣ್ಣ, ಪಿ ರಾಜು, ಪಾಳ್ಯ ಸ್ವಾಮಿ, ಯಾಕನೂರು ನಾಗೇಂದ್ರ, ಸಿದ್ದರಾಮ, ಮಂಜುನಾಥ್, ನೀಲಕಂಠಪ್ಪ ನಂಜುಂಡಸ್ವಾಮಿ, ಉಡಿಗಾಲ ಮಾದೇವಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ಸುಮಲತಾ ಸಿದ್ಧತೆ

ಅವರ ಸಲಹೆ ಕೇಳಿದರು ಎಂದು ಹೇಳಲಾಗಿದೆ. ಆದರೆ, ಇದನ್ನು ಅಲ್ಲಗಳೆದಿರುವ ಸುಮಲತಾ, ಎಸ್.ಎಂ. ಕೃಷ್ಣ ಅವರು ಮಂಡ್ಯ ಜಿಲ್ಲೆಯ ಹಿರಿಯ ನಾಯಕರು, ಅವರಿಗೆ ರಾಷ್ಟ್ರದ 2ನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಬಂದಿದೆ. ಪ್ರಶಸ್ತಿ ಘೋಷಣೆಯಾದ ನಂತರ ಅವರನ್ನು ಭೇಟಿಯಾಗಿರಲಿಲ್ಲ. ಹೀಗಾಗಿ ಇಂದು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದ್ದೇನೆ. ನಮ್ಮ ಭೇಟಿ ವೇಳೆ ರಾಜಕೀಯ ವಿಚಾರವಾಗಿ ಯಾವುದೇ ಚರ್ಚೆ ನಡೆದಿಲ್ಲ ಎಂದು ಹೇಳಿದರು. ನಂತರ ಜೆಪಿನಗರದಲ್ಲಿರುವ ನಿವಾಸದಲ್ಲಿ ಸುಮಲತಾ ತಮ್ಮ ಕೆಲ ಆತ್ಮೀಯರೊಂದಿಗೆ ಸಭೆ ನಡೆಸಿ ಬಿಜೆಪಿ ಸೇರುವ ಬಗ್ಗೆ ಚರ್ಚಿಸಿದ್ದಾರೆ ಎಂದು ಹೇಳಲಾಗಿದ್ದು, ಈ ಸಭೆಯಲ್ಲಿ ಬಿಜೆಪಿ ಸೇರ್ಪಡೆ ಬಗ್ಗೆ ನಿರ್ಧಾರ ಕೈಗೊಳ್ಳುವ ಹೊಣೆಗಾರಿಕೆಯನ್ನು ಆತ್ಮೀಯರು ಸುಮಲತಾ ಅವರಿಗೇ ಬಿಟ್ಟಿದ್ದಾರೆ ಎಂದು ಹೇಳಲಾಗಿದೆ. ಇಂದು ನಡೆದ ಸಭೆಯಲ್ಲಿ ತಾವು ಬಿಜೆಪಿ ಸೇರ್ಪಡೆಗೆ ಪೂರಕವಾದ ಅಭಿಪ್ರಾಯ ಹಾಗೂ ಸಲಹೆಗಳು ಕೇಳಿಬಂದಿವೆಯಾದರೂ, ಮತ್ತೊಂದು ಸಭೆ ನಡೆಸಿ ಅಂತಿಮ ನಿರ್ಧಾರ ಪ್ರಕಟಿಸಲು ಸುಮಲತಾ ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಮಾಧ್ಯಮದೊಂದಿಗೆ ಮಾತನಾಡಿದ ಅವರು, ತಾವು ಯಾವ ಪಕ್ಷ ಸೇರಬೇಕು ಎಂಬುದರ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಇಂದು ಕೆಲವರು ಬಂದು ಅವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ನಾನು ಪಕ್ಷೇತರಳಾಗಿ ಗೆಲ್ಲಲು ಕಾರಣಕರ್ತರಾದ ಮುಖಂಡರು, ಹಿತೈಷಿಗಳು ಹಾಗೂ ಅಭಿಮಾನಿಗಳ ಅಭಿಪ್ರಾಯ ಸಂಗ್ರಹಿಸಿಯೇ ನಾನು ತೀರ್ಮಾನ ಕೈಗೊಳ್ಳುತ್ತೇನೆ. ಯಾರ ಜೊತೆ ಹೋದರೆ ಮಂಡ್ಯ ಅಭಿವೃದ್ಧಿಗೆ ಸಹಾಯವಾಗುತ್ತದೆ ಎಂಬುದರ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ನನ್ನ ಜೊತೆಯಲ್ಲಿರುವವರ ಹಿತ ಕಾಯುವ ಬಗ್ಗೆ ಯೋಚಿಸಬೇಕಾಗುತ್ತದೆ. ನನ್ನ ಜೊತೆಯಿರುವವರಿಗೆ ಅನುಕೂಲಕರವಾಗುವಂತಹ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ರಾಜಕೀಯವಾಗಿ ನಾನು ಯಾವುದೇ ನಿರ್ಧಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವುದಿಲ್ಲ. ನನ್ನ ಅಭಿಮಾನಿಗಳ, ಹಿತೈಷಿಗಳು ಹಾಗೂ ನನ್ನ ಗೆಲುವಿಗೆ ಕಾರಣೀಭೂತರಾದ ಮುಖಂಡರ ತೀರ್ಮಾನವೇ ನನ್ನ ತೀರ್ಮಾನವಾಗಿರುತ್ತದೆ. ಈ ಸಂಬಂಧ ಮತ್ತೊಂದು ಸಭೆ ನಡೆಸಿ ನಿರ್ಧಾರ ಪ್ರಕಟಿಸುತ್ತೇನೆ ಎಂದು ಸುಮಲತಾ ಹೇಳಿದರು. ವಿಧಾನಸಭೆ ಚುನಾವಣೆಗೂ ಮುನ್ನವೇ ನಿರ್ಧಾರ ಪ್ರಕಟವಾಗುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು. ಆದರೆ, ಸುಮಲತಾ ಅವರ ಆಪ್ತ ಮೂಲಗಳ ಪ್ರಕಾರ ಅವರು ಮತ್ತೊಂದು ಸಭೆ ನಡೆಸಿ ಮಾರ್ಚ್ 12ರಂದು ಪ್ರಧಾನಿ ಮೋದಿ ಮಂಡ್ಯಗೆ ಆಗಮಿಸಿದ ವೇಳೆ ಬಿಜೆಪಿ ಸೇರ್ಪಡೆಯಾಗಲಿದ್ದಾರೆ. ಈ ಕಾರಣಕ್ಕಾಗಿಯೇ ಅವರು ಬೆಂಬಲಿಗರ ಸಭೆಗಳನ್ನು ನಡೆಸುತ್ತಿದ್ದಾರೆ.

ಚಿನ್ನಾಭರಣ, ನಗದು, ಆಸ್ತಿ ಪತ್ರ ವಶ

ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಬಂಧಿಸಲು ಸಿದ್ಧತೆ ನಡೆಸಲಾಗಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಪುತ್ರ ಪ್ರಶಾಂತ್ ಮನೆಯಲ್ಲಿ ಕೋಟಿ ಕೋಟಿ ಹಣವನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಸದ್ಯ ಲೋಕಾಯುಕ್ತ ಕೇಸ್ ನಡುವೆಯೂ ಮಾಡಾಳ್ ವಿರೂಪಾಕ್ಷಪ್ಪ ಮತ್ತು ಪುತ್ರ ಪ್ರಶಾಂತ್‌ನಿಂದ ಸಿವಿಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಜೊತೆಗೆ ಮಾಧ್ಯಮಗಳ ವಿರುದ್ಧ ಮಾನಹಾನಿಕರ ಸುದ್ದಿ ಬಿತ್ತರಿಸದಂತೆ ನಿರ್ಬಂಧ ಹೇರುವಂತೆ ಮನವಿ ಮಾಡಿದ್ದಾರೆ. ಬೆಂಗಳೂರಿನ ಸಿವಿಲ್ ಕೋರ್ಟ್ ವಿಚಾರಣೆಯನ್ನು ಮಾ.6ಕ್ಕೆ ಮುಂದೂಡಿದೆ.

ಸಿಕ್ಕಂತಹ ಉದ್ಯೋಗಾವಕಾಶ ಸದ್ಬಳಕೆ ಮಾಡಿಕೊಳ್ಳಿ

● ಉದ್ಯೋಗಾಕಾಂಕ್ಷಿಗಳಿಗೆ ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ ಸಲಹೆ ● ಉದ್ಯೋಗ ಮೇಳದ ಉದ್ಯೋಗಪೂರ್ವ ಸಂದರ್ಶನ ಉದ್ಘಾಟನೆ

ಮೈಸೂರು,ಮಾ.4(ಪಿಎಂ)– ಯಾವುದೇ ಕೆಲಸವಾದರೂ ಗಂಭೀರತೆಯಿಂದ ತೊಡಗಿಸಿಕೊಂಡರೆ ಮಾತ್ರ ಅದರಲ್ಲಿ ಯಶಸ್ಸು ಕಾಣಲು ಸಾಧ್ಯ. ಹಾಗಾಗಿ ದೊರೆಯುವ ಉದ್ಯೋಗಾವಕಾಶವನ್ನು ಉದ್ಯೋಗಾಕಾಂಕ್ಷಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ ಹೇಳಿದರು.



ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಶನಿವಾರ 'ಹೆಚ್.ವಿ.ರಾಜೀವ್ ಉದ್ಯೋಗ ಮಿತ್ರ' ಶೀರ್ಷಿಕೆಯಡಿ ಮಾ.10 ಮತ್ತು 11ರಂದು ಹಮ್ಮಿಕೊಳ್ಳಲಿರುವ ಬೃಹತ್ ಉದ್ಯೋಗ ಮೇಳದ ಉದ್ಯೋಗಪೂರ್ವ ಸಂದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಉಚಿತವಾಗಿ ಉದ್ಯೋಗ ಮೇಳ ಆಯೋಜಿಸಿ ಉದ್ಯೋಗ ನೀಡುವುದು ನಿಸ್ವಾರ್ಥ ಸೇವೆ. ಇಂತಹ ಅವಕಾಶವನ್ನು ಉದ್ಯೋಗಾಕಾಂಕ್ಷಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಅತ್ಯಂತ ಗಂಭೀರತೆಯಿಂದ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಉದ್ಯೋಗ ನೀಡುವ ಕಂಪನಿಗಳ ಬಗ್ಗೆ ಅಂತರ್ಜಾಲದಲ್ಲಿ ಸಾಕಷ್ಟು ಮಾಹಿತಿ ಲಭ್ಯವಾಗಲಿದ್ದು, ಇಲ್ಲಿ ಕಂಪನಿಗಳ ವಿವರ ಕಲೆ ಹಾಕಿ ನಿಗದಿತ ಕಂಪನಿಗಳಲ್ಲಿ ಸಂದರ್ಶನ ಎದುರಿಸಲು ಸಿದ್ಧರಿರಬೇಕು. ಇಲ್ಲವಾದರೆ ಸಂದರ್ಶನದ ದಿನದಂದು ಗೊಂದಲ ಉಂಟಾಗಲಿದೆ ಎಂದು ತಿಳಿಸಿದರು.

ನಿಮ್ಮ ಜೀವನದಲ್ಲಿ ಈ ಉದ್ಯೋಗ ಮೇಳ ಒಂದು ಒಳ್ಳೆಯ ಅವಕಾಶ. ಕಳೆದು ಹೋದ ಅವಕಾಶಗಳ ಬಗ್ಗೆ ಚಿಂತಿಸದೇ ಇದನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಿದ್ಧತೆ ನಡೆಸಬೇಕು. ಅತ್ಯಂತ ವ್ಯವಸ್ಥಿತವಾಗಿ ಹೆಚ್.ವಿ.ರಾಜೀವ್ ಈ ಉದ್ಯೋಗ ಮೇಳ ಆಯೋಜಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮೈಸೂರು ಮತ್ತು ಸುತ್ತಮುತ್ತಲ ಯುವ ಜನತೆಗೆ ಉದ್ಯೋಗ ದೊರೆಕಿಸಿ ಕೊಡಬೇಕೆಂಬ ನಿಟ್ಟಿನಲ್ಲಿ ಈ ಉದ್ಯೋಗ ಮಿತ್ರ ನಡೆಸಲಾಗುತ್ತಿದೆ. ಉದ್ಯೋಗ ಮೇಳ ವ್ಯವಸ್ಥಿತವಾಗಿ ನಡೆಸಬೇಕೆಂಬ ಉದ್ದೇಶದಿಂದ ಇಂದಿನ ಉದ್ಯೋಗ ಪೂರ್ವ ಸಂದರ್ಶನ ಏರ್ಪಡಿಸಲಾಗಿದೆ. ಪದವಿ ಮತ್ತು ಅದಕ್ಕೂ ಮೇಲ್ಪಟ್ಟ ವಿದ್ಯಾವಂತರನ್ನು ಕಂಪನಿಗಳೊಂದಿಗೆ ಮುಂಗಡವಾಗಿ ಸಂಪರ್ಕ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ ಇಂದಿನ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿಸಿದರು.

ಕಂಪನಿಗಳು ಉದ್ಯೋಗಾಕಾಂಕ್ಷಿಗಳ ವಿದ್ಯಾರ್ಹತೆ ಸೇರಿದಂತೆ ಮೊದಲಾದ ಮಾಹಿತಿ ಕಲೆ ಹಾಕಲು ಇಂದಿನ ಕಾರ್ಯಕ್ರಮ ಅನುಕೂಲ ಕಲ್ಪಿಸಲಿದೆ. ಇಂದಿನಿಂದ ಒಂದು ತಿಂಗಳವರೆಗೆ ಉದ್ಯೋಗ ಪಡೆಯಲು ಅವಕಾಶ ಲಭ್ಯವಾಗಲಿದೆ. ಸುಮಾರು 50 ಕಂಪನಿಗಳು ಭಾಗವಹಿಸಲಿದ್ದು, 6 ಸಾವಿರ ಉದ್ಯೋಗ ದೊರೆಯುವ ವಿಶ್ವಾಸವಿದೆ ಎಂದರು.

2014ಕ್ಕೂ ಮೊದಲು ದೇಶದಲ್ಲಿ ಐದೂವರೆ ಸಾವಿರ ನವ ಉದ್ಯಮಗಳಿದ್ದವು. ಆದರೆ ಇಂದು 90 ಸಾವಿರಕ್ಕೂ ಅಧಿಕ ನವ ಉದ್ಯಮಗಳಿವೆ. ಪ್ರಗತಿಯಲ್ಲಿ ಈಗ ಭಾರತ ಮುಂಚೂಣಿಯಲ್ಲಿದೆ. ಸರ್ಕಾರ ಮಾತ್ರವಲ್ಲದೆ, ಉದಯೋನ್ಮುಖ ಯುವ ಉದ್ಯಮಿಗಳು ಉದ್ಯೋಗ ಸೃಷ್ಟಿಯಲ್ಲಿಯೂ ಇಂದು ದೊಡ್ಡ ಪಾತ್ರ ವಹಿಸುತ್ತಿದ್ದಾರೆ. ಹಾಗಾಗಿ ದೇಶದ ಆರ್ಥಿಕತೆ ಪ್ರಪಂಚದಲ್ಲಿ 5ನೇ ಸ್ಥಾನದಲ್ಲಿದ್ದು, ಕೆಲವೇ ವರ್ಷಗಳಲ್ಲಿ 2ನೇ ಸ್ಥಾನಕ್ಕೇರಲಿದೆ ಎಂದು ಹೇಳಿದರು.

ಭಾರತ ಕೋವಿಡ್ ನಂತರವೂ ಅಭಿವೃದ್ಧಿಯಲ್ಲಿ ವೇಗ ಪಡೆದಿದ್ದು, ದೇಶದ ಜಿಡಿಪಿಯನ್ನು ಪ್ರತಿವರ್ಷ ದೇಶವೇ ಮುರಿದು ಹೊಸ ದಾಖಲೆ ನಿರ್ಮಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆ, ಉದ್ಯೋಗಗಳನ್ನು ಹುಟ್ಟು ಹಾಕುವಲ್ಲಿ ಪ್ರಯತ್ನ ಮಾಡುತ್ತಿವೆ. ಶೀಘ್ರದಲ್ಲಿ ಮೈಸೂರು–ಬೆಂಗಳೂರು ಹೈವೆ ಉದ್ಘಾಟನೆಯಾಗಲಿದ್ದು, ಆ ಬಳಿಕ ಬೆಂಗಳೂರು ಮತ್ತಷ್ಟು ಸಮೀಪ ಎನ್ನುವ ಭಾವನೆ ಮೂಡಲಿದೆ. ಬೃಹತ್ ಕಂಪನಿಗಳು ಮೈಸೂರಿನಲ್ಲಿ ಕಾರ್ಯಾರಂಭ ಮಾಡಲು ಇದು ಅನುಕೂಲ ಕಲ್ಪಿಸಲಿದೆ. ನಮ್ಮ ಯುವ ಜನತೆ ಉದ್ಯೋಗ ಪಡೆದು ಸದೃಢರಾಗಬೇಕು. ಆ ಮೂಲಕ ದೇಶವನ್ನು ಸುಭದ್ರವಾಗಿ ಕಟ್ಟಬೇಕು ಎಂದರು. ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಪ್ರೊಫೈಲ್ ಡನ್ ಇನ್ ಸಿಇಓ ಹಾಗೂ ಉದ್ಯೋಗ ಮೇಳದ ಸಂಚಾಲಕ ಎಸ್.ವಿ.ವೆಂಕಟೇಶ್ ಮತ್ತಿತರರು ಹಾಜರಿದ್ದರು.

> ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ಪದವೀಧರರು ಸೇರಿದಂತೆ 700ಕ್ಕೂ ಹೆಚ್ಚು ಮಂದಿ ಇಂದಿನ ಉದ್ಯೋಗಪೂರ್ವ ಸಂದರ್ಶನದಲ್ಲಿ ಪಾಲ್ಗೊಂಡಿದ್ದರು. ಆನ್‌ಲೈನ್ ಮೂಲಕ ಉದ್ಯೋಗದಾತರು, ಉದ್ಯೋಗಾಕಾಂಕ್ಷಿಗಳ ನಡುವೆ ಸಂಪರ್ಕ ಇಂದಿನಿಂದಲೇ ಶುರುವಾಗಲಿದೆ. ಮೊದಲ, ಎರಡನೇ ಹಂತದ ಸಂದರ್ಶನ ಆನ್‌ಲೈನ್‌ನಲ್ಲಿ ನಡೆಯಲಿದ್ದು, ಅಂತಿಮವಾಗಿ ಮಾ.11ರಂದು ನಡೆಯುವ ಉದ್ಯೋಗ ಮೇಳದಲ್ಲಿ ಖುದ್ದಾಗಿ ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ. ಈಗಲೂ ಉದ್ಯೋಗಾಕಾಂಕ್ಷಿಗಳು ಗೂಗಲ್ ಪ್ಲೇಸ್ಟೋರ್ ಮೂಲಕ proofile.in ಆ್ಯಪ್ ಮೂಲಕ ನೋಂದಾಯಿಸಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಏ.5ರವರೆಗೂ ಕಂಪನಿಗಳು ಹಾಗೂ ಉದ್ಯೋಗಾಕಾಂಕ್ಷಿಗಳ ನಡುವೆ ನೇಮಕಾತಿ ಪ್ರಕ್ರಿಯೆ ಸಂಬಂಧ ಹಲವು ಸುತ್ತಿನ ಸಂದರ್ಶನ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಯಲಿದೆ.
> -ಎಸ್.ವಿ.ವೆಂಕಟೇಶ್, 'ಪ್ರೊಫೈಲ್ ಡನ್ ಇನ್ (proofile.in)' ಸಿಇಓ ಹಾಗೂ ಉದ್ಯೋಗ ಮೇಳದ ಸಂಚಾಲಕರು.

ಮೈಸೂರಿನ ಕುವೆಂಪುನಗರದ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಶಾಲೆಯ ಆವರಣದಲ್ಲಿ ಮಾ.10ರಂದು ಬೆಳಗ್ಗೆ 9.30ರಿಂದ 10ನೇ ತರಗತಿ, ದ್ವಿತೀಯ ಪಿಯುಸಿ, ಐಟಿಐ, ಜೆಓಸಿ, ಡಿಪ್ಲೊಮಾ ವಿದ್ಯಾರ್ಹತೆಯ ಅಭ್ಯರ್ಥಿಗಳಿಗೆ, ಮಾ.11ರಂದು ಬೆಳಗ್ಗೆ 9.30ರಿಂದ ಪದವೀಧರರು ಹಾಗೂ ಅದಕ್ಕೂ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿದವರಿಗೆ ಉದ್ಯೋಗ ಮೇಳ ನಡೆಯಲಿದೆ. ವಿವರಗಳಿಗೆ ಮೊ.ಸಂ. 95133 73737 ಅನ್ನು ಸಂಪರ್ಕಿಸಬಹುದು.

ರಿಯಾಯಿತಿ ದಂಡ ಪಾವತಿಗೆ ಮೊದಲ ದಿನ ನೀರಸ ಪ್ರತಿಕ್ರಿಯೆ

ಕೇವಲ 9961 ಪ್ರಕರಣಗಳಲ್ಲಿ 20.41 ಲಕ್ಷ ರೂ. ಸಂಗ್ರಹ



ಮೈಸೂರು, ಮಾ.4(ಆರ್‌ಕೆ)–ಬಾಕಿ ಇರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣದ ದಂಡ ಶೇ.50ರ ರಿಯಾಯಿತಿಯೊಂದಿಗೆ ಪಾವತಿಸಲು ಮೊದಲ ದಿನವಾದ ಇಂದು ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಇಂದಿನಿಂದ 15 ದಿನಗಳವರೆಗೆ ದಂಡ ಪಾವತಿಸಲು ಶೇ.50ರಷ್ಟು ರಿಯಾಯಿತಿ ನೀಡಿ ನಿನ್ನೆಯಷ್ಟೇ ಸರ್ಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಮೈಸೂರು ನಗರ ಸಂಚಾರ ಪೊಲೀಸರು 50 ಡಿವೈಸರ್‌ಗಳೊಂದಿಗೆ ಹಲವು ಕಡೆ ಕೌಂಟರ್‌ಗಳನ್ನು ತೆರೆದು ದಂಡದ ಹಣ ಕಟ್ಟಿಸಿಕೊಂಡು ರಶೀತಿ ನೀಡಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಪ್ರತೀ ಸಂಚಾರ ಠಾಣೆಗಳಲ್ಲಿ 3 ಸಿಸ್ಟಂಗಳೊಂದಿಗೆ ಕೌಂಟರ್ ತೆರೆಯಲಾಗಿದೆ. ಎಲ್ಲಾ ಎಎಸ್‌ಐಗಳಿಗೂ ಡಿವೈಸರ್ ನೀಡಿ, ಜನರಿಂದ ಹಣ ಪಾವತಿಸಿಕೊಳ್ಳಲು ಸೂಚನೆ ನೀಡಲಾಗಿದೆಯಲ್ಲದೇ, ಮೈಸೂರಿನ ಎರಡೂ ನ್ಯಾಯಾಲಯಗಳಲ್ಲೂ ಹಣ ಪಾವತಿಗೆ ವ್ಯವಸ್ಥೆ ಮಾಡಿ ನೂಕು–ನುಗ್ಗಲು ಉಂಟಾಗದಂತೆ ಸಿದ್ಧತೆ ಮಾಡಲಾಗಿದೆಯಾದರೂ, ಮೊದಲ ದಿನವಾದ ಇಂದು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ದಂಡದ ಹಣ ಪಾವತಿಸಿದ್ದಾರೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಮೈಸೂರಿನ ಎಲ್ಲಾ ಕೌಂಟರ್‌ಗಳಿಂದ 9961 ಪ್ರಕರಣಗಳಲ್ಲಿ 20,41,450 ರೂ. ದಂಡದ ಹಣ ಸಂಗ್ರಹವಾಗಿದ್ದು, ಸೋಮವಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಮಾಲೀಕರು ದಂಡ ಪಾವತಿಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ಎಸ್.ಯಶಸ್ವಿನಿಗೆ ಪಿಹೆಚ್.ಡಿ ಪದವಿ



ಮೈಸೂರು, ಮಾ.4– ಎಸ್.ಯಶಸ್ವಿನಿ ಸಂಶೋಧನೆ ನಡೆಸಿ, ಮಂಡಿಸಿದ ಮಹಾಪ್ರಬಂಧವನ್ನು ನಗರ ಮತ್ತು ಪ್ರಾದೇಶಿಕ ಯೋಜನೆ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯ ಅಂಗೀಕರಿಸಿದೆ. ಇವರು ಡಾ. ಬಿ.ಶಂಕರ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧವನ್ನು ಮಂಡಿಸಿದ್ದರು. ಶ್ರೀಮತಿ ಯಶಸ್ವಿನಿ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಯಶಸ್ವಿ ಎಸ್.ಸೋಮಶೇಖರ್ ಅವರ ಪುತ್ರಿ ಹಾಗೂ ಮೈಸೂರು ಮೆಗಾ ಡೈರಿ ಅಧಿಕಾರಿ ಜಗದೀಶ್ ಅವರ ಪತ್ನಿ.

ಮಾ.20, 21ರಂದು ಮಹಿಳಾ ಉದ್ಯಮಿಗಳಿಗೆ ಕಂಪ್ಯೂಟರ್ ಶಿಕ್ಷಣ ಕುರಿತು ಉಚಿತ ಕಾರ್ಯಾಗಾರ



ಮೈಸೂರು, ಮಾ.4(ಪಿಎಂ)– ವುಮೆನ್‌ಕ್ಯಾನ್ ಫೌಂಡೇಷನ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಾ.20 ಮತ್ತು 21ರಂದು ಮಹಿಳಾ ಉದ್ಯಮಿಗಳು ಹಾಗೂ ನವ ಮಹಿಳಾ ಉದ್ಯಮಿಗಳಿಗೆ ಉಚಿತ ಕಂಪ್ಯೂಟರ್ ಸಾಕ್ಷರತಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷೆ ರಚನಾ ಮಹೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಎರಡು ದಿನಗಳಲ್ಲಿ ಒಟ್ಟು 200 ಮಂದಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಕುವೆಂಪುನಗರದ ಎಡ್ಯುಕೇರ್ ಸಂಸ್ಥೆ ಸಭಾಂಗಣದಲ್ಲಿ ಈ ಎರಡೂ ದಿನಗಳು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಕಾರ್ಯಾಗಾರ ನಡೆಯಲಿದೆ. ಮೈಸೂರು ಜಿಲ್ಲೆಯ ಉದ್ಯಮಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ ಎಂದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವ 18ರಿಂದ 45 ವರ್ಷದೊಳಗಿನ ಮಹಿಳಾ ಉದ್ಯಮಿಗಳು ಮಾ.10ರೊಳಗೆ ದೂ.ಸಂ. 63643 40027 ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಉದ್ಯಮದಲ್ಲಿ ಕಂಪ್ಯೂಟರ್ ಬಳಕೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಲಿದ್ದಾರೆ ಎಂದು ತಿಳಿಸಿದರು. ಫೌಂಡೇಷನ್ ಪದಾಧಿಕಾರಿಗಳಾದ ಶೋಭಾ ರಮೇಶ್, ನಂದಿನಿ, ಹೆಚ್.ಪಿ.ಹೇಮಾ ಗೋಷ್ಠಿಯಲ್ಲಿದ್ದರು.

ಪಾಲಿಕೆ ನೇರ ಪಾವತಿ, ಹೆಚ್ಚುವರಿ ಪೌರಕಾರ್ಮಿಕರ ಪ್ರತಿಭಟನೆ



ಮೈಸೂರು, ಮಾ.4(ಪಿಎಂ)– ತಮ್ಮನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ ಮೈಸೂರು ಮಹಾನಗರ ಪಾಲಿಕೆಯ ನೇರ ಪಾವತಿ ಹಾಗೂ ಹೆಚ್ಚುವರಿ ಪೌರಕಾರ್ಮಿಕರು ಶನಿವಾರ ಸಯ್ಯಾಜಿರಾವ್ ರಸ್ತೆಯ ಪಾಲಿಕೆ ಎದುರು ಪ್ರತಿಭಟನೆ ನಡೆಸಿದರು.

ನೇರ ಪಾವತಿ ಹಾಗೂ ಹೆಚ್ಚುವರಿ ಪೌರಕಾರ್ಮಿಕರು ಸೇರಿದಂತೆ ಒಟ್ಟು 1,680 ಮಂದಿ ಇದ್ದೇವೆ. ಇದೀಗ ಕೇವಲ 170 ಮಂದಿಗೆ ಸಂಬಂಧಿಸಿದಂತೆ ಮಾತ್ರ ಖಾಯಂಗೆ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದೆ. ಈ ಹಿಂದೆ ಹೋರಾಟ ನಡೆಸಿದ ಸಂದರ್ಭದಲ್ಲಿ ಎಲ್ಲಾ ಪೌರಕಾರ್ಮಿಕರನ್ನು ಖಾಯಂ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಅದರಂತೆ ಎಲ್ಲರನ್ನೂ ಖಾಯಂ ಮಾಡಬೇಕು ಎಂದು ಆಗ್ರಹಿಸಿದರು.

ಖಾಯಂಗೊಳಿಸಲು ಈಗ ಪ್ರಕಟಿಸಿರುವ ತಾತ್ಕಾಲಿಕ ಪಟ್ಟಿ ರದ್ದುಗೊಳಿಸಿ ಎಲ್ಲರನ್ನೂ ಖಾಯಂ ಮಾಡಬೇಕು. ಹಲವು ವರ್ಷಗಳಿಂದ ಪಾಲಿಕೆಯ 65 ವಾರ್ಡ್‌ಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮನ್ನು ಕೂಡಲೇ ಖಾಯಂಗೊಳಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಪೌರಕಾರ್ಮಿಕರ ಮುಖಂಡರೂ ಆದ ಮಾಜಿ ಮೇಯರ್ ನಾರಾಯಣ್ ನೇತೃತ್ವದಲ್ಲಿ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಗ್ರಾಮದಲ್ಲೂ ಸ್ಮಶಾನಕ್ಕೆ ಜಾಗ ಗುರುತಿಸಿ

ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ

ಮೈಸೂರು, ಮಾ.4(ಎಸ್‌ಬಿಡಿ)– ಪ್ರತಿ ಗ್ರಾಮದಲ್ಲೂ ಸ್ಮಶಾನಕ್ಕೆ ಜಾಗ ಗುರುತಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ತಾಕೀತು ಮಾಡಿದರು.





ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ತಮ್ಮ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ಮಶಾನ ಅಭಿವೃದ್ಧಿಗೆ ಸಂಬಂಧಿಸಿದಂತೆ ಶನಿವಾರ ಸಭೆ ನಡೆಸಿ, 83 ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಾಗವಿದ್ದು 9 ಗ್ರಾಮಗಳಲ್ಲಿ ಜಾಗ ನಿಗದಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರತಿಯೊಂದು ಗ್ರಾಮದಲ್ಲೂ ಕಡ್ಡಾಯವಾಗಿ ಸ್ಮಶಾನ ಇರಬೇಕು. ಜಾಗದ ವಿಸ್ತೀರ್ಣ ಗುರುತಿಸಿ, ಒತ್ತುವರಿಯಾಗಿದ್ದರೆ ತಕ್ಷಣ ತೆರವುಗೊಳಿಸಲು ಕ್ರಮ ವಹಿಸಬೇಕು. ಸ್ಮಶಾನ ಇಲ್ಲದಿದ್ದರೆ ಸೂಕ್ತ ಜಾಗ ಗುರುತಿಸಿ ಎಂದು ಸೂಚಿಸಿದರು.

ಕ್ಷೇತ್ರ ವ್ಯಾಪ್ತಿಯಲ್ಲಿ 33 ಸ್ಮಶಾನಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಇನ್ನುಳಿದ 59 ಸ್ಮಶಾನಗಳನ್ನು ವಿವಿಧ ಯೋಜನೆಗಳ ಅನುದಾನ ಬಳಸಿಕೊಂಡು ಮೂಲ ಮುಂದಿನ ಆರ್ಥಿಕ ವರ್ಷದಲ್ಲಿ ಅಭಿವೃದ್ಧಿಪಡಿಸಲೇಬೇಕು. ಇನ್ನೊಂದು ವಾರದಲ್ಲಿ ಎಲ್ಲಾ ಸ್ಮಶಾನಗಳ ವಿಸ್ತೀರ್ಣ ಗುರುತಿಸಿ, ಒತ್ತುವರಿ ತೆರವುಗೊಳಿಸಿ ಗ್ರಾಪಂ ಅಧೀನಕ್ಕೆ ಒಳಪಡಿಸಬೇಕು. ಅಭಿವೃದ್ಧಿಯಾಗದಿರುವ ಸ್ಮಶಾನಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆ 2023–24ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅಭಿವೃದ್ಧಿಪಡಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ನೀರಿನ ಬಗ್ಗೆ ನಿಗಾ: ಬೇಸಿಗೆಯಲ್ಲಿ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಈಗಿನಿಂದಲೇ ನಿಗಾ ವಹಿಸಬೇಕು. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಗ್ರಾಮಗಳನ್ನು ಗುರುತಿಸಿ, ಮುಂಜಾಗ್ರತಾ ಕ್ರಮವಾಗಿ ಆ ಗ್ರಾಮದಲ್ಲಿರುವ ಖಾಸಗಿ ಬೋರ್‌ವೆಲ್‌ಗಳ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಜೊತೆಗೆ ನೀರು ಸರಬರಾಜು ಮಾಡುವ ಟ್ಯಾಂಕರ್‌ಗಳ ಸುಸ್ಥಿತಿಯನ್ನು ಖಾತ್ರಿಪಡಿಸಿಕೊಳ್ಳಬೇಕು. ಅಂಗನವಾಡಿ ಹಾಗೂ ಶಾಲೆಗಳಿಗೆ ಖುದ್ದು ಭೇಟಿ ನೀಡಿ, ಅಲ್ಲಿನ ಕುಡಿಯುವ ನೀರಿನ ವ್ಯವಸ್ಥೆ ಪರಿಶೀಲಿಸಬೇಕು. ಏನಾದರೂ ವ್ಯತ್ಯಯವಿದ್ದರೆ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ಮೂಲ ಸೌಕರ್ಯಕ್ಕೆ ಆದ್ಯತೆ: ಪ್ರತಿ ಗ್ರಾಮಗಳಲ್ಲೂ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕುಡಿಯುವ ನೀರಿನ ಜೊತೆಗೆ ಬೀದಿದೀಪ, ಚರಂಡಿ ವ್ಯವಸ್ಥೆ ಸ್ವಚ್ಛತೆ ನಿರ್ವಹಣೆ ಸಮರ್ಪಕವಾಗಿ ರಬೇಕು. ಕುಡಿಯುವ ನೀರಿನ ಟ್ಯಾಂಕ್ ಗಳನ್ನು ಶುಚಿಗೊಳಿಸಬೇಕು. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಸೃಷ್ಟಿಯಾಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳುವುದರ ಜೊತೆಗೆ ಇತರೆ ಎಲ್ಲಾ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ತಿಳಿಸಿದರು.

ಅಭಿಯಾನ ಕೈಗೊಳ್ಳಿ: ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ಮಾತನಾಡಿ, ಮಾನವೀಯ ನೆಲೆಗಟ್ಟಿನಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಸ್ಮಶಾನ ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ಅಭಿಯಾನ ಕೈಗೊಳ್ಳುವ ಮೂಲಕ ಪ್ರತಿ ಗ್ರಾಮದಲ್ಲೂ ಸ್ಮಶಾನಕ್ಕೆ ಜಾಗ ಗುರುತಿಸಿದರೆ ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು. ಗೌರವಯುತವಾಗಿ ಅಂತ್ಯಸಂಸ್ಕಾರ ಮಾಡಲು ನೆಲೆ ಇಲ್ಲ ಎಂದರೆ ಅದು ಅಮಾನವೀಯವಾಗುತ್ತದೆ. ಹಾಗಾಗಿ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಮಶಾನ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದರು.

ಸಭೆಯಲ್ಲಿ ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಡಿ.ಗಿರೀಶ್, ತಹಸೀಲ್ದಾರ್ ಬಿ.ಎನ್.ಗಿರೀಶ್, ಭೂ ದಾಖಲೆ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್ ಸೇರಿದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಜರಿದ್ದರು.

> ಕ್ಷೇತ್ರ ವ್ಯಾಪ್ತಿಯಲ್ಲಿ 33 ಸ್ಮಶಾನಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಇನ್ನುಳಿದ 59 ಸ್ಮಶಾನಗಳನ್ನು ವಿವಿಧ ಯೋಜನೆಗಳ ಅನುದಾನ ಬಳಸಿಕೊಂಡು ಮೂಲ ಮುಂದಿನ ಆರ್ಥಿಕ ವರ್ಷದಲ್ಲಿ ಅಭಿವೃದ್ಧಿಪಡಿಸಲೇಬೇಕು. ಇನ್ನೊಂದು ವಾರದಲ್ಲಿ ಎಲ್ಲಾ ಸ್ಮಶಾನಗಳ ವಿಸ್ತೀರ್ಣ ಗುರುತಿಸಿ, ಒತ್ತುವರಿ ತೆರವುಗೊಳಿಸಿ ಗ್ರಾಪಂ ಅಧೀನಕ್ಕೆ ಒಳಪಡಿಸಬೇಕು.
> -ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
5-3-2023
ಪುಟ 10



ಸಿಬ್ಬಂದಿ ಕೊರತೆ ನಡುವೆಯೂ ಸರ್ವ ಸನ್ನದ್ಧ...

ಮೈಸೂರು ಜಿಲ್ಲೆಯಲ್ಲಿ ಸಿಬ್ಬಂದಿ ಕೊರತೆಯ ನಡುವೆಯೂ ಅಗ್ನಿಶಾಮಕ ಠಾಣೆಗಳು ಸದಾ ಸನ್ನದ್ಧವಾಗಿವೆ. ಶೇ.25-30 ರಷ್ಟು ಸಿಬ್ಬಂದಿ ಕೊರತೆ ಇದ್ದರೂ, ಇರುವ ಸಿಬ್ಬಂದಿ, ಸಲಕರಣೆಗಳೊಂದಿಗೆ ಅಗ್ನಿ ಅವಘಡ ನಡೆದ ಸ್ಥಳಗಳಿಗೆ ಕೆಲವೇ ನಿಮಿಷಗಳಲ್ಲಿ ತಲುಪಿ ಬೆಂಕಿ ನಂದಿಸಿ, ಆಸ್ತಿ ಉಳಿಸುವ ಕಾರ್ಯ ನಡೆಯುತ್ತಿದೆ. ಜೊತೆಗೆ ರಕ್ಷಣಾ ಕಾರ್ಯಾಚರಣೆಗಳಲ್ಲಿಯೂ ಭಾಗಿಯಾಗಿ ಜೀವಹಾನಿ ಉಂಟಾಗದಂತೆ ಶ್ರಮಿಸುತ್ತಿದೆ. ಜಿಲ್ಲೆಯಾದ್ಯಂತ 2020ರಲ್ಲಿ 23,66,09,475 ರೂ.ನಷ್ಟು ಆಸ್ತಿ ರಕ್ಷಣೆ ಮಾಡಿದರೆ, 2021ರಲ್ಲಿ 15,32,92,700 ರೂ. ಹಾಗೂ 2022ರಲ್ಲಿ 28,32,55,500 ರೂ.ಮೌಲ್ಯದ ಆಸ್ತಿ ರಕ್ಷಣೆ ಮಾಡಲಾಗಿದೆ. ಹಾಗೆಯೇ 2023ರ ಜನವರಿಯಿಂದ ಇಲ್ಲಿಯವರೆಗೆ 307 ಬೆಂಕಿ ಅನಾಹುತ ಹಾಗೂ 14 ರಕ್ಷಣಾ ಕಾರ್ಯ ನಡೆಸಲಾಗಿದ್ದು, ಲಕ್ಷಾಂತರ ರೂ.ಮೌಲ್ಯದ ಆಸ್ತಿ ಸಂರಕ್ಷಣೆ ಮಾಡಲಾಗಿದೆ.

ಜೋಕೆ... ಬೆಂಕಿ

"ಎಲ್ಲಾ ಬಗೆಯ ವಾಹನ, ಸಲಕರಣೆಗಳು ಲಭ್ಯವಿದ್ದು, ಮಾಹಿತಿ ಬಂದ ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಬೆಂಕಿ ನಂದಿಸುವ ಹಾಗೂ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಬೇಸಿಗೆಯಲ್ಲಿ ಪ್ರತಿದಿನ 10-15 ಕಡೆಗಳಲ್ಲಿ ಬೆಂಕಿ ಅನಾಹುತಗಳು ಸಂಭವಿಸುತ್ತಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವುದು ಅವಶ್ಯವಾಗಿದೆ.

– ಹೆಚ್.ರಾಜು,
ಜಿಲ್ಲಾ ಅಗ್ನಿಶಾಮಕ ಅಧಿಕಾರಿ





"ಬೀಡಿ-ಸಿಗರೇಟ್‌ಗಳಿಂದ ಅಗ್ನಿ ಅನಾಹುತ...
ಬೀಡಿ-ಸಿಗರೇಟ್ ಬಳಸಿ, ಅದರಲ್ಲಿನ ಬೆಂಕಿ ಕೆಡಿಸದೆ ಬಿಸಾಡುವವರಿಂದಲೇ ಹೆಚ್ಚು ಅಗ್ನಿ ಅವಘಡಗಳಾಗುತ್ತಿವೆ. ಒಣ ಹುಲ್ಲು ಹೊತ್ತಿ ಉರಿಯಲು ಬೀಡಿಯಲ್ಲಿರುವ 180 ಡಿಗ್ರಿ, ಸಿಗರೇಟ್‌ನಲ್ಲಿರುವ 800-900 ಡಿಗ್ರಿ ಉಷ್ಣಾಂಶವೇ ಸಾಕು. ಅಲ್ಲದೆ ರಸ್ತೆ ಬದಿ ಹಾಗೂ ಮನೆಗಳ ಎದುರು ಕಸದ ಗುಡ್ಡೆಗೆ ಬೆಂಕಿ ಹಚ್ಚುವುದರಿಂದಲೂ ಅಗ್ನಿ ಅನಾಹುತಗಳಾಗುತ್ತವೆ. ಇದರ ಬಗ್ಗೆ ಎಚ್ಚರಿಕೆ ವಹಿಸುವುದರ ಜೊತೆಗೆ ಎಲ್ಲೆಂದರಲ್ಲಿ ಬೀಡಿ-ಸಿಗರೇಟ್‌ಗಳನ್ನು ಬಿಸಾಡಬಾರದು ಎಂಬ ಸಾಮಾಜಿಕ ಅರಿವು ಬೆಳೆಸಿಕೊಳ್ಳಬೇಕು.

– ಎಸ್.ನಾಗರಾಜ್ ಅರಸ್, ಸರಸ್ವತಿಪುರಂ ಅಗ್ನಿಶಾಮಕ ಠಾಣಾಧಿಕಾರಿ

ಮೋಹನ್ ಕಾಯಕ
ಮೊ.9341296257

ಸುಡು ಬಿಸಿಲಿನ ಬಿರು ಬೇಸಿಗೆಯಲ್ಲಿ ಅಗ್ನಿ ಅನಾಹುತಗಳ ವಿಚಾರದಲ್ಲಿ ಎಚ್ಚರವಿರಲಿ... ಸ್ವಲ್ಪ ಮೈಮರೆತರೂ ಆಸ್ತಿ-ಪಾಸ್ತಿ ನಾಶ... ಪ್ರಾಣಕ್ಕೂ ಕುತ್ತು ಬರುವ ಅಪಾಯವಿದೆ...!

ವರ್ಷದಿಂದ ವರ್ಷಕ್ಕೆ ಎಲ್ಲಾ ಋತುಮಾನದಲ್ಲೂ ಅಗ್ನಿ ಅವಘಡಗಳು ಸಂಭವಿಸುತ್ತವೆ. ಅದರಲ್ಲೂ ಬೇಸಿಗೆಯಲ್ಲಿ ಅತ್ಯಧಿಕ ಅಗ್ನಿ ಅನಾಹುತಗಳಾಗುತ್ತವೆ. ಈ ವೇಳೆ ಸಂಪಾದಿಸಿದ್ದು ಕ್ಷಣಾರ್ಧದಲ್ಲೇ ಅಗ್ನಿಗಾಹುತಿಯಾಗುವುದನ್ನು ತಪ್ಪಿಸಬೇಕಾದರೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ ಅಗ್ನಿಶಾಮಕ ಟೋಲ್ ಫ್ರೀ ನಂಬರ್ 101, 112 ಸದಾ ನೆನಪಿನಲ್ಲಿಸಿಕೊಂಡಿರುವುದು ಒಳ್ಳೆಯದು.

ಕಳೆದ ಮೂರು ವರ್ಷದಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಅಗ್ನಿ ಅವಘಡಗಳ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು, ಬೇಸಿಗೆಯಲ್ಲಿ ದಿನವೊಂದಕ್ಕೆ 10-15 ಬೆಂಕಿ ಅನಾಹುತಗಳು ಸಂಭವಿಸುತ್ತಿವೆ. 2020ರಲ್ಲಿ 1214 ಅಗ್ನಿ ಅವಘಡಗಳು ಸಂಭವಿಸಿದ್ದು, ಸುಮಾರು 7,31,44,850 ರೂ.ನಷ್ಟು ಆಸ್ತಿ ನಷ್ಟವಾಗಿದೆ.

ಅಗ್ನಿಶಾಮಕ ಠಾಣೆಗಳ ದೂರವಾಣಿ ಸಂಖ್ಯೆ

ಮೈಸೂರು ನಗರ ಸೇರಿ ಜಿಲ್ಲೆಯಲ್ಲಿ 9 ಅಗ್ನಿಶಾಮಕ ಠಾಣೆಗಳು ಹಾಗೂ ಒಂದು ಯೂನಿಟ್ ಇದ್ದು, ದಿನದ 24 ಗಂಟೆಯೂ ಸೇವಾ ನಿರತವಾಗಿವೆ. ಟೋಲ್ ಫ್ರೀ ನಂಬರ್‌ಗಳಾದ 101, 112 ಜೊತೆಗೆ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ದೂ.ಸಂಖ್ಯೆ.0821-2540970, ಹೆಬ್ಬಾಳ ಅಗ್ನಿಶಾಮಕ ಠಾಣೆ ದೂ.ಸಂ.0821-2512101, ಬನ್ನಿಮಂಟಪ ಅಗ್ನಿಶಾಮಕ ಠಾಣೆ ದೂ.ಸಂ.0821-2495101, ಆರ್‌ಬಿಐ ಯೂನಿಟ್ ದೂ.ಸಂ.0821-2582103, ಹುಣಸೂರು ಅಗ್ನಿಶಾಮಕ ಠಾಣೆ ದೂ.ಸಂ. 08222-253300, ಟಿ.ನರಸೀಪುರ ಅಗ್ನಿಶಾಮಕ ಠಾಣೆ ದೂ.ಸಂ.08227-260101, ಕೆ.ಆರ್.ನಗರ ಅಗ್ನಿಶಾಮಕ ಠಾಣೆ ದೂ.ಸಂ.08223-263101, ನಂಜನಗೂಡು ಅಗ್ನಿಶಾಮಕ ಠಾಣೆ ದೂ.ಸಂ.08221-224144, ಪಿರಿಯಾಪಟ್ಟಣ ಅಗ್ನಿಶಾಮಕ ಠಾಣೆ ದೂ.ಸಂ.08223-273101 ಹಾಗೂ ಹೆಚ್.ಡಿ.ಕೋಟೆ ಅಗ್ನಿಶಾಮಕ ಠಾಣೆ ದೂ.ಸಂ.08223-296101 ಗೆ ಸಾರ್ವಜನಿಕರು ಸಂಪರ್ಕಿಸಬಹುದಾಗಿದೆ.

ಹಾಗೆಯೇ 2021ರಲ್ಲಿ 982 ಬೆಂಕಿ ಅವಘಡಗಳು ನಡೆದಿದ್ದು, ಸುಮಾರು 4,70,57,100 ರೂ.ನಷ್ಟು ಆಸ್ತಿ ಬೆಂಕಿಗಾಹುತಿಯಾದರೆ, 2022ರಲ್ಲಿ 875 ಬೆಂಕಿ ಅವಘಡಗಳು ಸಂಭವಿಸಿ, ಸುಮಾರು 6,70,84,200 ರೂ.ಗಳಷ್ಟು ನಷ್ಟವಾಗಿದೆ. ಒಟ್ಟಾರೆ ಮೂರು ವರ್ಷಗಳಲ್ಲಿ ಸುಮಾರು 18.72 ಕೋಟಿ ರೂ. ಆಸ್ತಿ ನಾಶವಾಗಿದೆ.



ಅಗ್ನಿ ಅನಾಹುತ ಹಾಗೂ ಇನ್ನಿತರೆ ವಿಪತ್ತುಗಳಲ್ಲಿ ಆಸ್ತಿ-ಪಾಸ್ತಿಯಲ್ಲದೆ ಸಾಕಷ್ಟು ಪ್ರಾಣಹಾನಿಯೂ ಸಂಭವಿಸಿದೆ. 2020ರಲ್ಲಿ ಸುಮಾರು 44 ಮಂದಿ ಪ್ರಾಣ ಕಳೆದುಕೊಂಡರೆ, 2021ರಲ್ಲಿ 55 ಹಾಗೂ 2022ರಲ್ಲಿ 70 ಮಂದಿ ಸೇರಿ ಮೂರು ವರ್ಷದಲ್ಲಿ 169 ಮಂದಿ ಜೀವ ಬಿಟ್ಟಿದ್ದಾರೆ. ಅಲ್ಲದೆ ಪ್ರಾಣಿ-ಪಕ್ಷಿಗಳಿಗೂ ಅಗ್ನಿ ಅನಾಹುತ ಕಂಟಕವಾಗಿದೆ. ಈ ನಿಟ್ಟಿನಲ್ಲಿ ಬೇಸಿಗೆ ಕಾಲದಲ್ಲಿ ಮುಂಜಾಗ್ರತಾ ಕ್ರಮ ಅತ್ಯಂತ ಅಗತ್ಯವಾಗಿದೆ.


ಮುನ್ನೆಚ್ಚರಿಕಾ ಕ್ರಮಗಳು: ಮನೆಗಳಿಗೆ, ಹುಲ್ಲಿನ ಬಣವೆಗಳಿಗೆ, ಮರದ ರಾಶಿಗೆ ಬೆಂಕಿಬಿದ್ದಾಗ ನೀರು ಮತ್ತು ಮರಳನ್ನು ಸುರಿಯಬೇಕು. ಸೀಮೆಎಣ್ಣೆ, ಪೆಟ್ರೋಲ್ ಅಥವಾ ಇತರೆ ಎಣ್ಣೆ ರೂಪದ ಪದಾರ್ಥಗಳನ್ನು ಬೆಂಕಿ ತಗುಲಿದಾಗ ಸುರಿಯಬಾರದು. ಉರಿಯುತ್ತಿರುವ ಸ್ಟೌವ್‌ಗೆ ಸೀಮೆಎಣ್ಣೆ ತುಂಬಲು ಪ್ರಯತ್ನಿಸಬೇಡಿ. ಒಲೆಯ ಮೇಲೆ ಇಟ್ಟಿರುವ ಪಾತ್ರೆ ತೆಗೆಯಲು ಸೀರೆ ಸೇರಿದಂತೆ ಉಟ್ಟ ಬಟ್ಟೆ ಬಳಸಬೇಡಿ. ಅಡುಗೆ ಮನೆಯಲ್ಲಿ ಕೆಲಸಮಾಡುವಾಗ ಮೇಲ್ಬಟ್ಟೆ(apron) ಧರಿಸುವುದು ಒಳಿತು. ಸೀಮೆಎಣ್ಣೆ, ಪೆಟ್ರೋಲ್ ಹಾಗೂ ಇನ್ನಿತರೆ ಸ್ಫೋಟಕ ವಸ್ತುಗಳನ್ನು ಮನೆಯೊಳಗೆ ಶೇಖರಿಸಬೇಡಿ. ಉಟ್ಟ ಬಟ್ಟೆ ಅಥವಾ ಮೈಗೆ ಬೆಂಕಿ ತಗುಲಿದಾಗ ಕಂಬಳಿ ಅಥವಾ ದಪ್ಪನೆಯ ಹೊದಿಕೆ ಬಟ್ಟೆಯನ್ನು ಸುತ್ತಿಕೊಂಡು ನೆಲದ ಮೇಲೆ ಹೊರಳಾಡಬೇಕು. ಮೈಗೆ ಬೆಂಕಿ ಸೋಕಿದಾಗ ತಣ್ಣೀರು ಸುರಿಯಬೇಕು ಹಾಗೂ ಮನೆಯಿಂದ ಹೊರಗೆ ಹೋಗಬೇಕು. ರಾತ್ರಿ ವೇಳೆ ಮೈನ್ ಸ್ವಿಚ್ ಆಫ್ ಮಾಡುವುದು ಹಾಗೂ ದೇವರ ಫೋಟೊ ಮುಂದೆ ದೀಪ ಅಥವಾ ಗಂಧದ ಕಡ್ಡಿ ಉರಿಯುತ್ತಿದ್ದರೆ ನಂದಿಸುವುದನ್ನು ಮರೆಯಬಾರದು. ಹಾಗೆಯೇ ಹುಲ್ಲಿನ ಬಣವೆಗಳ ನಡುವೆ ಅಂತರವಿರಬೇಕು.

ಶಾರ್ಟ್ ಸರ್ಕ್ಯೂಟ್: ಶಾರ್ಟ್ ಸರ್ಕ್ಯೂಟ್ ಸಹ ಅಪಾರ ಆಸ್ತಿ-ಪಾಸ್ತಿ ಹಾನಿಗೆ ಕಾರಣವಾಗಲಿದೆ. ಆದ್ದರಿಂದ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡರೆ ತಕ್ಷಣವೇ ನೀರನ್ನು ಸುರಿಯಬಾರದು. ಮೊದಲು ಮೈನ್ ಸ್ವಿಚ್ ಆಫ್ ಮಾಡಿ, ಮರಳನ್ನು ಎರಚಬೇಕು. ವಿದ್ಯುತ್ ಸ್ಟೌವ್‌ಗಳಲ್ಲಿ ಅಡುಗೆ ಮಾಡುವಾಗ ಮರ ಅಥವಾ ರಬ್ಬರ್ ಹಲಗೆಯ ಮೇಲೆ ನಿಂತು ಕೆಲಸ ಮಾಡಬೇಕು. ಯಂತ್ರೋಪಕರಣಗಳು, ಕಾರು-ಸ್ಕೂಟರ್ ಇನ್ನಿತರೆ ವಾಹನಗಳಲ್ಲಿ ಬೆಂಕಿ ಕಾಣಿಸಿಕೊಂಡಾಗ ಮರಳು, ಮಣ್ಣು ಮತ್ತು ಅಗ್ನಿನಂದಕ(fire extinguisher) ಬಳಸುವುದು ಸೂಕ್ತ.

ಎಲ್‌ಪಿಜಿ ಗ್ಯಾಸ್ ಸಿಲಿಂಡರ್: ವಿತರಕರಿಂದ ಗ್ಯಾಸ್ ಸಿಲಿಂಡರ್ ಪಡೆಯುವಾಗಲೇ ಸೀಲ್, ವಾಷರ್, ತೂಕ ಹಾಗೂ ಬಳಕೆ ಅವಧಿ ಪರಿಶೀಲಿಸಬೇಕು. ಗ್ಯಾಸ್ ಸಿಲಿಂಡರ್‌ಗಿಂತ ಸ್ಟೌವ್ ಎತ್ತರದಲ್ಲಿರಬೇಕು. ತಲೆಕೆಳಗೆ ಇಡುವುದು, ಬಿಸಿ ನೀರಿನ ಪಾತ್ರೆಯಲ್ಲಿಡುವುದು ಸರಿಯಲ್ಲ. ಉಪಯೋಗಿಸಿದ ನಂತರ ರೆಗ್ಯುಲೇಟರ್ ವಾಲ್ವ್ ಮುಚ್ಚಬೇಕು ಮತ್ತು ರಾತ್ರಿ ಆಫ್ ಮಾಡಬೇಕು. ಸೋರಿಕೆ ವಾಸನೆ ಬಂದ ಕೂಡಲೇ ರೆಗ್ಯುಲೇಟರ್ ವಾಲ್ವ್ ಆಫ್ ಮಾಡಿ, ಮನೆಯ ಎಲ್ಲಾ ಕಿಟಕಿ ಬಾಗಿಲುಗಳನ್ನು ತೆರೆಯಬೇಕು ಹಾಗೂ ಕರೆಂಟ್ ಸ್ವಿಚ್ ಆನ್ ಮಾಡಬಾರದು. ಅಲ್ಲದೆ ದೀಪ, ಮೇಣದ ಬತ್ತಿ, ಟಾರ್ಚ್ ಹೊತ್ತಿಸಕೂಡದು.

ಹಾಗೆಯೇ ಬಸ್‌ನಲ್ಲಿ ಪ್ರಯಾಣಿಸುವಾಗ, ಲಿಫ್ಟ್ ಅಥವಾ ಎಲಿವೇಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಾಗ ಗಾಬರಿಯಾಗದೆ ಅಗ್ನಿ ನಂದಕ ಬಳಸಿ, ಅಗ್ನಿಶಾಮಕ ಠಾಣೆಗೆ ದೂರು ನೀಡುವುದರಿಂದ ಅನಾಹುತ ತಪ್ಪಿಸಬಹುದಾಗಿದೆ. ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡರೆ ಕೂಡಲೇ ಮಾಹಿತಿ ನೀಡುವ ಮೂಲಕ ಪ್ರಾಣಿ-ಪಕ್ಷಿ, ಸಸ್ಯ ಸಂಪತ್ತನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ವಾರಭವಿಷ್ಯ



5.03.2023 ರಿಂದ 11.03.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ಕಟಕ, ಸಿಂಹ, ಕನ್ಯಾ ತುಲಾ, ಕುಜ-ವೃಷಭ, ಬುಧ-ಕುಂಭ, ಗುರು-ಮೀನ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.




ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ಆಲೋಚನೆ ಅದೆಷ್ಟೇ ಚೆನ್ನಾಗಿರಬಹುದು, ಆದರೆ 'ಗ್ರಹಾಧೀನಂ ಜಗತ್ಸರ್ವಂ' ಎಲ್ಲ ಅವನ ಆಣತಿಯಂತಲೇ ನಡೆಯುವುದು. ಈ ವಾರ ನಿಮಗೆ ಟ್ರೈನ್ ಹೋದ ಮೇಲೆ ಟಿಕೆಟ್ ಕೊಂಡ ಅನುಭವ ವೇದ್ಯವಾಗುವುದು. ಕೈಗೆ ಹಣ ಬರುತ್ತದೆ. ಆದರೆ ಅದು ಬಿದಿರು ಎಲೆ ಮೇಲೆ ಬಿದ್ದಂತೆ ಕ್ಷಣಿಕ. ಆರೋಗ್ಯ ಕಾಪಾಡಿಕೊಳ್ಳಿ, ವಿಷಾಹಾರಗಳಿಂದ ಜಾಗೃತರಾಗಿರಿ. ವಾರಾಂತ್ಯಕ್ಕೆ ಸುಖ, ಸಂತೋಷ ಪ್ರಾಪ್ತಿ.

ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ-4.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಕಷ್ಟ-ಸುಖಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ನಿಮ್ಮ ಬಹು ದಿನಗಳ ಆಸೆ ಈಡೇರುವುದು. ಅನಿರೀಕ್ಷಿತ ಶುಭ ವಾರ್ತೆಯೊಂದು ಬರುವುದು. ವಾರಾಂತ್ಯಕ್ಕೆ ಶುಭ ಚಂದ್ರನಿಂದ ಫ್ಯಾನ್ಸಿ ಸ್ಟೋರ್ ವ್ಯಾಪಾರಿಗಳಿಗೆ, ಬ್ಯೂಟಿ ಪಾರ್ಲರ್ ನಡೆಸುವವರಿಗೆ ಉತ್ತಮ ಆದಾಯವಾಗುವುದು. ಮನೆಯಲ್ಲಿ ಸಣ್ಣ ಪುಟ್ಟ ಕಲಹಗಳು ಉಂಟಾದೀತು, ಅದನ್ನೇ ಬೆಟ್ಟ ಮಾಡಲು ಹೋಗದಿರಿ.

ಶ್ರೀ ತ್ರಿಪುರ ಸುಂದರೀ ದರ್ಶನ. ಶುಭ ಸಂಖ್ಯೆ-5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಏನಾದರೂ ಸಾಧಿಸಬೇಕೆಂದಿದ್ದರೆ ಇಂದೇ ನಿರ್ಧರಿಸಿ, ನಿಮ್ಮ ಮುಂದಿನ ಹಾದಿ ಸುಗಮವಾಗಿದೆ. ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಕಂಡು ಬರಲಿದೆ. ನಿವೇಶನ, ವಾಹನ ಹೊಂದುವ ಕನಸು ನನಸಾಗಲಿದೆ. ಬಾಳ ಸಂಗಾತಿ ಹುಡುಕುತ್ತಿದ್ದರೆ ಸಫಲರಾಗುವಿರಿ. ಹಲವರಿಗೆ ವಿದೇಶ ಪ್ರಯಾಣದ ಯೋಗವಿದೆ. ಲೇಖಕರಿಗೆ, ಕಲಾವಿದರಿಗೆ ಸರ್ಕಾರದಿಂದ ಪ್ರಶಸ್ತಿ ದೊರೆಯುವ ಸಾಧ್ಯತೆ ಇದೆ.

ಶ್ರೀ ನಿಮಿಷಾಂಬ ದರ್ಶನ, ಶುಭ ಸಂಖ್ಯೆ-2



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ನಿಮ್ಮಲ್ಲಿರುವ ನಿಜವಾದ ಸಾಮರ್ಥ್ಯದ ಪರೀಕ್ಷಾ ಕಾಲ ಬಂದಿದೆ. ದೈವವನ್ನು ನಂಬಿ ಮುಂದುವರೆಯಿರಿ. ಈಜಿ ಪಾರಾಗುವ ಪ್ರಯತ್ನವೂ ಇರಲಿ. ವ್ಯಾಪಾರ, ವ್ಯವಹಾರಗಳು ಚೆನ್ನಾಗಿಯೇ ನಡೆಯುವುದು. ಮನೆಯಲ್ಲಿ ದೇವತಾ ಕಾರ್ಯ, ಮಂಗಳ ಕಾರ್ಯಗಳು ನಡೆದೀತು. ಸರ್ಕಾರಿ ಕಚೇರಿ ಕೆಲಸಗಳು ತೆವಳುತ್ತಾ ಸಾಗಲಿದೆ. ವಾರಾಂತ್ಯಕ್ಕೆ ಬಂಧು ಜನರ ಆದಾರಾತಿಥ್ಯಕ್ಕೆ ಹೆಚ್ಚಿನ ಹಣ ವ್ಯಯವಾಗುವುದು. ಸ್ನಾಯು ಸೆಳೆತ ಕಾಡಬಹುದು.

ಶ್ರೀಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-9.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಶಾಂತಿ, ಸಮಾಧಾನ ಬೇರೆಲ್ಲೋ ಸಿಗುವಂಥದಲ್ಲ. ಮನೆಯಲ್ಲಿ ಒಳ್ಳೆಯ ವಾತಾವರಣವನ್ನು ನಾವೇ ನಿರ್ಮಿಸಬೇಕಾಗುತ್ತದೆ. ವಾರ ಮಧ್ಯೆ ಧಾರಾಳ ಧನಾಗಮವಾಗುವುದು. ಇದಕ್ಕೆ ಅನ್ಯರ ನೆರವು ದೊರೆಯುವುದು. ಕೈಗೆ ಬಂದ ಹಣ ಸದ್ವಿನಿಯೋಗವಾಗುವಂತೆ ಎಚ್ಚರವಹಿಸಿ. ಸಹೋದರರ ಜೊತೆಗಿನ ಕಲಹಗಳು ನಿಮ್ಮನ್ನು ಕಂಗಾಲುಗೊಳಿಸಬಹುದು. ಮನೆಯಲ್ಲಿ ಎಲ್ಲರನ್ನೂ ಪ್ರೀತಿ ಗೌರವಗಳಿಂದ ಕಾಣಿ.

ಶ್ರೀ ನಾರಾಯಣ ಸ್ತುತಿ, ಶುಭ ಸಂಖ್ಯೆ-3.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಆಸೆಯನ್ನಿಟ್ಟುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಸಮಸ್ಯೆಗಳು ಸೃಷ್ಟಿಯಾದಲ್ಲಿ ಅದಕ್ಕೊಂದು ಪರಿಹಾರ ಇದ್ದೇ ಇರುತ್ತದೆ. ಕೃಷಿಕರಿಗೆ ಹಾಗೂ ಗೋವು ಪಾಲಕರಿಗೆ ಒಳ್ಳೆಯ ಲಾಭವಾಗುವುದು. ಸಿಮೆಂಟ್, ಕಬ್ಬಿಣ ವ್ಯಾಪಾರಿಗಳಿಗೆ ಉತ್ತಮ ವರಮಾನ ಆಗಲಿದೆ. ಬೃಹತ್ ಉದ್ಯಮಿಗಳಿಗೆ ರಫ್ತು ವ್ಯಾಪಾರದಲ್ಲಿ ಹೆಚ್ಚಳವಾಗುವುದು. ಅಪ್ರಾಮಾಣಿಕ ನಡೆಯಿಂದ ತೊಂದರೆಗೆ ಸಿಲುಕುವಿರಿ. ಆತುರದ ವಾಹನ ಚಾಲನೆ ಗಂಡಾಂತರಕ್ಕೆ ಆಹ್ವಾನ ಕೊಟ್ಟಂತೆ. **ಅಸಹಾಯಕರಿಗೆ ಅನ್ನದಾನ ಮಾಡಿ.**

ಶುಭ ಸಂಖ್ಯೆ-4.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ಒಳ್ಳೆಯ ಪ್ರಯತ್ನಗಳಿಗೆ ಒಳ್ಳೆಯ ಫಲ ದೊರೆಯುವುದು. ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ಹರ್ಷ, ಮನೋಲ್ಲಾಸಗಳು, ಮುತ್ತು, ಹವಳ, ನೂತನ ವಸ್ತ್ರ ಖರೀದಿ. ಟ್ರಾವೆಲ್ ಏಜೆನ್ಸಿಗಳಿಗೆ ಹಾಗೂ ಕೇಟರಿಂಗ್ ಉದ್ಯಮಿಗಳಿಗೆ ಹೇರಳ ಧನ ಲಾಭವಿದೆ. ವಾರದ ಕಡೆಗೆ ಕೊಂಚ ಉದ್ವೇಗಕ್ಕೆ ಒಳಗಾಗುವಿರಿ. ಒತ್ತಡಗಳಿಂದ ಹೊರ ಬರಲು ಧರ್ಮಕ್ಷೇತ್ರ ಸಂದರ್ಶನ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-7.



ಮಕರ (ಬೋ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಮಸ್ಯೆಗಳನ್ನು ನಿಭಾಯಿಸುವ ಶಕ್ತಿ ನಿಮಗಿದೆ. ಬದಲಾವಣೆ ಜೀವನದ ಲಕ್ಷಣ. ಸಾಡೇಸಾತಿ ಮುಗಿದಿಲ್ಲ. ನಿರೀಕ್ಷಿತ ಹಣ ಕೈಗೆ ಬಂದರೂ ನಿಮಿಷಾರ್ಧದಲ್ಲಿ ಖಾಲಿಯಾಗುತ್ತದೆ. ಮನೆಯಲ್ಲಿ ಒಡಕುಗಳು ಉಂಟಾಗಬಹುದು. ನೀವು ತಾಳ್ಮೆ ಸಮಾಧಾನಗಳಿಂದ ಇರಬೇಕು. ವಾರಾಂತ್ಯಕ್ಕೆ ಆಪ್ತೇಷ್ಟರ ಮಿಲನದಿಂದ ಸಂತಸ. 'ಪಾರ್ಟಿ'ಗಳು ಲಕ್ಷ್ಮಣರೇಖೆ ದಾಟದಿರಲಿ. ಮಂಡಿ ನೋವು, ಕೀಲು ನೋವು ಕಾಡಿಸುವುದು.

ಶ್ರೀಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-8.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ಹೊಸ ಹುರುಪಿನಿಂದ ಕಾಲಯಾಪನೆ ಆಗುವುದು. ಇಷ್ಟ ಬಂಧು ಜನರ ಮಿಲನದಿಂದ ಹರುಷದ ಸಮಯ. ಲಯ ಕಳೆದುಕೊಂಡಿದ್ದ ಜೀವನಕ್ಕೆ ಗುರುಹಿರಿಯರ ಮಾರ್ಗದರ್ಶನ ದೊರಕುತ್ತದೆ. 'ಗಾಳಿ ಬಂದಾಗ ತೂರಿಕೋ' ಎಂಬಂತೆ ದೊರೆತ ಅವಕಾಶ ಕೈ ತಪ್ಪದದಂತೆ ಜಾಣ್ಮೆ ವಹಿಸಿ. ಅನಿರೀಕ್ಷಿತ ಪರ್ಯಟನಗಳು ಉಂಟಾಗಬಹುದು, ದುಡುಕಿನ ಡ್ರೈವಿಂಗ್‌ನಿಂದ ಸಂಕಷ್ಟಕ್ಕೆ ಸಿಲುಕುವಿರಿ.

ಶ್ರೀ ಸೂರ್ಯ ನಮಸ್ಕಾರ, ಶುಭ ಸಂಖ್ಯೆ-9.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಭವಿಷ್ಯದಲ್ಲಿ ಸದವಕಾಶಗಳು ಸೃಷ್ಟಿಯಾಗುವ ಸಮಯ ಬಂದಿದೆ. 'ಮನಸ್ಸಿದ್ದರೆ ಮಾರ್ಗ'. ಹಿರಿಯರ, ಅನುಭವಿಗಳ ಮಾರ್ಗದರ್ಶನ ಪಡೆದರೆ ಉತ್ತಮ. ವಾರ ಮಧ್ಯೆ ಧನ-ಧಾನ್ಯ ಸಂಗ್ರಹ. ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವರು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಸರ್ಕಾರಿ ನೌಕರರಿಗೆ ಬಡ್ತಿಯೊಂದಿಗೆ ವರ್ಗಾವಣೆ ಆಗುವ ಸಾಧ್ಯತೆ. ಪುಣ್ಯ ಕ್ಷೇತ್ರ ಭೇಟಿಯೊಂದಿಗೆ ವಾರಕ್ಕೆ ತೆರೆ.

ಶ್ರೀ ಸಮೀವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-6.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

'ಕಾಯಕವೇ ಕೈಲಾಸ', ಯಾವ ಕೆಲಸವೂ ನಿಮ್ಮ ಘನತೆಗೆ ಕುಂದು ತರುವುದಿಲ್ಲ. ಸಪ್ತಮ ಸ್ಥಿತ ಗುರು ನಿಮ್ಮ ಗೆಲುವಿಗೆ ಮುನ್ನುಡಿ ಬರೆಯಲಿದ್ದಾನೆ. ಗುರುಹಿರಿಯರ ಪಾತ್ರವಿಲ್ಲದೆ ನೀವು ಯಶಸ್ವಿಯಾಗಲು ಸಾಧ್ಯವಿಲ್ಲ. ವಾರಮಧ್ಯೆ ಮನೋಕಾರಕ ಚಂದ್ರ ನಿಮ್ಮ ರಾಶಿಗೆ ಪ್ರವೇಶಿಸುವುದರಿಂದ ಧೈರ್ಯ ಹಾಗೂ ಆತ್ಮವಿಶ್ವಾಸ ವೃದ್ಧಿಸುವುದು. ಬಾಳ ಸಂಗಾತಿ ಅರಸುವವರಿಗೆ ಶುಭ ವಾರ್ತೆ ದೊರೆಯಲಿದೆ. ಅಜೀರ್ಣ ಸಮಸ್ಯೆ ಕಾಡಬಹುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-1.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ನಿಮ್ಮ ಸ್ವಂತದ್ದಿರಲಿ, ಕಚೇರಿಯ ವ್ಯವಹಾರವಾಗಿರಲಿ ನೀವು ನಿರ್ಲಕ್ಷಿಸಿದರೆ ನಿಮಗೆ ಆರ್ಥಿಕ ನಷ್ಟ ಉಂಟಾಗಬಹುದು. ಆತುರದಲ್ಲಿ ಏನನ್ನೂ ಮಾಡದಿರಿ. ನಿಮ್ಮ ಸ್ನೇಹಪರ ವ್ಯಕ್ತಿತ್ವದ ಮೂಲಕ ಹೊಸ ಸ್ನೇಹಿತರನ್ನು ಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವಾರದ ಕಡೆಗೆ ಚಂದ್ರಗ್ರಹದ ಶುಭ ದೃಷ್ಟಿಯಿಂದ ನಿಮ್ಮ ಮಾತೃಶ್ರೀಯವರ ಸಹಾಯದಿಂದ ನಿಂತು ಹೋಗಿದ್ದ ಕಾರ್ಯ ಮರುಚಾಲನೆ ಹೊಂದಲಿದೆ. ನಿಮ್ಮಲ್ಲಿ ಸಕಾರಾತ್ಮಕತೆ ವೃದ್ಧಿಸುವುದು.

ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ-3.

ಮಕ್ಕಳ ಚಿತ್ರಕಥೆ

'ಓದಲು ನನಗೆ ಸಾಧ್ಯವಾಗುತ್ತಿಲ್ಲಾ... ಓದಿ ಹೇಳುತ್ತೀಯಾ...?'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ :- ಕೆಲವೊಮ್ಮೆ ಇಂತಹ ಘಟನೆಗಳು ನಮ್ಮ ಜೀವನದಲ್ಲೂ ಆಗಬಹುದು. ಸಾರ್ವಜನಿಕ ಸಭೆ-ಸಮಾರಂಭಗಳಲ್ಲೋ, ಕಚೇರಿ-ಕ್ಲಬ್ಬುಗಳಲ್ಲೋ, ಮನೆಗಳಲ್ಲೋ... ನಮ್ಮನ್ನು ಆಹ್ವಾನಿಸಿದವರು ನಮ್ಮನ್ನು ಸರಿಯಾಗಿ ಗುರುತಿಸದೆ ಹೋಗಬಹುದು. ಅಥವಾ ನಮ್ಮ ಪರಿಚಯ ಸರಿಯಾಗಿ ಮಾಡಿಕೊಡದೇ ಇರಬಹುದು. ಆಗ ನಮಗೆ ಅವಮಾನವಾಯಿತೆಂದು ಭಾವಿಸಬೇಕಾಗಿಲ್ಲ. ಅವಶ್ಯಕತೆ ಇದ್ದರೆ ಅವರಿಗೆ ನಮ್ಮ ಸರಿಯಾದ ಮಾಹಿತಿಯನ್ನು ಕೊಡಬಹುದು ಅಥವಾ ನಕ್ಕು ಸುಮ್ಮನಾಗಿಬಿಡಬಹುದು. ತಪ್ಪು ಗ್ರಹಿಕೆಯಿಂದ ಆಕಾಶವೇನು ಕಳಚಿ ಬೀಳುವುದಿಲ್ಲಾ...!".

ಭ್ರಷ್ಟ ಸಿದ್ದರಾಮಯ್ಯ, ಡಿಕೆಶಿಯಿಂದ ಭ್ರಷ್ಟಾಚಾರದ ಬಗ್ಗೆ ಭಾಷಣ

ತಿ.ನರಸೀಪುರ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾಜಿ ಸಚಿವ ಈಶ್ವರಪ್ಪ ವಾಗ್ದಾಳಿ

ತಿ.ನರಸೀಪುರ, ಮಾ.4– ಅರ್ಕಾವತಿ ಡಿ–ನೋಟಿಫಿಕೇಷನ್‌ನಲ್ಲಿ 8 ಸಾವಿರ ಕೋಟಿ ಲೂಟಿ ಮಾಡಿದ ಸಿದ್ದರಾಮಯ್ಯ ಹಾಗೂ ತಿಹಾರ್ ಜೈಲಿಗೆ ಹೋಗಿ ಬೇಲ್ ಮೇಲೆ ಹೊರಬಂದಿರುವ ಡಿ.ಕೆ.ಶಿವಕುಮಾರ್ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಯಾವುದೇ ನೈತಿಕ ಹಕ್ಕಿಲ್ಲ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ನಡೆಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ರಥಯಾತ್ರೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಂ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಶಾಸಕರ ಮನೆಯಲ್ಲಿ ಸಿಕ್ಕ ಹಣದ ಬಗ್ಗೆ ಭ್ರಷ್ಟಾಚಾರದ ಆರೋಪ ಮಾಡಿ ಮುಖ್ಯಮಂತ್ರಿಗಳ ಮನೆಗೆ ಕಾಂಗ್ರೆಸ್ ಪಕ್ಷದವರು ಮುತ್ತಿಗೆ ಹಾಕುತ್ತಿದ್ದಾರೆ. ಶಾಸಕರ ಪುತ್ರನ ಮನೆಯಲ್ಲಿ ಸಿಕ್ಕ ಹಣದ ನೂರು ಪಟ್ಟು ಹಣ ಸಿಕ್ಕಿ, ತಿಹಾರ್ ಜೈಲಿಗೆ ಹೋಗಿ ಬಂದ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಮುತ್ತಿಗೆ ಕಾರ್ಯಕ್ರಮ ನಡೆಯುತ್ತಿದೆ. ಇವರೇ ಭ್ರಷ್ಟಾಚಾರದ ಕಿಂಗ್‌ಗಳು, ಅವರ ನೇತೃತ್ವದಲ್ಲಿ ಮುತ್ತಿಗೆ ಹಾಕಲಾಗುತ್ತಿದೆ. ನ್ಯಾಯಮೂರ್ತಿ ಕೆಂಪಣ್ಣ ಅವರು ಅರ್ಕಾವತಿ ಡಿ–ನೋಟಿಫಿಕೇಷನ್‌ನಲ್ಲಿ ಸಿದ್ದರಾಮಯ್ಯ 8 ಸಾವಿರ ಕೋಟಿ ರೂ. ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ವರದಿ ನೀಡಿದ್ದಾರೆ. ಭ್ರಷ್ಟಾಚಾರ ಮಾಡಿದವರೇ ಇಂದು ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿದ್ದಾರೆ. ಇದನ್ನು ರಾಜ್ಯದ ಜನತೆ ಗಮನಿಸುತ್ತಿದ್ದು, ಚುನಾವಣೆಯಲ್ಲಿ ಇವರ ಬಂಡವಾಳ ಬಯಲಾಗಲಿದೆ ಎಂದರು.

ಹೆಚ್ಚು ಸ್ಥಾನ ಬಿಜೆಪಿಗೆ: ಮುಂಬರುವ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಈಶ್ವರಪ್ಪ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಮುಖ್ಯಮಂತ್ರಿ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ ಅವರಂತ ಧೀಮಂತ ನಾಯಕರ ನಾಯಕತ್ವ ಬೇರೆ ಯಾವುದೇ ಪಕ್ಷಕ್ಕಿಲ್ಲ. ಕಾರ್ಯಕರ್ತರ ಸಂಘಟನೆ, ಬೂತ್ ಮಟ್ಟದ ಸಂಘಟನೆ, ಪೇಜ್ ಮಟ್ಟದ ದೊಡ್ಡ ಸಂಘಟನೆ ಕ್ಷೇತ್ರದಲ್ಲಿದೆ. ಯಾವುದೇ ಜಾತಿ ಭೇದವಿಲ್ಲದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಭಿವೃದ್ಧಿ ಕಾರ್ಯಗಳನ್ನು ಮಾಡಿವೆ. ಅಲ್ಲದೇ ಭಾರತೀಯ ಸಂಸ್ಕೃತಿ ಉಳಿಸಿದ ಏಕೈಕ ಪಕ್ಷ ನಮ್ಮದಾಗಿದ್ದು, ಈ ಎಲ್ಲಾ ಅಂಶಗಳಿಂದ ಈ ಬಾರಿ ರಾಜ್ಯದಲ್ಲಿ ಸಂಪೂರ್ಣ ಬಹುಮತ ಪಡೆಯುವ ಜೊತೆಗೆ, ಹಳೇ ಮೈಸೂರು ಭಾಗದಲ್ಲೂ ಹೆಚ್ಚಿನ ಸ್ಥಾನ ಪಡೆಯುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮಗೂ ಗೊತ್ತಿಲ್ಲ: ಕ್ಷೇತ್ರದ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ ಉತ್ತರಿಸಿದ ಈಶ್ವರಪ್ಪ 224 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳು ಯಾರಾಗಲಿದ್ದಾರೆ ಎಂಬುದು ನಮಗೆ ಪ್ರಶ್ನೆಯಾಗಿದೆ. ಕೇಂದ್ರದ ನಾಯಕರು ಇಡೀ ರಾಜ್ಯದ ಸರ್ವೇ ಮಾಡಿ, ಕಾರ್ಯಕರ್ತರ ಅಭಿಪ್ರಾಯ, ಸಾರ್ವಜನಿಕ ಅಭಿಪ್ರಾಯ ಹಾಗೂ ಸಾಮಾನ್ಯ ಜನರ ಅಭಿಪ್ರಾಯ ಸಂಗ್ರಹಿಸಿ ಗೆಲ್ಲುವ ಅಭ್ಯರ್ಥಿ ಆಯ್ಕೆ ಮಾಡಲಿದ್ದಾರೆ ಎಂದರು.

ಸುಳ್ಳು ಹೇಳುವುದಕ್ಕೆ ನೋಬೆಲ್ ಪ್ರಶಸ್ತಿ: ಸಮಾವೇಶಕ್ಕೆ ಜನರನ್ನು ಕರೆತರಲು 500 ರೂ. ಕೊಡಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವ ಮಾತು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆದರೂ ನಾನು ಮಾತೇ ಆಡಿಲ್ಲ ಎನ್ನುತ್ತಾರೆ. ಇದಕ್ಕೆ ನಾನೇನು ಹೇಳಲಿ. ಈ ವಿಷಯಕ್ಕೆ ಸುಳ್ಳಿನ ಸರದಾರ ಸಿದ್ದರಾಮಯ್ಯರಿಗೆ ನೋಬೆಲ್ ಪ್ರಶಸ್ತಿ ಕೊಡಬೇಕು ಎಂದು ವ್ಯಂಗ್ಯವಾಡಿದರು.

ಇದಕ್ಕೂ ಮೊದಲು ಮೈಸೂರಿನಿಂದ ಆಗಮಿಸಿದ ಜನಸಂಕಲ್ಪ ಯಾತ್ರೆಗೆ ಪಟ್ಟಣದ ಬಿಂದಿಗೆ ಫ್ಯಾಕ್ಟರಿ ಬಳಿ ಅದ್ದೂರಿ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಕಳಸ ಹೊತ್ತ ಸುಮಂಗಲಿಯರು, ವೀರಭದ್ರ ಕುಣಿತ ಮತ್ತಿತರ ಕಲಾತಂಡಗಳು ಯಾತ್ರೆಗೆ ಮೆರಗು ತಂದವು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ರೋಡ್ ಷೋ ನಡೆಸಲಾಯಿತು. ಸಾವಿರಾರು ಮಂದಿ ಕಾರ್ಯಕರ್ತರು ಬೈಕ್ ರ‍್ಯಾಲಿ ನಡೆಸಿದರೆ, ರಥ ಯಾತ್ರೆಯಲ್ಲಿ ಭಾಗವಹಿಸಿದ್ದ ಮುಖಂಡರಿಗೆ ಜೆಸಿಬಿಯಲ್ಲಿ ಪುಷ್ಪವೃಷ್ಟಿಗೈದು ಸ್ವಾಗತಿಸಲಾಯಿತು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ, ಸಂಸದ ಬಿ.ವೈ. ರಾಘವೇಂದ್ರ, ಮಾಜಿ ಶಾಸಕರಾದ ಭಾರತಿ ಶಂಕರ್, ಸಿ.ರಮೇಶ್, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಸಾಮ್ರಾಟ್, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳ ಸೋಮಶೇಖರ್, ಕ್ಷೇತ್ರ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಲೋಕೇಶ್, ಮಹೇಶ್, ಮಾಧ್ಯಮ ವಕ್ತಾರ ಸೋಸಲೆ ಶಿವಕುಮಾರ್, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್, ಜಿಲ್ಲಾ ಕಾರ್ಯಕಾರಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಬಸವರಾಜು, ಜಿಲ್ಲಾ ಉಪಾಧ್ಯಕ್ಷ ದಾಸಯ್ಯ, ಸಿದ್ದರಾಜು, ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಯುವ ಮೋರ್ಚಾ ಅಧ್ಯಕ್ಷ ಶಿವು, ಮುಗೂರು ಹರೀಶ್ ಮತ್ತಿತರರಿದ್ದರು.



ರಾಹುಲ್ ಗಾಂಧಿ ಹೇಳಿಕೆಗೆ ತಿರುಗೇಟು

ಜನತಂತ್ರ ವ್ಯವಸ್ಥೆ ಅಪಾಯದಲ್ಲಿದೆ ಎಂದು ರಾಹುಲ್ ಗಾಂಧಿ ಹೇಳಿಕೆಗೆ ತಿರುಗೇಟು ನೀಡಿದ ಈಶ್ವರಪ್ಪ, ರಾಹುಲ್ ಗಾಂಧಿಯವರು ಅವರ ಕುಟುಂಬ, ಕಾಂಗ್ರೆಸ್ ಪಕ್ಷ ನೋಡಿ ಹೇಳಿಕೆ ನೀಡಿರಬಹುದು. ಆದರೆ ನಮ್ಮ ಪಕ್ಷ ಪ್ರಜಾಪ್ರಭುತ್ವ ಉಳಿಸುವ ಪಕ್ಷವಾಗಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ ಎಂದ ಅವರು ರಾಹುಲ್ ಗಾಂಧಿ, ಸಿದ್ದರಾಮಯ್ಯ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಜನರ ಭಾವನೆ ನೋಡುವುದಿಲ್ಲ. ಹಾಗಾಗಿ ಕಾಂಗ್ರೆಸ್ ಪಕ್ಷ ನಿರ್ನಾಮವಾಗುವತ್ತ ಸಾಗಿದೆ. ನರೇಂದ್ರ ಮೋದಿಯವರು ವಿಶ್ವ ನಾಯಕರು. ಅಂತಹವರನ್ನು ನರಹಂತಕ ಎನ್ನುತ್ತಾರೆ. ಬೊಮ್ಮಾಯಿ, ಯಡಿಯೂರಪ್ಪರನ್ನು ಏಕವಚನದಲ್ಲಿ ಕರೆಯುತ್ತಾರೆ. ಒಬ್ಬ ಮಾಜಿ ಮುಖ್ಯಮಂತ್ರಿ ಯಾದವರಿಗೆ ಬಳಸುವ ಭಾಷೆಯಲ್ಲಿ ಹಿಡಿತವಿಲ್ಲ. ರಾಜ್ಯದ ಜನತೆ ಎಲ್ಲವನ್ನು ಗಮನಿಸುತ್ತಿದ್ದು ಈಶಾನ್ಯ ರಾಜ್ಯಗಳ ಚುನಾವಣೆಯಲ್ಲಿ ಬಂದ ಫಲಿತಾಂಶ ಕರ್ನಾಟಕದಲ್ಲಿಯೂ ಬರಲಿದೆ ಎಂದರು.

ಇಂದು ಜೆಡಿಎಸ್ ಬೃಹತ್ ಸಮಾವೇಶ



ಹುಣಸೂರು, ಮಾ.4– ನಗರದ ಸಾಯಿಬಾಬಾ ದೇವಸ್ಥಾನ ಮುಂಭಾಗದ ಮೈದಾನದಲ್ಲಿ ಮಾ.5ರಂದು ಬೆಳಗ್ಗೆ 11 ಗಂಟೆಗೆ ಹುಣಸೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ ನಡೆಯಲಿದೆ ಎಂದು ಜೆಡಿಎಸ್ ಉಪಾಧ್ಯಕ್ಷ ದೇವರಾಜ ಒಡೆಯರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ವಹಿಸಲಿದ್ದಾರೆ. ಸಮಾವೇಶದಲ್ಲಿ ಶಾಸಕರಾದ ಕೆ.ಮಹದೇವು, ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಭಾಗವಹಿಸಲಿದ್ದಾರೆ. ಸಮಾವೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದ್ದು, ತಾಲೂಕಿನ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ನಗರಸಭೆ, ಜಿಪಂ, ತಾಪಂ, ಗ್ರಾಪಂನ ಚುನಾಯಿತ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಧರ್ಮಾಪುರ ಜಿಪಂ ಸದಸ್ಯ ಸುರೇಂದ್ರ, ಮಾಜಿ ಸದಸ್ಯರಾದ ಹೆಚ್.ಎಂ.ಫಜಾಲುಲ್ಲಾ, ರಂಜಿತಾ ಚಿಕ್ಕಮಾದು, ವಾಸು, ಅರ್.ಸ್ವಾಮಿ, ಫಯಾಜ್ ಉಪಸ್ಥಿತರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಪುರ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಸದಸ್ಯ ಪಿ.ಕೆ.ಶಿವರಾಜು, ಗ್ರಾಪಂ ಮಾಜಿ ಅಧ್ಯಕ್ಷೆ ಸೌಭಾಗ್ಯ, ಶ್ರೀನಿವಾಸ್, ಸದಸ್ಯರಾದ ವೃಷಬೇಂದ್ರ ಶಂಕರೇಗೌಡ, ಜಾವೀದ್, ಪಿಡಿಓ ಸೌಮ್ಯ, ಯಜಮಾನರಾದ ಶಿವಾಜಪ್ಪ, ಮಹದೇವಪ್ಪ, ಮುದ್ರಾಮಪ್ಪ, ರುದ್ರಸ್ವಾಮಿ, ನಿಂಗಣ್ಣಸ್ವಾಮಿ ಮತ್ತಿತರರಿದ್ದರು.

ಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

ವಿಜಯಸಂಕಲ್ಪ ಯಾತ್ರೆಯಲ್ಲಿ ಸಂಸದ ಬಿ.ವೈ. ರಾಘವೇಂದ್ರ ಕರೆ



ಸರಗೂರು, ಮಾ.4– ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಹಿಂದುಳಿದ ತಾಲೂಕು ಹೆಚ್.ಡಿ.ಕೋಟೆಯಲ್ಲೂ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಕಾರ್ಯಕರ್ತರಿಗೆ ಸಂಸದ ಬಿ.ವೈ.ರಾಘವೇಂದ್ರ ಕರೆ ನೀಡಿದರು.

ಪಟ್ಟಣದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಹೀಗಾಗಿ ತಾಲೂಕಿನ ಅಭಿವೃದ್ಧಿಗಾಗಿ ಈ ಬಾರಿ ಜನತೆ ಬಿಜೆಪಿಗೆ ಆಶೀರ್ವಾದ ಮಾಡುವ ಮೂಲಕ ಇತಿಹಾಸ ನಿರ್ಮಿಸಬೇಕು. ಆ ಮೂಲಕ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಗೆ ತಕ್ಕಪಾಠ ಕಲಿಸಬೇಕು ಎಂದರು.

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಿ, ಪ್ರಪಂಚವೇ ಮೋದಿಯವರ ಬೆನ್ನಿಗಿದ್ದು, ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಲು ಕಾರ್ಯಕರ್ತರು ಕ್ಷೇತ್ರದ ಮನೆ ಮನೆಗೆ ತೆರಳಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಮೋದಿಯಂತಹ ಮಹಾನ್ ನಾಯಕನನ್ನು ವಿರೋಧಿಸುವವರು ಇಬ್ಬರೇ. ಒಂದು ಪಾಕಿಸ್ತಾನ ಮತ್ತೊಬ್ಬರು ಸಿದ್ದರಾಮಯ್ಯ. ಆದ್ದರಿಂದ ನಾವೆಲ್ಲ ಸೇರಿ ಸಿದ್ದರಾಮಯ್ಯನವರನ್ನು ರಾಜಕೀಯವಾಗಿ ನಿರ್ನಾಮ ಮಾಡಬೇಕು. ಜೊತೆಗೆ ಕಾಶಿ ವಿಶ್ವನಾಥ ಮತ್ತು ಮಥುರಾ ದೇವಾಲಯಗಳಲ್ಲಿ ಅರ್ಧ ದೇವಾಲಯಗಳನ್ನು ಕೆಡವಿ ಮಸೀದಿಗಳನ್ನು ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಅವುಗಳನ್ನು ತೆರವು ಮಾಡಿ ಅಲ್ಲಿ ಮಂದಿರಗಳನ್ನು ನಿರ್ಮಿಸಲಾಗುವುದು ಎಂದರು.

ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಮಾತನಾಡಿದರು. ಇದಕ್ಕೂ ಮುನ್ನ ಗಣ್ಯರು ಪಟ್ಟಣದ ಪಡುವಲು ಬಿಡಗಲು ವಿರಕ್ತ ಮಠಕ್ಕೆ ಭೇಟಿ ನೀಡಿ ಮಹದೇವ ಸ್ವಾಮೀಜಿಗಳ ಆಶೀರ್ವಾದ ಪಡೆದರು. ನಂತರ ಸಂತೆ ಮಾಸ್ತಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಸಾವಿರಾರು ಕಾರ್ಯಕರ್ತರು ಬೈಕ್ ರ‍್ಯಾಲಿ, ವೀರಗಾಸೆ, ಚಂಡೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮಾಜಿ ಸಿಎಂ ಯಡಿಯೂರಪ್ಪ ಸಂಸದ ರಾಘವೇಂದ್ರ ಅವರ ಭಾವಚಿತ್ರ ಹಾಗೂ ಬಿಜೆಪಿ ಬಾವುಟ ಹಿಡಿದು ಮೋದಿಗೆ ಜೈಕಾರ ಕೂಗುತ್ತಾ ಪಟ್ಟಣದ 2ನೇ ಮುಖ್ಯರಸ್ತೆಯಲ್ಲಿ ಸಾಗಿ ಬಸವೇಶ್ವರ ವೃತ್ತ, ಚಿಕ್ಕದೇವಮ್ಮ ವೃತ್ತ, ಬಸ್ ನಿಲ್ದಾಣ ಮೂಲಕ ಹಾದು ಕೆಇಬಿ ಕಚೇರಿ ಎದುರು ಯಾತ್ರೆ ಸಮಾಪ್ತಿಗೊಳಿಸುವ ಮೂಲಕ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯನ್ನು ಯಶಸ್ವಿಗೊಳಿಸಿದರು.

ಈ ವೇಳೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ತಾಲೂಕು ಅಧ್ಯಕ್ಷ ಗುರುಸ್ವಾಮಿ, ಟಿಕೆಟ್ ಆಕಾಂಕ್ಷಿಗಳಾದ ಎಂ.ಅಪ್ಪಣ್ಣ, ಡಾ.ಹೆಚ್.ವಿ.ಕೃಷ್ಣಸ್ವಾಮಿ, ಮುಖಂಡರಾದ ವೆಂಕಟಸ್ವಾಮಿ, ಲಕ್ಷ್ಮಣ್, ನಂದೀಶ್, ನಾಗರಾಜರಾಮ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ, ಸದಸ್ಯರಾದ ದಿವ್ಯಾ, ವೀರೇಶ್, ನೂರಾಳಸ್ವಾಮಿ, ಸುನಂದರಾಜ್, ಮಂಜುಳ, ಸಿ.ಕೆ.ಗಿರೀಶ್, ವಿವೇಕ್, ಚೆನ್ನಪ್ಪ, ಸತೀಶ್ ಬಹದ್ದೂರ್, ಮಂಜುನಾಥ್, ಶಿವರಾಜು, ನಾಗರಾಜು, ಚಂದ್ರಮೌಳಿ, ಮೈಲಾರಿ, ಮಂಜು, ಶ್ರೀರಾಮುಲು, ಮಹೇಶ್, ದೀಪು ಬಂಡಾರಿ, ಗೋಕುಲ್ ಹಾಗೂ ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಇಂದು ಕನಕ ಪಥ ಕೃತಿ ಬಿಡುಗಡೆ



ಹುಣಸೂರು, ಮಾ.4– ಸಮನ್ವಯ ವಿಚಾರ ವೇದಿಕೆ ಮತ್ತು ಕಾವೇರಿ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯ ದಲ್ಲಿ ಮಾ.5ರಂದು ಬೆಳಗ್ಗೆ 10.30ಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಜೆ.ಮಹದೇವ್ ಕಲ್ಲುಣಿಕೆ ರಚಿಸಿರುವ ಕನಕಪಥ ಕೃತಿ ಬಿಡುಗಡೆ ಸಮಾರಂಭ ನಡೆಯಲಿದೆ.

ಕನಕ ಪಥ ಕೃತಿಯನ್ನು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಬಿಡುಗಡೆಗೊಳಿಸಲಿದ್ದು, ಹೆಚ್.ಪಿ.ಮಂಜುನಾಥ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ.ಪಿ.ಎಸ್.ಲೋಹಿತ್, ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ, ಸಂವಿಧಾನ ಚಿಂತಕ ಹಾಗೂ ವಿಶ್ರಾಂತ ಪ್ರಾಂಶುಪಾಲ ಮಹೇಶಾರಾಧ್ಯ, ಟ್ಯಾಲೆಂಟ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ನವೀನ್ ರೈ, ಪಿಡಿಓ ಜೆ.ಕೆಂಚೇಗೌಡ ಭಾಗವಹಿಸಲಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಲಿಗ್ರಾಮ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್‌ನಿಂದ ಬಿ++ ಗ್ರೇಡ್

ಸಾಲಿಗ್ರಾಮ, ಮಾ.4– ನ್ಯಾಷನಲ್ ಅಸೆಸ್‌ಮೆಂಟ್ ಅಂಡ್ ಅಕ್ರಿಡಿಟೇಷನ್ ಕೌನ್ಸಿಲ್ (ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ) ರಚಿತ ಕಾರ್ಯಕಾರಿ ಸಮಿತಿ ಇತ್ತೀಚೆಗೆ ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ನಂತರ, ಏಳು ಅಂಕದೊಂದಿಗೆ ಬಿ++ ಗ್ರೇಡ್ ನೀಡಿದೆ. ಈ ಮಾನ್ಯತಾ ಪತ್ರವು 5 ವರ್ಷಗಳ ವಾಯಿದೆ ಹೊಂದಿದೆ. ಕಾಲೇಜಿಗೆ ಬಿ++ ಗ್ರೇಡ್ ಲಭಿಸಿದ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಸಂಭ್ರಮಾಚರಣೆ ನಡೆಸಲಾಯಿತು. ಈ ವೇಳೆ ಶಾಸಕ ಸಾ.ರಾ.ಮಹೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ದೇಶ, ರಾಜ್ಯ ಗೆದ್ದಾಯಿತು ಇನ್ನು ವರುಣಾ ಕ್ಷೇತ್ರ ಗೆಲ್ಲಬೇಕಿದೆ...!

- ಇಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಸಂಕಲ್ಪ ಮಾಡುವಂತೆ ಕಾರ್ಯಕರ್ತರಿಗೆ ಸಂಸದ ಬಿ.ವೈ.ರಾಘವೇಂದ್ರ ಕರೆ
- ಸಿದ್ದರಾಮಯ್ಯ ಎಲ್ಲೇ ಸೋತರೂ ಮತ್ತೊಂದು ಕ್ಷೇತ್ರ ಹುಡುಕಿಕೊಳ್ತಾರೆ: ಈಶ್ವರಪ್ಪ ಲೇವಡಿ

ವರುಣಾ ಕ್ಷೇತ್ರ, ಮಾ.4– ಭಾರತೀಯ ಜನತಾ ಪಕ್ಷ ದೇಶ ಗೆದ್ದಿದೆ. ರಾಜ್ಯ ಗೆದ್ದಿದೆ. ಈಗ ವರುಣಾ ಕ್ಷೇತ್ರ ಗೆಲ್ಲಬೇಕಿದೆ. ಕ್ಷೇತ್ರ ಗೆಲ್ಲಲು ಕಾರ್ಯಕರ್ತರು ಸಂಕಲ್ಪ ಮಾಡುವಂತೆ ಸಂಸದ ಬಿ.ವೈ.ರಾಘವೇಂದ್ರ ಕರೆ ನೀಡಿದರು. ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಿನಾರು ಗ್ರಾಮದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಮೋದಿ ನೇತೃತ್ವದ ಸರ್ಕಾರ, ರಾಜ್ಯದಲ್ಲಿ ಬೊಮ್ಮಾಯಿ ನೇತೃತ್ವದಲ್ಲಿ ಸರ್ಕಾರಗಳು ಜನಹಿತಕ್ಕಾಗಿ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮವಾಗಿ ಕೆಲಸ ಮಾಡುತ್ತಿವೆ. ಬಿಜೆಪಿ ದೇಶ ಗೆದ್ದಿದೆ. ರಾಜ್ಯವನ್ನು ಗೆದ್ದಿದೆ. ಆದರೆ ವರುಣಾ ಕ್ಷೇತ್ರ ಗೆಲ್ಲಲಾ ಗಿಲ್ಲ. ಹೀಗಾಗಿ ಈ ಬಾರಿ ಕ್ಷೇತ್ರವನ್ನು ಬಿಜೆಪಿ ತೆಕ್ಕೆಗೆ ಪಡೆಯಲು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಕ್ಷೇತ್ರದಲ್ಲಿ ಉತ್ತಮ ಅಭ್ಯರ್ಥಿ ಕಣಕ್ಕಿಳಿಸುವ ಕಾರ್ಯಕರ್ತರ ಒತ್ತಾಯವನ್ನು ಪಕ್ಷ ಪರಿಗಣಿಸಲಿದ್ದು, ಸೂಕ್ತ ಅಭ್ಯರ್ಥಿ ನೀಡುವ ಕೆಲಸವನ್ನು ಮೋದಿ ಮಾಡಲಿದ್ದಾರೆ ಎಂದರು.

ಮೋದಿ ನೇತೃತ್ವದಲ್ಲಿ ದೇಶ ಕಟ್ಟಲು ನಾವೆಲ್ಲ ಹೊರಟಿರುವುದು ಹೆಮ್ಮೆಯ ಸಂಗತಿ. ಪ್ರಪಂಚದ ಎಲ್ಲಾ ದೇಶಗಳು ಆರ್ಥಿಕವಾಗಿ ಜರ್ಝರಿತವಾಗಿದ್ದ ವೇಳೆ ಅಂದರೆ ಶ್ರೀಲಂಕಾ, ನೇಪಾಳದಲ್ಲಿ ಒಂದು ಕೆಜಿ ಅಕ್ಕಿಗೆ 1 ಸಾವಿರ ರೂ.ಗಳಿದ್ದಾಗ, ಇದೇ ಅಕ್ಕಿಗಾಗಿ ಪಾಕಿಸ್ತಾನದಲ್ಲಿ ಕೊಲೆಗಳೇ ನಡೆಯುತ್ತಿದ್ದ ಸಂದರ್ಭ ದೇಶದ ಪ್ರತಿಯೊಬ್ಬರಿಗೂ 10 ಕೆಜಿ ಅಕ್ಕಿಯನ್ನು ಉಚಿತ ವಾಗಿ ಕೊಡುತ್ತಿರುವ ಧೀಮಂತ ನಾಯಕರಾಗಿ ನರೇಂದ್ರ ಮೋದಿ ಹೊರಹೊಮ್ಮಿದ್ದಾರೆ. ದೇಶಕ್ಕೆ ಅನ್ನ ಕೊಡುವ ರೈತ ಸ್ವಾಭಿಮಾನದಿಂದ ಬದುಕಬೇಕೆಂಬ ಉದ್ದೇಶದಿಂದ ಕೃಷಿ ಸಮ್ಮಾನ್ ಯೋಜನೆಯಡಿ ರೈತರ ಖಾತೆಗೆ ವಾರ್ಷಿಕ 10 ಸಾವಿರ ರೂ.ಗಳನ್ನು ಜಮೆ ಮಾಡುವ ಯೋಜನೆ ಜಾರಿಗೆ ತಂದಿದ್ದು ಮೋದಿ ಮತ್ತು ಯಡಿಯೂರಪ್ಪನವರು. ವರುಣಾ ಕ್ಷೇತ್ರದ 25 ಸಾವಿರ ಕುಟುಂಬ ಇಂದು ಯೋಜನೆಯ ಪ್ರಯೋಜನ ಪಡೆಯುತ್ತಿವೆ. ಇಲ್ಲಿ ಬಿಜೆಪಿ ಶಾಸಕರಿಲ್ಲ ಎಂಬ ಕಾರಣಕ್ಕೆ ಮೋದಿಯವರು ಕ್ಷೇತ್ರದ ಜನತೆ ಕೈಬಿಟ್ಟಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ, ಕಾಂಗ್ರೆಸ್, ಜೆಡಿಎಸ್ ಎಂಬ ಭೇದಭಾವ ಮಾಡದೇ ಎಲ್ಲರಿಗೂ ಯೋಜನೆ ಅನುಕೂಲ ಕಲ್ಪಿಸಿದ್ದಾರೆ ಎಂದರು.

ಮುಂದಿನ ವರ್ಷದಿಂದ ಮಾಜಿ ಸಿಎಂ ಯಡಿಯೂರಪ್ಪ ಜಾರಿಗೆ ತಂದ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯಡಿ ಕ್ಷೇತ್ರದ 20 ಸಾವಿರ ಕುಟುಂಬಗಳ ಬ್ಯಾಂಕ್ ಖಾತೆಗಳಿಗೆ ತಲಾ ಒಂದು ಲಕ್ಷ ರೂ. ಜಮಾ ಮಾಡುವ ಪ್ರಕ್ರಿಯೆ ಆರಂಭವಾಗಲಿದೆ. ಹಾಗೆಯೇ ಮುಖ್ಯಮಂತ್ರಿ ಬೊಮ್ಮಾಯಿಯವರು ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾಸಿರಿ ಯೋಜನೆಯಡಿ 500 ಕೋಟಿ ರೂ. ಮೀಸಲಿಟ್ಟಿದ್ದು, ಮತ್ತಷ್ಟು ಯೋಜನೆಗಳ ಜಾರಿಗೆ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕಿದೆ. ಈ ನಿಟ್ಟಿನಲ್ಲಿ ವರುಣಾ ಕ್ಷೇತ್ರದ ಮತದಾರರು ಒಗ್ಗಟ್ಟಾಗಿ ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಸಂಕಲ್ಪ ಮಾಡುವಂತೆ ಮನವಿ ಮಾಡಿದರು.

ಇದಕ್ಕೂ ಮುನ್ನಾ ತಿ.ನರಸೀಪುರದಿಂದ ಬಂದ ಯಾತ್ರೆಗೆ ಮೂಡಹಳ್ಳಿ ಸರ್ಕಲ್‌ನಲ್ಲಿ ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಳ್ಳಲಾಯಿತು. ತಮಟೆ, ಡೊಳ್ಳುಕುಣಿತ, ವೀರಭದ್ರ ಕುಣಿತ ಹಾಗೂ ಪುಷ್ಪವೃಷ್ಟಿಗೈದು ನಾಯಕರಿಗೆ ಸ್ವಾಗತ ಕೋರಲಾಯಿತು. ಮೂಡಹಳ್ಳಿಯಿಂದ ಹದಿನಾರು ಗ್ರಾಮದವರೆಗೆ ಜನಸಂಕಲ್ಪಯಾತ್ರೆ ಬಸ್‌ನಲ್ಲಿ ಮುಖಂಡರು ತೆರಳಿದರು.

ಈ ವೇಳೆ ಟಿಕೆಟ್ ಆಕಾಂಕ್ಷಿಗಳಾದ ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಜಿಲ್ಲಾ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ, ದೇವನೂರು ಪ್ರತಾಪ್, ಶರತ್ ಪುಟ್ಟಬುದ್ದಿ, ತೋಟದಪ್ಪ ಬಸವರಾಜು, ಕುಪ್ಪರವಳ್ಳಿ ಶಿವಣ್ಣ, ಮಂಗಳ ಸೋಮಶೇಖರ್, ಮಮತಾ ಶಿವಪ್ರಸಾದ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ವರುಣಾ ಕ್ಷೇತ್ರದ ಅಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್, ಮೈಮುಲ್ ನಿರ್ದೇಶಕ ಎಸ್.ಸಿ. ಅಶೋಕ್, ಕಾರ್ಯದರ್ಶಿ ರಂಗುನಾಯಕ್, ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣ ಶೆಟ್ಟಿ, ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಎಂ.ಮಹದೇವಯ್ಯ, ಉಪಾಧ್ಯಕ್ಷ ಆಲಗೂಡು ಮಂಜು, ಹೊರಳಿ ನಾಗೇಂದ್ರ, ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪ, ಭೈರಾಪುರ ಬಾಲು, ಕಿರಗಸೂರು ಮಹದೇವಸ್ವಾಮಿ ಸೇರಿದಂತೆ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.



ಈ ಬಾರಿ ವರುಣಾದಲ್ಲಿ ಇತಿಹಾಸ ಸೃಷ್ಟಿಸಬೇಕಿದೆ

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮಾತನಾಡಿ, ಈ ಬಾರಿ ಚುನಾವಣೆಯಲ್ಲಿ ವರುಣಾದಲ್ಲಿ ಇತಿ ಹಾಸ ಸೃಷ್ಟಿಸಬೇಕಿದೆ. ಸಿದ್ದರಾಮಯ್ಯ ಅಥವಾ ಅವರ ಮಗನೇ ಸ್ಪರ್ಧಿಸಲಿ. ಅವರನ್ನು ಸೋಲಿಸಿ ಮನೆಗೆ ಕಳುಹಿಸುವ ಕೆಲಸ ಮಾಡಲು ಮತದಾರರು ಮುಂದಾಗಬೇಕು. ಕಳೆದ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಿಂತ ಸಿದ್ದರಾಮಯ್ಯ ಸೋತರು. ಈಗ ಮತ್ತೆ ಅವರನ್ನು ಚಾಮುಂಡೇ ಶ್ವರಿ ಕ್ಷೇತ್ರದಲ್ಲೇ ನಿಲ್ಲುವಂತೆ ಕೇಳುತ್ತಿದ್ದಾರೆ. ಆದರೆ ಸಿದ್ದರಾಮಯ್ಯರಿಗೆ ಕಾರ್ಯಕರ್ತರೇ ತಮ್ಮನ್ನು ಸೋಲಿಸಿದ್ದಾರೆಂಬ ಸತ್ಯ ಗೊತ್ತಾಗಿದೆ. ಹಾಗಾಗಿ ಕಳೆದ ಬಾರಿ ಸೋಲಿಸಿದ್ದ ನೀವು ನನ್ನನ್ನು ಮತ್ತೆ ಗೆಲ್ಲಿಸುತ್ತೀರಾ ಎನ್ನುತ್ತಿದ್ದಾರೆ. ಹಾಗಾಗಿ ಸಿದ್ದರಾಮಯ್ಯ, ಕಾರ್ಯಕರ್ತರು ತಮ್ಮನ್ನು ಸೋಲಿಸಿದ್ದರೆಂಬ ಸತ್ಯ ಒಪ್ಪಿಕೊಂಡಿದ್ದಾರೆ. ಇನ್ನು ಡಿ.ಕೆ.ಶಿವಕುಮಾರ್ ಸೋಲಿಸದೇ ಇರುತ್ತಾರೆಯೇ ಎಂದು ವ್ಯಂಗ್ಯವಾಡಿದರು.

ಕ್ಷೇತ್ರದಲ್ಲಿ ಉತ್ತಮ ಅಭ್ಯರ್ಥಿ ಹಾಕಲಾಗುತ್ತದೆ ಎಂದು ಭರವಸೆ ನೀಡಿದ ಅವರು, ಗೆಲ್ಲುವ ಬಿಜೆಪಿ ಅಭ್ಯರ್ಥಿಯನ್ನು ನಾವು ಹಾಕಿದರೆ ಸಿದ್ದರಾಮಯ್ಯರನ್ನು ಎಲ್ಲಿಗೆ ಕಳಿಸೋಣ ಎನ್ನುತ್ತಿದ್ದಂತೆ ನೆರೆದಿದ್ದ ಜನರು ಮನೆಗೆ ಎಂದು ಕೂಗಿದಾಗ, ಸುಮ್ಮನೆ ಮನೆಗೆ ಹೋಗುವ ರಕ್ತ ಸಿದ್ದರಾಮಯ್ಯರದ್ದಲ್ಲ. ಅವರನ್ನು ಸೋಲಿಸಿಯೇ ಮನೆಗೆ ಕಳುಹಿಸಿ ಎಂದು ಕರೆಕೊಟ್ಟರು. ಸೋತ ನಂತರವೂ ಮತ್ತೊಂದು ಮನೆ ಹುಡುಕುವ ಜಾಯಮಾನ ಸಿದ್ದರಾಮಯ್ಯ ಅವರದ್ದು ಎಂದ ಈಶ್ವರಪ್ಪ, ಚಾಮುಂಡೇಶ್ವರಿಯಲ್ಲಿ ಸೋತು, ಬಾದಾಮಿಗೆ ಹೋದರು. ಈಗ ಕೋಲಾರಕ್ಕೆ ಹೋಗುತ್ತೇನೆ. ವರುಣಾಕ್ಕೆ ಬರುತ್ತೇನೆ ಎನ್ನುತ್ತಿದ್ದಾರೆ. ಇಲ್ಲಿ ಸೋತ ನಂತರ ಮತ್ತೊಂದು ಮನೆ ಹುಡುಕುತ್ತಾರೆ ಎಂದರು.

ವರುಣಾ ಕ್ಷೇತ್ರಕ್ಕೆ ಅಭ್ಯರ್ಥಿ ಹಾಕುವ ವಿಚಾರದಲ್ಲಿ ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ನೀಡಲಾಗುತ್ತದೆ. ಉತ್ತಮ ಅಭ್ಯರ್ಥಿ ಆಯ್ಕೆಗೆ ಯಾವ ನಾಯಕರಿಗೆ ಹೇಳಬೇಕೋ ಹೇಳೋಣ. ನಿಮ್ಮ ಭಾವನೆಗಳನ್ನು ಚುನಾವಣಾ ಸಮಿತಿ ಮುಂದೆ ಹೇಳೋಣ ಎನ್ನುತ್ತಿದ್ದಂತೆ ಸದಾನಂದರಿಗೆ ಟಿಕೆಟ್ ನೀಡುವಂತೆ ಕಾರ್ಯಕರ್ತರು ಘೋಷಣೆ ಕೂಗಿದರು. ಇದಕ್ಕೆ ಪ್ರತಿಕ್ರಿಯಿಸಿದ ಈಶ್ವರಪ್ಪ ಸದಾನಂದರಿಗೆ ಕೊಡಲು ಶಿಫಾರಸ್ಸು ಮಾಡೋಣ ಆದರೆ ಸಿದ್ದರಾಮಯ್ಯರ ಬಳಿ ರೊಕ್ಕ ಎಷ್ಟಿದೆ ಗೊತ್ತಾ ಎನ್ನುತ್ತಿದ್ದಂತೆ ನೆರೆದಿದ್ದ ಕಾರ್ಯಕರ್ತರು ಅವರ ಬಳಿ ಎಷ್ಟೇ ದುಡ್ಡಿದ್ದರೂ, ಅವರನ್ನು ಸೋಲಿಸುತ್ತೇವೆ. ಆದರೆ ಸದಾನಂದರಿಗೆ ಟಿಕೆಟ್ ನೀಡಿ ಎಂದು ಕೂಗತೊಡಗಿದರು. ನಿಮ್ಮ ಭಾವನೆಗಳನ್ನು ಖಂಡಿತ ಚುನಾವಣಾ ಸಮಿತಿ ಮುಂದೆ ಇಟ್ಟು ಈ ಬಾರಿ ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡಲು ಕೋರಲಾಗುತ್ತದೆ ಎಂದರು.


ಬಿಜೆಪಿಯೇ ಭರವಸೆ
ಚಾಮರಾಜ ವಿಧಾನ ಸಭಾ ಕ್ಷೇತ್ರ ಮೈಸೂರು
ವಿಜಯ ಸಂಕಲ್ಪ ಯಾತ್ರೆ
ವಿಜಯ ಸಂಕಲ್ಪ ಯಾತ್ರೆಗೆ ಸ್ವಾಗತ
ಬಿಜೆಪಿಯೇ ಭರವಸೆ
ದಿನಾಂಕ 05 -03-23 ಭಾನುವಾರ ಮಧ್ಯಾಹ್ನ 4 ಗಂಟೆಗೆ
ಸ್ಥಳ :- ಮಹಾರಾಜ ಕಾಲೇಜು ಮೈದಾನ ಮೈಸೂರು
ಎಲ್ ನಾಗೇಂದ್ರ
ಶಾಸಕರು ಚಾಮರಾಜ ಕ್ಷೇತ್ರ


ವಿಜಯ ಸಂಕಲ್ಪ ಯಾತ್ರೆ
ನರಸಿಂಹರಾಜ ವಿಧಾನಸಭಾ ಕ್ಷೇತ್ರ, ಮೈಸೂರು.
ಸರ್ವರಿಗೂ ಸುಸ್ವಾಗತ
ಸ್ಥಳ : ಆರ್.ಎಸ್.ನಾಯ್ಡುನಗರ, ಮೈಸೂರು.
ದಿ : 05–03–23ನೇ ಭಾನುವಾರ, ಬೆ. : 9–00ಕ್ಕೆ